# ಸಂಸದೀಯ ವ್ಯವಹಾರಗಳ ಇಲಾಖೆ
# ಮತ್ತು
# ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ (ಡಿ.ಎಸ್.ಇ.ಆರ್.ಟಿ)

## ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿರುವ ಜಿಲ್ಲಾ
## ಮತ್ತು
## ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ 2018–2019

## ಮಾಹಿತಿ ಕೈಪಿಡಿ 2018–19

**ಸಂವ್ಯಶಾಇ 03 ಯು.ಸಂ.ಸ್ಪ 2018**

**ಸಂಸದೀಯ ವ್ಯವಹಾರಗಳ ಇಲಾಖೆ**
**ಮತ್ತು**
**ಸಾರ್ವಜನಿಕ ಶಿಕ್ಷಣ ಇಲಾಖೆ**

# ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿರುವ ಜಿಲ್ಲಾ ಮತ್ತು ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ 2018–2019

**ಮಾಹಿತಿ ಕೈಪಿಡಿ 2018–19**

**ಸಂವ್ಯಶಾಇ 03 ಯು.ಸಂ.ಸ್ಪ 2018**

# ವಿಷಯಸೂಚಿ


| ಕ್ರಮ ಸಂಖ್ಯೆ | ವಿಷಯಗಳು | ಪುಟ ಸಂಖ್ಯೆ |
|---|---|---|
| 1 | ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವು ಯೋಜನೆ – ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯದ ಪತ್ರ | 1–2 |
| 2 | ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ವ್ಯವಸ್ಥೆಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರಗಳು/ ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವು ಯೋಜನೆ | 3–9 |
| 3 | ಪ್ರಮಾಣ ಪತ್ರಗಳು (ಅನುಬಂಧ I ರಿಂದ III ) | 10–13 |
| 4 | 2018–19ನೇ ಸಾಲಿನಲ್ಲಿ ಪ್ರೌಢ ಶಾಲೆ ವಿದ್ಯಾರ್ಥಿಗಳಿಗೆ ಜಿಲ್ಲಾ ಮತ್ತು ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ ಕಾರ್ಯಕ್ರಮಗಳನ್ನು ನಡೆಸುವ ಬಗ್ಗೆ ಸಂಸದೀಯ ವ್ಯವಹಾರಗಳ ಇಲಾಖೆಯು ನೀಡಿರುವ ಮಾರ್ಗಸೂಚಿಗಳು | 14–15 |
| 5 | ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯ ಮಾರ್ಗಸೂಚಿಗಳು | 16–21 |
| 6 | ಮಾದರಿ ಕಾರ್ಯಕ್ರಮಗಳು (ಅನುಬಂಧ–ಎ) | 22 |
| 7 | ಕಡ್ಡಾಯ ಹಾಗೂ ಐಚ್ಛಿಕ ವಿಷಯಗಳ ಪಟ್ಟಿ (ಅನುಬಂಧ–ಬಿ) | 23 |
| 8 | ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸಿದ ಶಾಲೆಗೆ ಮತ್ತು ಬಹುಮಾನಿತರಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ (ಅನುಬಂಧ IV, V) | 24–25 |
| 9 | ಕರ್ನಾಟಕ ರಾಜ್ಯದ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಡೆಸುವ ಯುವ ಸಂಸತ್ ಸ್ಪರ್ಧೆಗೆ ಪೂರಕವಾಗಿ ಸಂಸತ್ ಕಾರ್ಯಕಲಾಪಗಳ ಬಗೆಗೆ ಕೆಲವು ವಿಶೇಷ ಮಾಹಿತಿಗಳು | 26–29 |
| 10 | ಕರ್ನಾಟಕ ವಿಧಾನ ಸಭೆಯ ಮಾದರಿ ಕಾರ್ಯಕಲಾಪಗಳ ಪಟ್ಟಿ (ಅನುಬಂಧ–VI) | 30–32 |
| 11 | ಕರ್ನಾಟಕ ವಿಧಾನ ಪರಿಷತ್ತಿನ ಮಾದರಿ ಕಾರ್ಯಕಲಾಪಗಳ ಪಟ್ಟಿ | 33 |
| 12 | ಮಾದರಿ ಸಂತಾಪ ಸೂಚನೆಗಳು (ಅನುಬಂಧ – VII) | 34–35 |
| 13 | ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಹಾಗೂ ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳ ಹಾಗೂ ಉತ್ತರಗಳ ಕೆಲವು ಮಾದರಿಗಳು (ಅನುಬಂಧ–VIII) | 36–60 |
| 14 | ಶಾಸನ ರಚನೆ – ಮಾದರಿ ವಿಧೇಯಕ | 61–77 |
| 15 | ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ ನಿಯಮ 324 ರಿಂದ 351ರ ಉದ್ಧೃತ ಭಾಗ (ಅನುಬಂಧ– X) | 78–88 |
| 16 | ತೀರ್ಪುಗಾರರ ಮಾದರಿ ಅಂಕಪಟ್ಟಿ | 89 |
| 17 | ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿದ ಸ್ಪರ್ಧಾರ್ಥಿಗಳ ಪಟ್ಟಿ – (ಶಾಲೆಯ ಹೆಸರು, ಸ್ಪರ್ಧಾರ್ಥಿಗಳ ಹೆಸರು) | 90 |

**ಸಂಖ್ಯೆ: ಎಫ್ 3(3) 2008–ವೈಪಿ**

**ಭಾರತ ಸರ್ಕಾರ**

**ಸಂಸದೀಯ ವ್ಯವಹಾರಗಳ ಮಂತ್ರಾಲಯ**

92, ಸಂಸತ್ ಭವನ,
ನವದೆಹಲಿ – 110001
ದಿನಾಂಕ 12.05.2009

**ಇವರಿಗೆ,**

ಮಾನ್ಯ ಮುಖ್ಯ ಕಾರ್ಯದರ್ಶಿಗಳು,

ಕರ್ನಾಟಕ ಸರ್ಕಾರ,

ಬೆಂಗಳೂರು.

**ಮಾನ್ಯರೆ,**

ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ 'ಯುವ ಸಂಸತ್ ಸ್ಪರ್ಧೆಗಳನ್ನು' ನಡೆಸುವುದಕ್ಕಾಗಿ ರಾಜ್ಯಗಳಿಗೆ/ಕೇಂದ್ರಾಡಳಿತ ಪ್ರದೇಶಗಳಿಗೆ ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವು ಹಣಕಾಸು ನೆರವನ್ನು ಒದಗಿಸುತ್ತಾ ಇದೆ ಎಂಬ ಅಂಶವನ್ನು ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ. 2008ರ ಫೆಬ್ರವರಿ 4–5ನೇ ದಿನಾಂಕಗಳಂದು ಮುಂಬೈನಲ್ಲಿ ನಡೆದ 14ನೇ ಅಖಿಲ ಭಾರತ ಸಚೇತಕರ ಸಮ್ಮೇಳನವು, ಇತರೆ ವಿಷಯಗಳ ಜೊತೆಯಲ್ಲಿ ಸಂಸದೀಯ ವ್ಯವಹಾರಗಳ ಮಂತ್ರಾಲಯವು ಒದಗಿಸುತ್ತಿರುವ ಹಣಕಾಸು ನೆರವಿನ ಪ್ರಮಾಣವನ್ನು ಈ ಮುಂದಿನಂತೆ ಹೆಚ್ಚಿಸತಕ್ಕದ್ದೆಂದು ಶಿಫಾರಸ್ಸು ಮಾಡಿದೆ.

| | | |
|---|---|---|
| (ಎ) | 100ರವರೆಗೆ ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳಿಗೆ | ವರ್ಷಕ್ಕೆ 3 ಲಕ್ಷ ರೂಪಾಯಿಗಳು |
| (ಬಿ) | 100ರಿಂದ 200ರ ನಡುವೆ ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳು | ವರ್ಷಕ್ಕೆ 4 ಲಕ್ಷ ರೂಪಾಯಿಗಳು |
| (ಸಿ) | 200ಕ್ಕೂ ಹೆಚ್ಚು ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳು | ವರ್ಷಕ್ಕೆ 5 ಲಕ್ಷ ರೂಪಾಯಿಗಳು |

(ವಿಧಾನಮಂಡಲಗಳನ್ನು ಹೊಂದಿರದ ಕೇಂದ್ರಾಡಳಿತ ಪ್ರದೇಶಗಳ ಸಂಬಂಧದಲ್ಲಿ ಮಿತಿಯು ಈ ಹಿಂದೆ ಇದ್ದಂತೆಯೇ ಇರತಕ್ಕದ್ದು ಎಂದರೆ, ಪ್ರತಿಯೊಂದು ಕೇಂದ್ರಾಡಳಿತ ಪ್ರದೇಶಕ್ಕೆ ಪ್ರತಿವರ್ಷಕ್ಕೆ 5,00,000/– ರೂಪಾಯಿಗಳು)

ಈ ವಿಷಯವನ್ನು ಭಾರತ ಸರ್ಕಾರವು ಹಣಕಾಸು ಮಂತ್ರಾಲಯದೊಡನೆ ಸಮಾಲೋಚಿಸಿದೆ ಮತ್ತು ಪ್ರಸಕ್ತ ವರ್ಷದಿಂದ ಎಂದರೆ, 2009-2010ರಿಂದ 14ನೇ ಅಖಿಲ ಭಾರತ ಸಚೇತಕರ ಸಮ್ಮೇಳನದಲ್ಲಿ ಶಿಫಾರಸ್ಸು ಮಾಡಿರುವಂತೆ ಹಣಕಾಸು ನೆರವನ್ನು ಹೆಚ್ಚಿಸಲು ತೀರ್ಮಾನಿಸಿದೆ.

2. ಹಣಕಾಸು ನೆರವಿನ ಯೋಜನೆಯ ಒಂದು ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಸ್ಪರ್ಧೆಗಳನ್ನು ನಡೆಸುವಲ್ಲಿ ವಹಿಸಲಾದ ವೆಚ್ಚಗಳನ್ನು ಮರುಸಂದಾಯಕ್ಕಾಗಿ ಪ್ರಸ್ತಾವಗಳನ್ನು ಈ ಮಂತ್ರಾಲಯವು ಕ್ಲೇಮುಗಳ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಳ್ಳುವುದು ಸಾಧ್ಯವಾಗುವಂತೆ ಯೋಜನೆಯ ಅನುಬಂಧ-III ರಲ್ಲಿ ನಿರ್ದಿಷ್ಟಪಡಿಸಲಾದ ನಮೂನೆಯಲ್ಲಿ ಮಾತ್ರವೇ ಈ ಮಂತ್ರಾಲಯಕ್ಕೆ ಕಳುಹಿಸಬೇಕೆಂದು ಕೋರಲಾಗಿದೆ. ಮರುಸಂದಾಯದ ಕ್ಲೇಮನ್ನು ಮಾಡುವಾಗ ಮೂಲ ಓಚರುಗಳು/ಬಿಲ್ಲುಗಳನ್ನು ಈ ಮಂತ್ರಾಲಯಕ್ಕೆ ಒದಗಿಸುವ ಅವಶ್ಯಕತೆ ಇರುವುದಿಲ್ಲ.

3. ಪರಿಷ್ಕೃತ ಹಣಕಾಸು ನೆರವು ಯೋಜನೆಯ ವಿವರಗಳು ಅಧಿಕೃತ ವೆಬ್‌ಸೈಟ್ ಎಂದರೆ, www.mpa.nic.in ನಲ್ಲಿಯೂ ಲಭ್ಯವಿದೆ.

4. ಇದನ್ನು ಸಂಸದೀಯ ವ್ಯವಹಾರಗಳ ಮಂತ್ರಾಲಯದ ಕಾರ್ಯದರ್ಶಿಗಳ ಅನುಮೋದನೆಯೊಡನೆ ಹೊರಡಿಸಲಾಗಿದೆ.

ತಮ್ಮ ವಿಶ್ವಾಸಿ,

ಸಹಿ/-

(ಆರ್.ಸಿ. ಮೊಹಂತಿ)
ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ,
ದೂರವಾಣಿ: 011-23034761
ಫ್ಯಾಕ್ಸ್: 23018220

**ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ಏರ್ಪಡಿಸುವುದಕ್ಕಾಗಿ ರಾಜ್ಯ ಸರ್ಕಾರಗಳು /ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸು ನೆರವು ಯೋಜನೆ.**

## ಪೀಠಿಕೆ

ಶೈಕ್ಷಣಿಕ ಸಂಸ್ಥೆಗಳಲ್ಲಿ ಯುವ ಸಂಸತ್ ಸ್ಪರ್ಧೆಗಳನ್ನು ಏರ್ಪಡಿಸಿ ನಡೆಸುವ ಪರಿಕಲ್ಪನೆ 1962 ರಲ್ಲಿ ಮುಂಬಯಿಯಲ್ಲಿ ನಡೆದ ನಾಲ್ಕನೇ ಅಖಿಲ ಭಾರತ ಸಚೇತಕರ ಸಮ್ಮೇಳನದಲ್ಲಿ ರೂಪ ತಳೆಯಿತು. ಸದರಿ ಸಮ್ಮೇಳನದಲ್ಲಿ ಇತರೆ ವಿಷಯಗಳ ಜೊತೆಗೆ ಈ ಮುಂದಿನ ಶಿಫಾರಸುಗಳನ್ನು ಮಾಡಲಾಯಿತು:–

"ಈ ಸಮಿತಿಯು, ಅಣಕು ಸಂಸತ್ ಕಾರ್ಯಕ್ರಮಗಳನ್ನು ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ಪಂಚಾಯತಿಗಳ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ನಡೆಸಲು ಸರ್ಕಾರವು ಪ್ರೋತ್ಸಾಹಿಸತಕ್ಕದ್ದೆಂದು ಶಿಫಾರಸು ಮಾಡುತ್ತದೆ".

ಮೇಲ್ಕಂಡ ಶಿಫಾರಸುಗಳನ್ನು 1966 ರಲ್ಲಿ ಬೆಂಗಳೂರಿನಲ್ಲಿ ನಡೆದ ಐದನೇ ಅಖಿಲ ಭಾರತ ಸಚೇತಕರ ಸಮ್ಮೇಳನವು ಈ ಮುಂದೆ ಹೇಳಿರುವಂತೆ ಪುನರುಚ್ಚರಿಸಿತು:–

"ಮುಂಬಯಿಯಲ್ಲಿ ನಡೆದ ನಾಲ್ಕನೇ ಅಖಿಲ ಭಾರತ ಸಚೇತಕರ ಸಮ್ಮೇಳನವು, ಜನಪ್ರತಿನಿಧಿ ಸಂಸ್ಥೆಗಳ ಪಾತ್ರದ ಬಗ್ಗೆ ಅರಿವು ಮೂಡಿಸಲು ಗ್ರಾಮ ಪಂಚಾಯತಿಗಳಲ್ಲಿ ಅಣಕು ಸಂಸತ್ ಕಾರ್ಯಕ್ರಮಗಳನ್ನು ನಡೆಸಬೇಕೆಂದು ಶಿಫಾರಸು ಮಾಡಿತ್ತು. ಈ ಶಿಫಾರಸುಗಳನ್ನು ಕೆಲವು ರಾಜ್ಯಗಳಲ್ಲಿ ಜಾರಿಗೆ ತಂದಿರುವುದಿಲ್ಲ ಎಂಬುದನ್ನು ಈ ಸಮ್ಮೇಳನವು ಗಮನಿಸಿದೆ. ಸಮ್ಮೇಳನವು, ಸಂಬಂಧಪಟ್ಟ ರಾಜ್ಯ ಸರ್ಕಾರಗಳು ತಮ್ಮ ತೀರ್ಮಾನಗಳನ್ನು ಮರುಪರಿಶೀಲಿಸುವಂತೆ ಅವುಗಳ ಮನವೊಲಿಸಬೇಕೆಂದು ಪುನರುಚ್ಚರಿಸುತ್ತದೆ."

ಮೇಲ್ಕಂಡ ಶಿಫಾರಸುಗಳಿಗನುಸಾರ, ಸಂಸದೀಯ ವ್ಯವಹಾರಗಳ ಮಂತ್ರಾಲಯವು ಅಣಕು ಸಂಸತ್ (ಈಗ "ಯುವ ಸಂಸತ್") ಸ್ಪರ್ಧೆಯ ಯೋಜನೆಯ ವಿವರಗಳನ್ನು ತಯಾರಿಸಿತು ಮತ್ತು ಅದನ್ನು ಪ್ರಾಯೋಗಿಕ ರೂಪದಲ್ಲಿ ನಡೆಸುವ ಉದ್ದೇಶದಿಂದ ದೆಹಲಿಯ ಪ್ರೌಢ ಶಾಲೆಗಳಲ್ಲಿ ಸ್ಪರ್ಧೆಗಳನ್ನು ಪ್ರಾರಂಭಿಸಲು ತೀರ್ಮಾನಿಸಿತು.

1967 ರಲ್ಲಿ ಸಿಮ್ಲಾದಲ್ಲಿ ಮತ್ತು 1969 ರಲ್ಲಿ ಮದ್ರಾಸಿನಲ್ಲಿ ಅನುಕ್ರಮವಾಗಿ ನಡೆದ ಆರು ಮತ್ತು ಏಳನೇ ಅಖಿಲಭಾರತ ಸಚೇತಕರ ಸಮ್ಮೇಳನದಲ್ಲಿ ಈ ಮುಂದಿನ ಶಿಫಾರಸುಗಳನ್ನು ಮಾಡಲಾಯಿತು:–

"ದೆಹಲಿಯ ಶಾಲೆಗಳಲ್ಲಿ "ಯುವ ಸಂಸತ್" ಕಾರ್ಯಕ್ರಮವನ್ನು ಉತ್ತೇಜಿಸುವುದಕ್ಕಾಗಿ ಸಂಸದೀಯ ವ್ಯವಹಾರಗಳ ಮಂತ್ರಾಲಯವು ಮಾಡಿರುವ ಉತ್ತಮ ಕಾರ್ಯವನ್ನು ಪ್ರಶಂಸಿಸುತ್ತಾ, ಉಳಿದ ರಾಜ್ಯಗಳು ಸಹ ತಮ್ಮ ತಮ್ಮ ರಾಜ್ಯಗಳಲ್ಲಿ ಈ ಯೋಜನೆಯನ್ನು ಅಳವಡಿಸಲು ವ್ಯವಸ್ಥೆಯನ್ನು ಮಾಡತಕ್ಕದ್ದೆಂದು ಸಮ್ಮೇಳನವು ಆಗ್ರಹಪೂರ್ವಕವಾಗಿ ಶಿಫಾರಸು ಮಾಡುತ್ತದೆ. [6ನೇ ಅಖಿಲ ಭಾರತ ಸಚೇತಕರ ಸಮ್ಮೇಳನ]"

"ದೆಹಲಿಯ ಶಾಲೆಗಳಲ್ಲಿ 'ಅಣಕು ಸಂಸತ್' ಯೋಜನೆಯ ಯಶಸ್ವಿ ಅನುಷ್ಠಾನವನ್ನು ಹಾಗೂ ಪ್ರಮುಖ ಸಂಸದರು, ಪತ್ರಿಕಾ ಮಾಧ್ಯಮಗಳು ಮತ್ತು ಶಿಕ್ಷಣ ತಜ್ಞರಿಂದ ಆ ಬಗ್ಗೆ ಬಂದ ವ್ಯಾಪಕ ಮೆಚ್ಚುಗೆಯನ್ನು ಗಮನದಲ್ಲಿಟ್ಟುಕೊಂಡು ಮತ್ತು ರಾಷ್ಟ್ರದಲ್ಲಿ ಸುಭದ್ರ ಸಂಸದೀಯ ಪದ್ಧತಿಯನ್ನು ಅನುಷ್ಠಾನಗೊಳಿಸುವ ದೃಷ್ಟಿಯಿಂದ ಸಮ್ಮೇಳನವು ಈ ಮುಂದಿನ ಶಿಫಾರಸ್ಸುಗಳನ್ನು ಮಾಡುತ್ತದೆ.–

(ಎ)ಸಂಸದೀಯ ವ್ಯವಹಾರಗಳ ಕೇಂದ್ರ ಮಂತ್ರಾಲಯವು ಅನುಸರಿಸಿದ ಮಾದರಿಯನ್ನೇ ಅನುಸರಿಸಿ ಎಲ್ಲಾ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ತಮ್ಮ ತಮ್ಮ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮಕೈಗೊಳ್ಳತಕ್ಕದ್ದು;

(ಬಿ)ಸಂಸದೀಯ ವ್ಯವಹಾರಗಳ ಕೇಂದ್ರ ಮಂತ್ರಾಲಯವು, ಅಗತ್ಯವಿದ್ದಲ್ಲಿ ಹಣಕಾಸು ನೆರವನ್ನು ನೀಡುವ ಮೂಲಕ ಯೋಜನೆಯನ್ನು ಜಾರಿಗೆ ತರಲು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಎಲ್ಲಾ ಬಗೆಯ ಪ್ರೋತ್ಸಾಹಗಳನ್ನು ನೀಡತಕ್ಕದ್ದು; ಮತ್ತು

(ಸಿ) ಸಂಸದೀಯ ವ್ಯವಹಾರಗಳ ಕೇಂದ್ರ ಮಂತ್ರಾಲಯವು, ಯೋಜನೆಯನ್ನು ಈಗಾಗಲೇ ಜಾರಿಗೊಳಿಸಿರುವ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ನಡುವೆ ಅಂತರ್ ರಾಜ್ಯ ಸ್ಪರ್ಧೆಗಳನ್ನು ಸಹ ವ್ಯವಸ್ಥೆಗೊಳಿಸತಕ್ಕದ್ದು. [7ನೇ ಅಖಿಲ ಭಾರತ ಸಚೇತಕರ ಸಮ್ಮೇಳನ]"

7ನೇ ಅಖಿಲ ಭಾರತ ಸಚೇತಕರ ಸಮ್ಮೇಳನವು ಮಾಡಿದ ಮೇಲ್ಕಂಡ ಶಿಫಾರಸುಗಳ (ಬಿ) ಭಾಗದ ಪಾಲನೆಯಲ್ಲಿ, ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವು, ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು

ವ್ಯವಸ್ಥೆಗೊಳಿಸುವುದಕ್ಕಾಗಿ – ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸು ನೆರವು ನೀಡುವುದಕ್ಕಾಗಿ ಈ ಯೋಜನೆಯನ್ನು ರೂಪಿಸಿದೆ.

1. **ಯೋಜನೆಯ ಉದ್ದೇಶ:–** ಪ್ರಜಾಪ್ರಭುತ್ವದ ಬುನಾದಿಯನ್ನು ಭದ್ರಪಡಿಸುವ, ಶಿಸ್ತು, ಇತರರ ಅಭಿಪ್ರಾಯಗಳ ಬಗ್ಗೆ ತಾಳ್ಮೆ ಮುಂತಾದ ಆರೋಗ್ಯಕರ ಗುಣ ವಿಶೇಷಗಳನ್ನು ಮೈಗೂಡಿಸುವ ಮತ್ತು ವಿದ್ಯಾರ್ಥಿ ಸಮುದಾಯದಲ್ಲಿ ಸಂಸತ್ ಕಾರ್ಯ ಕಲಾಪದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ, ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವು, ದೆಹಲಿಯಲ್ಲಿರುವ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ – "ಯುವ ಸಂಸತ್" ನ ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವಂಥ ಮತ್ತು ದೆಹಲಿಯ ಎನ್‌ಸಿಟಿ ಸರ್ಕಾರದ ಶಿಕ್ಷಣ ನಿರ್ದೇಶನಾಲಯವು ಪ್ರಾಯೋಜಿಸಿದಂಥ ಶಾಲೆಗಳ ನಡುವೆ ಪ್ರತಿವರ್ಷ **"ಯುವ ಸಂಸತ್ ಸ್ಪರ್ಧೆ"** ನಡೆಸುತ್ತಾ ಬಂದಿದೆ. ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳು, ಇಂಥವೇ ಸ್ಪರ್ಧೆಗಳನ್ನು ತಮ್ಮ ಮಾನ್ಯತೆ ಪಡೆದ ಶಾಲೆಗಳಲ್ಲಿ ನಡೆಸಲು ಹಣಕಾಸು ನೆರವನ್ನು ನೀಡುವುದೇ ಈ ಯೋಜನೆಯ ಉದ್ದೇಶ.

2. **ಯೋಜನೆಯ ಕಾರ್ಯಾಚರಣೆ:–** ಈ ಯೋಜನೆಯನ್ನು ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಸಾರ್ವಜನಿಕ ಶಿಕ್ಷಣ ನಿರ್ದೇಶಕರ ಸಹಯೋಗದೊಂದಿಗೆ ಸಂಬಂಧಪಟ್ಟ ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಸರ್ಕಾರದ ಸಂಸದೀಯ ವ್ಯವಹಾರಗಳ ಇಲಾಖೆಯ ಮೂಲಕ ನಿರ್ವಹಿಸಲಾಗುವುದು. ಸಂಸದೀಯ ವ್ಯವಹಾರಗಳ ಇಲಾಖೆಯು ಇಲ್ಲದಿರುವ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ, ಯೋಜನೆಯನ್ನು ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ನೇರವಾಗಿ ಕಾರ್ಯಗತಗೊಳಿಸುತ್ತದೆ.

3. **ಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕೆ ಅರ್ಹತೆ:–** ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಮಾನ್ಯತೆ ಪಡೆದ ಎಲ್ಲಾ ಹೈಯರ್ ಸೆಕೆಂಡರಿ ಸಂಸ್ಥೆಗಳು/ಪ್ರೌಢ ಶಾಲೆಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹತೆ ಹೊಂದಿವೆಯೆಂದು ಪರಿಗಣಿಸಬಹುದು. ಭಾಗವಹಿಸುವ ಶಾಲೆಗಳ ಪಟ್ಟಿಯನ್ನು, ಪ್ರತಿವರ್ಷದ ಮಾರ್ಚ್ 31ರೊಳಗೆ ಸಂದರ್ಭಾನುಸಾರ, ಸಂಬಂಧಪಟ್ಟ ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ ಅಥವಾ ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ಅಂತಿಮಗೊಳಿಸುತ್ತವೆ.

4. **ಯುವ ಸಂಸತ್ ಸ್ಪರ್ಧೆಯನ್ನು ನಡೆಸುವ ಅವಧಿ:–** "ಯುವ ಸಂಸತ್ ಸ್ಪರ್ಧೆ" ಯನ್ನು, ಪ್ರತಿವರ್ಷವು ನಡೆಸಲಾಗುವುದು. ಈ ಬಗ್ಗೆ ಸವಿವರ ಕಾರ್ಯಕ್ರಮವನ್ನು ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ರೂಪಿಸತಕ್ಕದ್ದು ಮತ್ತು ವಾರ್ಷಿಕ ಸ್ಪರ್ಧೆಯಲ್ಲಿ ಭಾಗವಹಿಸಲಿರುವ ಸಂಸ್ಥೆಗಳಿಗೆ ಸುತ್ತೋಲೆ ಮೂಲಕ ತಿಳಿಸತಕ್ಕದ್ದು. ಸದರಿ ವಿಷಯವನ್ನು ನವದೆಹಲಿಯ ಭಾರತ ಸರ್ಕಾರದ ಸಂಸದೀಯ ವ್ಯವಹಾರ ಮಂತ್ರಾಲಯಕ್ಕೂ ತಿಳಿಸತಕ್ಕದ್ದು.

5. **ಯುವ ಸಂಸತ್ತಿನಲ್ಲಿ ಭಾಗವಹಿಸುವವರ ಸಂಖ್ಯೆ:–** ಪ್ರತಿಯೊಂದು ಶಾಲೆಯಲ್ಲಿ "ಯುವ ಸಂಸತ್ ಸ್ಪರ್ಧೆಯನ್ನು" ನಡೆಸುವುದಕ್ಕಾಗಿ ಬೇಕಾಗುವ ವಿದ್ಯಾರ್ಥಿಗಳ ಸಂಖ್ಯೆಗೆ ಯಾವುದೇ ಮಿತಿ ಇಲ್ಲ. ಆದಾಗ್ಯೂ, ಅಧಿವೇಶನದ ಅವಧಿಯನ್ನು ಸೀಮಿತಗೊಳಿಸುವುದು ಅಪೇಕ್ಷಣೀಯವಾಗಿರುವ ಕಾರಣ, ಭಾಗವಹಿಸಿರುವ ವಿದ್ಯಾರ್ಥಿಗಳಲ್ಲಿ ಹಲವರು ಸಂಸತ್ತಿನ ಅಧಿವೇಶನದ ಒಂದು ಚಿತ್ರಣವನ್ನು ಮೂಡಿಸುವುದಕ್ಕೆ ಮಾತ್ರವೇ ಸುಮ್ಮನೆ ಕುಳಿತುಕೊಂಡಿರಬೇಕಾಗುತ್ತದೆ ಮಾತ್ರವಲ್ಲದೆ ಅವರಿಗೆ ಮಾತನಾಡುವ ಅಗತ್ಯವಿರುವುದಿಲ್ಲ.

6. **ಯುವ ಸಂಸತ್ತಿನ ಅಧಿವೇಶನದ ಅವಧಿ:–** ಯುವ ಸಂಸತ್ತಿನ ಅಧಿವೇಶನದ ಅವಧಿಯು ಒಂದು ಗಂಟೆ ಅವಧಿಯನ್ನು ಮೀರತಕ್ಕದಲ್ಲ ಮತ್ತು ಇದರಲ್ಲಿ ಸುಮಾರು 20 ನಿಮಿಷಗಳ ಅವಧಿಯನ್ನು ಪ್ರಶ್ನೆಗಳಿಗೆ ಕಾಯ್ದಿರಿಸತಕ್ಕದ್ದು.

7. **ಯುವ ಸಂಸತ್ತಿನ ಅಧಿವೇಶನದಲ್ಲಿಯ ಚರ್ಚೆಯ ವಿಷಯ:–** ಪ್ರಶ್ನೋತ್ತರಗಳಿಗೆ ಅಥವಾ ಇತರ ಚರ್ಚೆಗೆ ಯಾವುದೇ ನಿರ್ದಿಷ್ಟ ವಿಷಯಗಳನ್ನು ಗೊತ್ತುಪಡಿಸಿರುವುದಿಲ್ಲ. ಆದಾಗ್ಯೂ, ಯುವ ಸಂಸತ್ತಿನಲ್ಲಿ ಕೇಳಲಾಗುವ ಪ್ರಶ್ನೆಗಳು, ಕ್ಷೇಮಾಭ್ಯುದಯ ಕಾರ್ಯ ಚಟುವಟಿಕೆಗಳು, ರಾಷ್ಟ್ರದ ರಕ್ಷಣೆ, ಸಾಮಾಜಿಕ ನ್ಯಾಯ, ಸಮಾಜ ಸುಧಾರಣೆಗಳು, ಆರ್ಥಿಕ ಅಭಿವೃದ್ಧಿ, ಮತೀಯ ಸಾಮರಸ್ಯ, ಆರೋಗ್ಯ, ವಿದ್ಯಾರ್ಥಿಗಳಲ್ಲಿ ಶಿಸ್ತು ಮುಂತಾದವುಗಳಿಗೆ ಸಂಬಂಧಿಸಿದ ವಿಷಯಗಳಾಗಿರುವುದು ಅಪೇಕ್ಷಣೀಯ.

8. **ಭಾಷೆ:–** ಭಾಗವಹಿಸುವವರು, ಕನ್ನಡ, ಹಿಂದಿ ಅಥವಾ ಇಂಗ್ಲಿಷ್ ಅಥವಾ ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ನಿರ್ದಿಷ್ಟಪಡಿಸಬಹುದಾದಂಥ ಪ್ರಾದೇಶಿಕ ಭಾಷೆಯಲ್ಲಿ ಮಾತನಾಡಬಹುದು.

9. **ಯುವ ಸಂಸತ್ ನಡೆಯುವ ಸ್ಥಳ:–** ಪ್ರತಿಯೊಂದು ಸಂಸ್ಥೆಯು, ಯುವ ಸಂಸತ್ ಸ್ಪರ್ಧೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ತನ್ನದೇ ಆದ ಕಟ್ಟಡದಲ್ಲಿ ಅಥವಾ ತಾನು ಇಚ್ಛಿಸುವಂಥ ಯಾವುದೇ ಇತರ ಸ್ಥಳದಲ್ಲಿ ನಡೆಸತಕ್ಕದ್ದು. ಸ್ಪರ್ಧೆಯಲ್ಲಿ ಭಾಗವಹಿಸುವ ಸಂಸ್ಥೆಗಳು, ಸಂಬಂಧಪಟ್ಟ ರಾಜ್ಯದ ಸಂಸದೀಯ ವ್ಯವಹಾರಗಳ ಇಲಾಖೆಗೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯಕ್ಕೆ ಚರ್ಚೆಯ ವಿಷಯಗಳ ಮಾಹಿತಿಯೊಂದಿಗೆ ಸ್ಪರ್ಧೆ ನಡಸುವ ಸ್ಥಳದ ವಿವರಗಳನ್ನು ಸ್ಪರ್ಧೆಯ ದಿನಾಂಕಕ್ಕಿಂತ ಹತ್ತು ದಿನಗಳ ಮೊದಲೇ ತಿಳಿಸತಕ್ಕದ್ದು.

10. **ಬಹುಮಾನಗಳು:–** ಈ ಮುಂದಿನ ಬಹುಮಾನಗಳನ್ನು ಇರಿಸಲಾಗಿದೆ:–

(i) ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಸಂಸ್ಥೆಗೆ ಪಾರಿತೋಷಕ (ಸಂಸದೀಯ ಪಾರಿತೋಷಕ).

(ii) ಅರ್ಹತೆಯ ಆಧಾರದ ಮೇಲೆ ಸ್ಪರ್ಧೆಯಲ್ಲಿನ ಉತ್ತಮ ಗುಣಮಟ್ಟದ ಪ್ರದರ್ಶನಕ್ಕಾಗಿ ಮೊದಲ ಐದು ಸ್ಥಾನ ಪಡೆದ ಸಂಸ್ಥೆಗಳಿಗೆ ಟ್ರೋಫಿಗಳು.

(iii) ಪ್ರತಿಯೊಂದು ಸಂಸ್ಥೆಯಿಂದ ಭಾಗವಹಿಸಿರುವ ವಿದ್ಯಾರ್ಥಿಗಳಿಂದ ಆಯ್ಕೆ ಮಾಡಲಾದವರಿಗೆ ಪದಕಗಳು / ಕಪ್ಪುಗಳು/ಪುಸ್ತಕಗಳ ರೂಪದಲ್ಲಿ ವೈಯಕ್ತಿಕ ಬಹುಮಾನಗಳು. ಬಹುಮಾನಗಳ ಒಟ್ಟು ಸಂಖ್ಯೆಯು 80ನ್ನು ಮೀರತಕ್ಕದ್ದಲ್ಲ.

(iv) ಇತರೆ ವೆಚ್ಚಗಳು.

**ಸೂಚನೆ:–** ಸಂಬಂಧಪಟ್ಟ ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ಸ್ಥಳೀಯ ಪರಿಸ್ಥಿತಿಗಳಿಗೆ ಅನುಸಾರವಾಗಿ ಮೇಲಿನ ನಾಲ್ಕು ಬಾಬುಗಳಿಗೆ ಸಂಬಂಧಿಸಿದ ವೆಚ್ಚವನ್ನು ವ್ಯತ್ಯಾಸಗೊಳಿಸಬಹುದು. ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯದಿಂದ ಮರುಸಂದಾಯವಾಗುವ ಗರಿಷ್ಠ ಮೊಬಲಗು ವಾರ್ಷಿಕವಾಗಿ, ಯೋಜನೆಯ 15ನೇ ಕಂಡಿಕೆಯಲ್ಲಿ ಹೇಳಿರುವುದನ್ನು ಮೀರತಕ್ಕದ್ದಲ್ಲ.

ಪಾರಿತೋಷಕವು ಪರ್ಯಾಯ ಪಾರಿತೋಷಕವಾಗಿದ್ದು ಅದನ್ನು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಹೊಂದಿದ ಸಂಸ್ಥೆಯು ಒಂದು ವರ್ಷದವರೆಗೆ ಉಳಿಸಿಕೊಳ್ಳಬಹುದಾಗಿದೆ. ಆದಾಗ್ಯೂ, ಒಂದೇ ಸಂಸ್ಥೆಯು

ಮೂರು ನಿರಂತರ ವರ್ಷಗಳು ಪಾರಿತೋಷಕವನ್ನು ಗೆದ್ದರೆ ಆ ಸಂಸ್ಥೆಯೇ ಅದನ್ನು ಖಾಯಂ ಆಗಿ ಇಟ್ಟುಕೊಳ್ಳುವುದು.

ಅನುಬಂಧ–I ರಲ್ಲಿ ಇದ್ದಂತೆ ಒಂದು ಪ್ರಮಾಣ ಪತ್ರವನ್ನು ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲ ಸಂಸ್ಥೆಗಳಿಗೆ ನೀಡತಕ್ಕದ್ದು.

ಅನುಬಂಧ–2ರಲ್ಲಿ ಇದ್ದಂತೆ ಒಂದು ಪ್ರಮಾಣ ಪತ್ರವನ್ನು ಸ್ಪರ್ಧೆಯಲ್ಲಿ ವೈಯಕ್ತಿಕ ಬಹುಮಾನವನ್ನು ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ನೀಡತಕ್ಕದ್ದು.

11. **ತೀರ್ಪುಗಾರರ ಸಮಿತಿ:–** ಪ್ರತಿಯೊಂದು ಸಂಸ್ಥೆಗಳ ಮೌಲ್ಯ ಮಾಪನಕ್ಕಾಗಿ ತೀರ್ಪುಗಾರರ ಸಮಿತಿಯನ್ನು ಸಂಬಂಧಿಸಿದ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ರಚಿಸತಕ್ಕದ್ದು ಹಾಗೂ ಅದರಲ್ಲಿ ಶಿಕ್ಷಣ ತಜ್ಞರು ವಿಧಾನಸಭೆ/ಪರಿಷತ್ತಿನ ಸದಸ್ಯರು ಮತ್ತು ಸಂಸದೀಯ ಸಂಸ್ಥೆಗಳನ್ನು ನಡೆಸುವುದಕ್ಕೆ ಸಂಬಂಧಪಟ್ಟ ಇತರರನ್ನು ಒಳಗೊಂಡಿರಬಹದು. ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯದ ಒಬ್ಬ ಅಧಿಕಾರಿಯು ಸಮಿತಿಯ ಪದನಿಮಿತ್ತ ಸದಸ್ಯರಾಗಿರತಕ್ಕದ್ದು.

12. **ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸುವಾಗ ಪರಿಗಣಿಸಬೇಕಾದ ಅಂಶಗಳು.–** ಸ್ಪರ್ಧೆಯಲ್ಲಿ ಸಾಧನೆಯನ್ನು ನಿರ್ಧರಿಸುವಾಗ ಸಮಿತಿಯು, ಈ ಮುಂದಿನ ಅಂಶಗಳನ್ನು ಗಮನದಲ್ಲಿಟ್ಟು ಕೊಂಡಿರತಕ್ಕದ್ದು.

13. **ಮರು ಪ್ರದರ್ಶನ:–** ಪ್ರತಿ ವರ್ಷದ ಸ್ಪರ್ಧೆಗಳ ಮುಕ್ತಾಯದ ಸಂದರ್ಭದಲ್ಲಿ ಸಂಬಂಧಿಸಿದ ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ನಿರ್ಧರಿಸಬಹುದಾದ ಸ್ಥಳ ಮತ್ತು ದಿನಾಂಕದಂದು ಸ್ಪರ್ಧೆಯ ಬಹುಮಾನ ವಿತರಣೆಯ ಸಮಾರಂಭದಲ್ಲಿ, ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಸಂಸ್ಥೆಯು ಮತ್ತೊಮ್ಮೆ ಪ್ರದರ್ಶನ ಮಾಡುವಂತೆ ಅಗತ್ಯಪಡಿಸಬಹುದು.

14. **ವರದಿ:–** ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ಸ್ಪರ್ಧೆಯು ಮುಗಿದ ಮೇಲೆ ಅನುಬಂಧ–ಋಋರಲ್ಲಿ ನಿಯಮಿಸಲಾದ ನಮೂನೆಯಲ್ಲಿ, ಅದರಲ್ಲಿ ಮೆರಿಟ್ ಆಧಾರದ ಮೇಲೆ, ಮೊದಲನೇ ಐದು ಸ್ಥಾನ ಪಡೆದ

ಶಾಲೆಗಳೂ ಸೇರಿದಂತೆ ಭಾಗವಹಿಸಿದ ಎಲ್ಲಾ ಶಾಲೆಗಳ ಸಂಖ್ಯೆಯನ್ನು ಸೂಚಿಸಿ ವೈಯಕ್ತಿಕ ಬಹುಮಾನಗಳ ಸಂಖ್ಯೆ ಮುಂತಾದವುಗಳನ್ನು ಒಳಗೊಂಡ ಒಂದು ವರದಿಯನ್ನು ತಯಾರಿಸತಕ್ಕದ್ದು. ವರದಿಯಲ್ಲಿ ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಕ್ಕೆ ಮರುಸಂದಾಯ ಮಾಡಬೇಕಾದ ಮೊಬಲಗನ್ನು ಸ್ಪಷ್ಟವಾಗಿ ಮತ್ತು ಪ್ರತ್ಯೇಕವಾಗಿ ಸೂಚಿಸತಕ್ಕದ್ದು. ವರದಿಯನ್ನು ಸಂಬಂಧಿಸಿದ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ಯೋಜನೆಯ ಪ್ರಭಾರವನ್ನು ಹೊಂದಿರುವ ಇಲಾಖೆಯ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ಪ್ರತಿನಿಧಿಯು ಸಹಿ ಮಾಡತಕ್ಕದ್ದು. ಚೆಕ್ಕನ್ನು ಯಾರಿಗೆ ಸಂದಾಯ ಮಾಡಲು ಬರೆಯಬೇಕು ಮತ್ತು ಲೆಕ್ಕ ಶೀರ್ಷಿಕೆ ಮುಂತಾದ ವಿವರಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.

ನಿಯಮಿಸಲಾದ ನಮೂನೆಯಲ್ಲಿನ ವರದಿಯನ್ನು ಯೋಜನೆಯ ಅಡಿಯಲ್ಲಿ ಹಣಕಾಸಿನ ನೆರವಿನ ಕೋರಿಕೆಯೊಂದಿಗೆ ಸಂಸದೀಯ ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ಇವರಿಗೆ ಕಳುಹಿಸತಕ್ಕದ್ದು.

15. **<u>ವೆಚ್ಚದ ಮರುಸಂದಾಯದ ಪರಿಮಿತಿ</u>:–** ರಾಜ್ಯ/ಕೇಂದ್ರಾಡಳಿತ ಪ್ರದೇಶ ಸರ್ಕಾರಗಳು ಮಾಡಿದ ವಾಸ್ತವಿಕ ವೆಚ್ಚವನ್ನು, ವರದಿಯನ್ನು ಆಧರಿಸಿ ಈ ಮುಂದಿನ ಮಿತಿಗೊಳಪಟ್ಟು ಸಂಸದೀಯ ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರದಿಂದ ಮರುಸಂದಾಯ ಮಾಡಲಾಗುವುದು:

| | |
|---|---|
| (ಎ) 100ರವರೆಗೆ ಸದಸ್ಯರುಗಳನ್ನು ಹೊಂದಿರುವ ವಿಧಾನ ಮಂಡಲಗಳು | ಪ್ರತಿವರ್ಷಕ್ಕೆ 3 ಲಕ್ಷ ರೂಪಾಯಿಗಳು |
| (ಬಿ) 100ರಿಂದ 200ರ ನಡುವೆ ಸದಸ್ಯರುಗಳನ್ನುಹೊಂದಿರುವ ವಿಧಾನಮಂಡಲಗಳು | ಪ್ರತಿವರ್ಷಕ್ಕೆ 4 ಲಕ್ಷ ರೂಪಾಯಿಗಳು |
| (ಸಿ) 200ಕ್ಕೂ ಹೆಚ್ಚಿನ ಸದಸ್ಯರುಗಳನ್ನು ಹೊಂದಿರುವ ವಿಧಾನ ಮಂಡಲಗಳು | ಪ್ರತಿ ವರ್ಷಕ್ಕೆ 5 ಲಕ್ಷ ರೂಪಾಯಿಗಳು |

(ವಿಧಾನಮಂಡಲಗಳನ್ನು ಹೊಂದಿರದ ಕೇಂದ್ರಾಡಳಿತ ಪ್ರದೇಶಗಳ ಸಂಬಂಧದಲ್ಲಿ ಮಿತಿಯು ಪ್ರತಿಯೊಂದು ಕೇಂದ್ರಾಡಳಿತ ಪ್ರದೇಶಕ್ಕೆ ಪ್ರತಿವರ್ಷಕ್ಕೆ 2,00,000/– ರೂಪಾಯಿಗಳು ಆಗಿರುತ್ತದೆ)

*   *   *

**ಕೇಂದ್ರ ಸರ್ಕಾರದ ಮಾದರಿ ಪ್ರಮಾಣ ಪತ್ರಗಳು ಮತ್ತು ಹಣಕಾಸು ನೆರವಿನ ಕೋರಿಕೆ**

ಅನುಬಂಧ – I

**ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ**

**ಸಂಸದೀಯ ವ್ಯವಹಾರಗಳ ಇಲಾಖೆ/ನೋಡಲ್ ಕಚೇರಿ/ನಿರ್ದೇಶನಾಲಯ**

**"ಯುವ ಸಂಸತ್ ಸ್ಪರ್ಧೆ"**

--------------------------------ಶಾಲೆಯ -------------------

ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ ------------------------------ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯ, ನವದೆಹಲಿ ಇವರು -------ನೇ ವರ್ಷದಲ್ಲಿ ನಡೆಸಿದ "ಯುವ ಸಂಸತ್" ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆಂದು ಪ್ರಮಾಣೀಕರಿಸಲಾಗಿದೆ.

**ಸಕ್ಷಮ ಪ್ರಾಧಿಕಾರಿ**

**ಸಂಸದೀಯ ವ್ಯವಹಾರಗಳ ಇಲಾಖೆ/ನೋಡಲ್ ಕಚೇರಿ/**

**ನಿರ್ದೇಶನಾಲಯ.**

**<u>ಅನುಬಂಧ–II</u>**

**<u>ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ</u>**

**<u>ಸಂಸದೀಯ ವ್ಯವಹಾರಗಳ ಇಲಾಖೆ/ನೋಡಲ್ ಕಚೇರಿ/ನಿರ್ದೇಶನಾಲಯ</u>**

....

"**<u>ಯುವ ಸಂಸತ್ ಸ್ಪರ್ಧೆ</u>**"

------------------------------ಶಾಲೆಯ -------------------- ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ ---------------------------------ಅವರಿಗೆ ----------------- ವರ್ಷದಲ್ಲಿ ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯ, ನವದೆಹಲಿ ಇವರ ನೇತೃತ್ವದಲ್ಲಿ ನಡೆಸಲಾದ "ಯುವ ಸಂಸತ್ ಸ್ಪರ್ಧೆ" ಯಲ್ಲಿನ ಅತ್ಯುತ್ತಮ ಸಾಧನೆಗೆ ----------------------------ಬಹುಮಾನವನ್ನು ನೀಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.

**ಸಕ್ಷಮ ಪ್ರಾಧಿಕಾರಿ**

**ಸಂಸದೀಯ ವ್ಯವಹಾರಗಳ ಇಲಾಖೆ/ನೋಡಲ್ ಕಚೇರಿ/**

**ನಿರ್ದೇಶನಾಲಯ.**

## ಅನುಬಂಧ–III

**ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ *ಸರ್ಕಾರವು --------ವರ್ಷದಲ್ಲಿ ನಡೆಸಿದ ಯುವ ಸಂಸತ್ ಸ್ಪರ್ಧೆಯ ವರದಿ–ಹಣಕಾಸು ನೆರವಿನ ಕೋರಿಕೆ.**

| | | | |
|---|---|---|---|
| 1. | ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಹೆಸರು: | | |
| 2. | ಯುವ ಸಂಸತ್ ಸ್ಪರ್ಧೆಯನ್ನು ನಡೆಸಿದ ಮತ್ತು ಮರು ಸಂದಾಯದ ಕ್ಲೇಮನ್ನು ಮಾಡಿದ ಹಣಕಾಸಿನ ವರ್ಷ: | | |
| 3. | ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸಿದ ಶಾಲೆಗಳ ಸಂಖ್ಯೆ: | | |
| 4. | ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ: | | |
| 5. | ಸ್ಪರ್ಧೆಯಲ್ಲಿ ವೈಯಕ್ತಿಕ ಬಹುಮಾನಗಳನ್ನು ಪಡೆದ ವಿದ್ಯಾರ್ಥಿಗಳ ಸಂಖ್ಯೆ: | | |
| 6. | ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಮೊದಲ ಐದು ಸ್ಥಾನಗಳನ್ನು ಗಳಿಸಿದ ಶಾಲೆಗಳ, ಮೆರಿಟ್ ಆಧಾರದ ಮೇಲೆ, ಹೆಸರು ಮತ್ತು ವಿಳಾಸ: | | |
| 7. | ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರವು ಕ್ಲೇಮು ಮಾಡಿದ ಮೊಬಲಗು: | | |
| | **ವೆಚ್ಚಗಳ ಬಾಬು** | **ವೆಚ್ಚ ಮಾಡಿದ ಒಟ್ಟು ಮೊಬಲಗು** | **ಕ್ಲೇಮು ಮಾಡಿದ ಮೊಬಲಗು** |
| | **ವಿಷಯಾಭಿಮುಖ ಶಿಕ್ಷಣಕ್ಕಾಗಿ**<br>1.<br>2. | | |
| | ***ಯುವಸಂಸತ್ ಸ್ಪರ್ಧೆಯ ವ್ಯವಸ್ಥೆಗಾಗಿ***<br>1.<br>2. | | |
| | **ಬಹುಮಾನ ವಿತರಣೆ ಸಮಾರಂಭಕ್ಕಾಗಿ**<br>1.<br>2. | | |
| 8. | ಚೆಕ್ಕನ್ನು ಯಾರ ಹೆಸರಿಗೆ ನೀಡಬೇಕೋ ಅವರ ಹೆಸರು/ವಿಳಾಸ/ದೂರವಾಣಿ ಸಂಖ್ಯೆ ಮತ್ತು ಲೆಕ್ಕ ಶೀರ್ಷಿಕೆಯ ವಿವರ. | | |

1. ಮೇಲೆ ಸೂಚಿಸಿದಂತೆ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ನಡೆಸಲಾಯಿತು.
2. ವೆಚ್ಚದ ಮರುಸಂದಾಯದ ಕ್ಲೇಮುಗಳನ್ನು ಮೂಲ ಓಚರುಗಳೊಂದಿಗೆ ತಾಳೆ ನೋಡಲಾಗಿದ್ದು ಅವುಗಳು ಸರಿಯಾಗಿದೆ ಎಂದು ಕಂಡುಬಂದಿದೆ.

– ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ:

**(ಹೆಸರು)**

**ಪದನಾಮ**

**ನಿರ್ದೇಶಕರು, ಡಿಎಸ್ಇಆರ್‌ಟಿ**

**ರಾಜ್ಯ/ಕೇಂದ್ರಾಡಳಿತ ಪ್ರದೇಶ ಸರ್ಕಾರದ ವಿಳಾಸ,**

**ದೂರವಾಣಿ ಸಂಖ್ಯೆ/ ಇಮೇಲ್ ಐ.ಡಿ.**

**ಸೂಚನೆ**:–

**ವಿಷಯಾಭಿಮುಖ ಶಿಕ್ಷಣ** ಎಂದರೆ ಯುವ ಸಂಸತ್ತನ್ನು ನಡೆಸುವುದರ ಪ್ರಭಾರದಲ್ಲಿರುವ ಶಿಕ್ಷಕರ/ಶಿಕ್ಷಣ ಅಧಿಕಾರಿಗಳ ಪ್ರಯೋಜನಕ್ಕಾಗಿ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ನೋಡಲ್ ಪ್ರಾಧಿಕಾರಿಗಳು ನಡೆಸುವ ಒಂದು ಕೋರ್ಸು. ಭಾಗವಹಿಸುವವರಿಗೆ ಹಂಚುವ ಸಾಹಿತ್ಯ/ಲೇಖನ ಸಾಮಗ್ರಿಗಳ ರೂಪದಲ್ಲಿ ವೆಚ್ಚಗಳುಂಟಾಗುತ್ತವೆ.

**ಯುವ ಸಂಸತ್ ಸ್ಪರ್ಧೆಯ ವ್ಯವಸ್ಥೆ** ಎಂದರೆ, ಸ್ಪರ್ಧೆಯನ್ನು ನಡೆಸುವುದಕ್ಕೆ ವಹಿಸಿದ ವೆಚ್ಚ, ಇದು ಉಪಹಾರಕ್ಕೆ, ಭಾಗವಹಿಸುವ ವಿದ್ಯಾರ್ಥಿಗಳ ಸಾರಿಗೆ ವ್ಯವಸ್ಥೆಗೆ, ಬಹುಮಾನ/ಪಾರಿತೋಷಕ ಮುಂತಾದವುಗಳಿಗೆ ತಗಲಿದ ವೆಚ್ಚವನ್ನು ಒಳಗೊಳ್ಳುತ್ತದೆ.

**ಬಹುಮಾನ ವಿತರಣೆ ಸಮಾರಂಭ** ಎಂದರೆ, ರಾಜ್ಯ ಮಟ್ಟದ ಬಹುಮಾನ ವಿಜೇತರು ಮುಂತಾದವರಿಗೆ ಬಹುಮಾನಗಳು/ಷೀಲ್ಡ್‌ಗಳನ್ನು (ಪಾರಿತೋಷಕಗಳನ್ನು) ವಿತರಣೆ ಮಾಡುವುದಕ್ಕಾಗಿ ನಡೆಸಿದ ಸಮಾರಂಭ, ಇದು ಪ್ರತಿಭಾನ್ವಿತ ಶಾಲೆಗಳು ಮತ್ತು ವಿದ್ಯಾರ್ಥಿಗಳಿಗೆ ಪುಸ್ತಕಗಳು, ನೆನಪಿನ ಕಾಣಿಕೆಗಳು, ಪ್ರಮಾಣ ಪತ್ರಗಳು, ಷೀಲ್ಡ್‌ಗಳ (ಪಾರಿತೋಷಕಗಳು) ರೂಪದಲ್ಲಿ ಬಹುಮಾನ ಮುಂತಾದವುಗಳಿಗಾಗಿ ವಹಿಸಿದ ವೆಚ್ಚವನ್ನು ಒಳಗೊಳ್ಳುತ್ತದೆ.

(ಮರುಸಂದಾಯದ ಕ್ಲೇಮಿನಲ್ಲಿ, ಶಿಕ್ಷಕರಿಗೆ/ಅಧಿಕಾರಿಗಳಿಗೆ, ಪ್ರಯಾಣಭತ್ಯೆ/ದಿನಭತ್ಯೆಗಳ ವೆಚ್ಚಗಳನ್ನು ಸೇರಿಸತಕ್ಕದ್ದಲ್ಲ)

*ಸ್ಪರ್ಧೆಗಾಗಿ ವಹಿಸಿದ ವೆಚ್ಚಗಳ ಮರುಸಂದಾಯಕ್ಕಾಗಿ "ರಾಜ್ಯಗಳಿಗೆ/ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸು ನೆರವು ಯೋಜನೆ"ಯ 14ನೇ ಕಂಡಿಕೆಯಲ್ಲಿ ಹೇಳಿರುವಂತೆ, ಯುವ ಸಂಸತ್ ಸ್ಪರ್ಧೆಗಳು ಮುಕ್ತಾಯವಾದ ಮೇಲೆ, ರಾಜ್ಯ/ಕೇಂದ್ರಾಡಳಿತ ಸರ್ಕಾರಗಳು ಭರ್ತಿ ಮಾಡಿ ಕಳುಹಿಸಬೇಕು.

**03 ಯುಸಂಸ್ಪ 2018** **06.08.2018.**

**ಮಾನ್ಯರೆ,**

**ವಿಷಯ:** 2018–19ನೇ ಸಾಲಿನಲ್ಲಿ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಜಿಲ್ಲಾ ಮತ್ತು ರಾಜ್ಯ ಮಟ್ಟದ ಯುವ ಸಂಸತ್‌ಸ್ಪರ್ಧೆಗಳನ್ನು ನಡೆಸುವ ಬಗ್ಗೆ

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2018–19ನೇ ಸಾಲಿನಲ್ಲಿ, ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಜಿಲ್ಲಾ ಹಾಗೂ ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆಗಳನ್ನು ನಡೆಸುವ ಬಗ್ಗೆ ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ಅನುಸರಿಸಿ, ಅವಶ್ಯಕ ಪೂರ್ವತಯಾರಿ ಕ್ರಮಗಳನ್ನು ಕೂಡಲೇ ಕೈಗೊಂಡು ವರದಿಯನು ಈ ಇಲಾಖೆಗೆ ತುರ್ತಾಗಿ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ.

1. 2018–19ನೇ ಸಾಲಿನ ಯುವ ಸಂಸತ್ ಸ್ಪರ್ಧೆಗಳನ್ನು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಕಳೆದ ಸಾಲಿನಂತೆ ಆಯೋಜಿಸುವ ಸಲುವಾಗಿ ಪ್ರತಿಯೊಂದು ಜಿಲ್ಲೆಯ ಡಿ.ಡಿ.ಪಿ.ಐ.ಗಳಿಗೆ ಈ ಕೆಳಕಂಡ ಷರತ್ತುಗಳನ್ನು ಒಳಗೊಂಡ ಸುತ್ತೋಲೆಯನ್ನು ಹೊರಡಿಸುವಂತೆ ತಿಳಿಸಿದೆ.–

    (1) 2018–19ನೇ ಸಾಲಿನ ಯುವ ಸಂಸತ್ ಸ್ಪರ್ಧೆಗಳನ್ನು ಜಿಲ್ಲಾ ಮಟ್ಟದಲ್ಲಿ ಆಯೋಜಿಸಲು ಪ್ರತಿ ಜಿಲ್ಲೆಯ ಡಿ.ಡಿ.ಪಿ.ಐ. ಅಧ್ಯಕ್ಷತೆಯಲ್ಲಿ ಸಮಾಜ ವಿಜ್ಞಾನ ಶಿಕ್ಷಕರನ್ನು ಒಳಗೊಂಡ ಒಂದು ಸಮಿತಿಯನ್ನು ರಚಿಸಿ, ಈ ಇಲಾಖೆಯಿಂದ ನಿಯೋಜಿತಗೊಂಡ ಅಧಿಕಾರಿಗಳ ಹಾಗೂ ಆಹ್ವಾನಿತ ವಿಧಾನಸಭೆ ಸದಸ್ಯರ ಸಮಕ್ಷಮದಲ್ಲಿ ಸ್ಪರ್ಧೆಗಳನ್ನು ಆಯೋಜಿಸತಕ್ಕದ್ದು;

    (2) ಪ್ರತಿ ಜಿಲ್ಲೆಯಿಂದ ಕನಿಷ್ಠ 60 ಸ್ಪರ್ಧಾಳುಗಳ ಹೆಸರು, ತರಗತಿ ಹಾಗೂ ಶಾಲೆಗಳ ವಿವರ ಮತ್ತು 1 ಮತ್ತು 2ನೇ ಸ್ಥಾನವನ್ನು ಪಡೆದ ವಿಜೇತರ ಹೆಸರು, ತರಗತಿ ಹಾಗೂ ಶಾಲೆಯ ವಿವರ ಹಾಗೂ ಕಾರ್ಯಕ್ರಮದ ಕನಿಷ್ಠ 3 ಭಾವಚಿತ್ರಗಳನ್ನು ನಿರ್ದೇಶಕರಿಗೆ ಹಾಗೂ ಈ ಇಲಾಖೆಗೆ ಕಳುಹಿಸುವುದು;

(3) ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಡಿಸೆಂಬರ್–2018ರ ಕೊನೆಯ ವಾರದೊಳಗೆ ಆಯೋಜಿಸಲು ಉದ್ದೇಶಿಸಿರುವುದರಿಂದ, ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನು ನವೆಂಬರ್–2018ರ ಕೊನೆಯ ವಾರದೊಳಗೆ ಆಯೋಜಿಸಲು ತುರ್ತು ಕ್ರಮ ತೆಗೆದುಕೊಳ್ಳುವುದು;

(4) ಸದರಿ ಕಾರ್ಯಕ್ರಮಗಳ ಆಯೋಜನೆ ಬಗ್ಗೆ ಈ ಇಲಾಖೆಯ ಗಮನಕ್ಕೆ ತರದೆ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ;

(5) ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದ ಡಿ.ಡಿ.ಪಿ.ಐ.ಗಳಿಗೆ ನಿರ್ದೇಶಕರು ಅನುದಾನ ಮೊತ್ತವನ್ನು ಬಿಡುಗಡೆ ಮಾಡತಕ್ಕದ್ದಲ್ಲ ಮತ್ತು ಯಾವುದೇ ವ್ಯತ್ಯಯಗಳು ಉಂಟಾದಲ್ಲಿ ಸಂಬಂಧಪಟ್ಟ ಡಿ.ಡಿ.ಪಿ.ಐ.ಗಳನ್ನು ಜವಾಬ್ದಾರರನ್ನಾಗಿ ಮಾಡಲಾಗುವುದು;

(6) ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಜಿಲ್ಲಾ ಪಂಚಾಯತ್ ಸಭೆ ನಡೆಸುವ ಸಭಾಂಗಣದಲ್ಲಿ ಮುಖ್ಯ ಕಾರ್ಯನಿರ್ವಹಣ ಅಧಿಕಾರಿಯವರ ಅನುಮತಿ ಪಡೆದು ನಡೆಸತಕ್ಕದು;

(7) ಸ್ಪರ್ಧೆಗೆ ಪೂರ್ವಾನ್ವಯವಾಗಿ ಸ್ಪರ್ಧಾಳುಗಳಿಗೆ ಸಾರ್ವಜನಿಕ ಶಿಕ್ಷಣ ತರಬೇತಿ ಶಿಬಿರಗಳನ್ನು ಏರ್ಪಡಿಸತಕ್ಕದು; ಮತ್ತು

(8) ಸ್ಪರ್ಧೆಯ ವಿಜೇತರುಗಳಿಗೆ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಪ್ರಮಾಣ ಪತ್ರ (ಸರ್ಟಿಫಿಕೇಟ್)ದೊಂದಿಗೆ ಗುಣ ಮಟ್ಟದ ಬಹುಮಾನಗಳನ್ನು ನೀಡುವುದು;

2. ಜಿಲ್ಲಾ ಮಟ್ಟದ ಸ್ಪರ್ಧೆಯನ್ನು ಆಯೋಜಿಸಲು ಸಾರ್ವಜನಿಕ ಶಿಕ್ಷಣ ಇಲಾಖಾ ವತಿಯಿಂದ ನೇಮಕ ಮಾಡಿರುವ ನೋಡಲ್ ಅಧಿಕಾರಿಗಳ ಹೆಸರು, ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನೊಳಗೊಂಡ ವಿವರಣಾ ಪಟ್ಟಿಯನ್ನು ಕೂಡಲೇ ಈ ಇಲಾಖೆಗೆ ಒದಗಿಸತಕ್ಕದ್ದು.

ಆದರಗಳೊಂದಿಗೆ,

ತಮ್ಮ ನಂಬುಗೆಯ,

**ಇವರಿಗೆ,**

ಶ್ರೀ ಹೆಚ್.ಎನ್. ಗೋಪಾಲಕೃಷ್ಣ,
ನಿರ್ದೇಶಕರು
ರಾಜ್ಯ ಶಿಕ್ಷಣ, ಸಂಶೋದನೆ ಮತ್ತು ತರಬೇತಿ ಸಂಸ್ಥೆ,
ನಂ. 4, 100 ಅಡಿ ರಿಂಗ್ ರೋಡ್,
ಬನಶಂಕರಿ 3ನೇ ಹಂತ, ಬೆಂಗಳೂರು.

**ಜಿಲ್ಲಾಮಟ್ಟದ ಯುವ ಸಂಸತ್ ಸ್ಪರ್ಧೆಯ ಮಾರ್ಗಸೂಚಿಗಳು :– ಇದು ವಿಧಾನಸಭೆಯ ಮಾದರಿ / ಅಣಕು ಪ್ರದರ್ಶನವಾಗಿರತಕ್ಕದ್ದು**

**1. ಯುವ ಸಂಸತ್ ಸ್ಪರ್ಧೆಯ ವ್ಯವಸ್ಥೆ:–** (ಎ) ಸಂಬಂಧಪಟ್ಟ ಶೈಕ್ಷಣಿಕ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ತಮ್ಮ ಜಿಲ್ಲೆಯ ನೋಡಲ್ ಅಧಿಕಾರಿ ಹಾಗೂ ಇತರ ಸಿಬ್ಬಂದಿಯ ಸಮನ್ವಯದೊಂದಿಗೆ ಯುವಸಂಸತ್ ಸ್ಪರ್ಧೆಯನ್ನು ಸರ್ಕಾರ ನಿಗದಿಪಡಿಸಿದ ಕಾಲಮಿತಿಯೊಳಗೆ ವ್ಯವಸ್ಥಿತವಾಗಿ ನಡೆಸತಕ್ಕದ್ದು. ಸ್ಪರ್ಧೆಗಾಗಿ ಉತ್ತಮ ವೇದಿಕೆ, ಧ್ವನಿವರ್ಧಕ, ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಉಪಹಾರ, ಸ್ಪರ್ಧಾವಿಜೇತರಿಗೆ ಬಹುಮಾನ, ಮುಂತಾದವನ್ನು ಪ್ರತಿ ಜಿಲ್ಲೆಗೆ ನೀಡಲಾಗುವ ಅನುದಾನದಿಂದ ಏರ್ಪಾಡು ಮಾಡತಕ್ಕದ್ದು.

(ಬಿ) ಜಿಲ್ಲಾ ಮಟ್ಟದ ಸ್ಪರ್ಧೆಗೆ 2011–12ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪ್ರತಿಯೊಂದು ಜಿಲ್ಲೆಗೆ ರೂ. 6,000/– (ಆರು ಸಾವಿರ ರೂಪಾಯಿಗಳು ಮಾತ್ರ) ಅಥವಾ ಸ್ಪರ್ಧೆಯ ವಾಸ್ತವ ವೆಚ್ಚ ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ಮೂಲಕ ನೀಡಲಾಗುವುದು.

**2. ಯುವ ಸಂಸತ್ ಸ್ಪರ್ಧೆಗಳಿಗೆ ವಿಧ್ಯಾರ್ಥಿಗಳನ್ನು ಆಯ್ಕೆ ಮಾಡುವ ವಿಧಾನ.–** ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಗಳಿಗೆ ಕರ್ನಾಟಕ ರಾಜ್ಯದ ಮಾನ್ಯತೆ ಪಡೆದ ಎಲ್ಲಾ ಪ್ರೌಢ ಶಾಲೆಗಳ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸುವ ಅರ್ಹತೆ ಹೊಂದಿರುವುದರಿಂದ ಸುಮಾರು 60 ರಿಂದ 90 ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಅವಕಾಶ ನೀಡಬೇಕು. ಇದಕ್ಕಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಈ ಮುಂದೆ ಹೇಳಿದ ಅರ್ಹತೆಗಳನ್ನು ಸಾಮಾನ್ಯವಾಗಿ ಪರಿಗಣಿಸಬೇಕು.

(1) ಚರ್ಚಿಸುವ ಸಾಮರ್ಥ್ಯವಿರುವ ವಿದ್ಯಾರ್ಥಿಗಳು.

(2) ನಮ್ಮ ದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳ ಬಗ್ಗೆ ಸಾಕಷ್ಟು ಚೆನ್ನಾಗಿ ತಿಳಿದುಕೊಂಡ ವಿದ್ಯಾರ್ಥಿಗಳು.

(3) ತಮ್ಮ ತಮ್ಮ ತರಗತಿಗಳಲ್ಲಿ ಉತ್ತಮ ಮೆರಿಟ್ ಪಡೆದಿರುವ ವಿದ್ಯಾರ್ಥಿಗಳು.

(4) ಮುಖಂಡತ್ವದ ಗುಣಗಳಿರುವ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳು.

(5) ಮಾಧ್ಯಮಿಕ ಶಾಲೆಗಳು ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು.

ಪ್ರತಿ ವರ್ಷವೂ ಹೊಸ ವಿದ್ಯಾರ್ಥಿಗಳ ಗುಂಪುಗಳಿಗೆ ಆದ್ಯತೆ ನೀಡಿ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ನೋಡಿಕೊಳ್ಳಬೇಕೆಂದು ಮತ್ತು ಪ್ರಶ್ನೋತ್ತರ ಅವಧಿಯಲ್ಲಿ ಮತ್ತು ಇತರ ಶಾಸನ–ಕಲಾಪಗಳ ಅವಧಿಯಲ್ಲಿ ಆಯ್ಕೆ ಮಾಡಿದ ವಿಷಯಗಳಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಸಂಗ್ರಹಿಸುವಂತೆ ಅವರಿಗೆ ಸೂಚಿಸಬೇಕು. ವಿದ್ಯಾರ್ಥಿನಿಯರಿಗೂ ಯುವ ಸಂಸತ್ತಿನಲ್ಲಿ ಭಾಗವಹಿಸಲು ಸಮಾನ ಅವಕಾಶ ನೀಡತಕ್ಕದ್ದು.

**3. ಯುವ ಸಂಸತ್ ರಚನೆ.–** (ಎ) ಪ್ರತಿ ಜಿಲ್ಲೆಯಲ್ಲಿ, ನಿಗದಿತ ದಿನಾಂಕ ಹಾಗೂ ಸ್ಥಳದಲ್ಲಿ ಅಧಿವೇಶನದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳು ಹತ್ತು ಗಂಟೆಗೆ ತಮ್ಮ ಹೆಸರನ್ನು ನೋಂದಾಯಿಸುವರು.

(ಬಿ) ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯಿಂದ ನಿಯೋಜಿತ ತೀರ್ಪುಗಾರರ ಸಮಿತಿಯ ಸದಸ್ಯರು ವಿದ್ಯಾರ್ಥಿಗಳನ್ನು,–

ಶೇಕಡ 60 – ಆಡಳಿತ ಪಕ್ಷದ ಸದಸ್ಯರು.

ಶೇಕಡ 40 – ವಿರೋಧ ಪಕ್ಷದ ಸದಸ್ಯರನ್ನಾಗಿ ವಿಂಗಡಿಸುವರು.

(ಸಿ) ಆಡಳಿತ ಪಕ್ಷದ ಸದಸ್ಯರು ತಮ್ಮೊಳಗೆ ಇಬ್ಬರನ್ನು ಆರಿಸುವರು. ಇವರಲ್ಲಿ ಒಬ್ಬರನ್ನು "ಮುಖ್ಯಮಂತ್ರಿ" ಎಂದು ಕರೆಯಲಾಗುವುದು. ಹಾಗೂ ಇನ್ನೊಬ್ಬರನ್ನು ಸಭಾಧ್ಯಕ್ಷರು (speaker) ಎಂದು ಕರೆಯಲಾಗುವುದು. ಮುಖ್ಯಮಂತ್ರಿಯವರು ಆಡಳಿತ ಪಕ್ಷದ 5 ಸದಸ್ಯರನ್ನು ಮಂತ್ರಿಗಳನ್ನಾಗಿ ಆರಿಸುವರು. ಇವರನ್ನು

(ಅ) ಶಿಕ್ಷಣ ಸಚಿವರು.

(ಆ) ಗೃಹ ಸಚಿವರು.

(ಇ) ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು.

(ಈ) ಆರೋಗ್ಯ ಸಚಿವರು; ಮತ್ತು

(ಉ) ಸಮಾಜ ಕಲ್ಯಾಣ ಸಚಿವರು.

ಎಂದು ನಾಮಕರಣ ಮಾಡಲಾಗುವುದು.

(ಡಿ) ವಿರೋಧ ಪಕ್ಷದ ಸದಸ್ಯರು ಸಮನಾದ ಮೂರು ಪಂಗಡಗಳಲ್ಲಿ ವಿಭಜಿಸಿ ಕೊಳ್ಳುವರು, ಪ್ರತಿಯೊಂದು ವಿರೋಧ ಪಕ್ಷವನ್ನು

(ಅ) ವಿರೋಧ ಪಕ್ಷ–1
(ಆ) ವಿರೋಧ ಪಕ್ಷ–2
(ಇ) ವಿರೋಧ ಪಕ್ಷ–3

ಎಂದು ಕರೆಯಲಾಗುವುದು. ವಿರೋಧ ಪಕ್ಷದ ಸದಸ್ಯರು ತಮ್ಮೊಳಗೆ ಒಬ್ಬ ನಾಯಕನನ್ನು ಆರಿಸುವರು. ಅವರನ್ನು ಆಯಾ ವಿರೋಧ ಪಕ್ಷದ ಹೆಸರಿನ ನಾಯಕರೆಂದು ಕರೆಯಲಾಗುವುದು.

4. **ಆಸನಗಳ ವ್ಯವಸ್ಥೆ.–** (ಎ) ಆಡಳಿತ ಪಕ್ಷದ ಸದಸ್ಯರು ಕೊಠಡಿಯ (ಇನ್ನು ಮುಂದೆ ಸದನ ಎಂದು ಕರೆಯಲಾಗುವುದು) ಬಲ ಭಾಗದಲ್ಲಿ, ವಿರೋಧ ಪಕ್ಷದ ಸದಸ್ಯರು ಸದನದ ಎಡಭಾಗದಲ್ಲಿ ಕುಳಿತು ಕೊಳ್ಳುವರು. ಸಭಾಧ್ಯಕ್ಷರ ಆಸನವು ಸದನದ ವೇದಿಕೆಯಲ್ಲಿ ಇರುವುದು. ಮುಖ್ಯಮಂತ್ರಿ ಹಾಗೂ ಇತರ ಸಚಿವರು ಆಡಳಿತ ಪಕ್ಷದ ಆಸನಗಳಲ್ಲಿ ಮುಂದಿನ ಸ್ಥಾನಗಳನ್ನು, ವಿರೋಧ ಪಕ್ಷದ ಮುಖಂಡರು ತಮ್ಮ ಪಕ್ಷದ ವಿಭಾಗದಲ್ಲಿ ಮುಂದಿನ ಸ್ಥಳಗಳಲ್ಲಿ ಆಸೀನರಾಗುವರು.

(ಬಿ) ತೀರ್ಪುಗಾರರ ಸಮಿತಿಯ ಸದಸ್ಯರು ಎಲ್ಲಾ ಸದಸ್ಯರನ್ನು ವೀಕ್ಷಿಸಲು ಹಾಗೂ ಆಲಿಸಲು ಸಾಧ್ಯವಾಗುವಂತಹ ಸೂಕ್ತ ಸ್ಥಳದಲ್ಲಿ ಆಸೀನರಾಗುವರು.

5. **ಸ್ಪರ್ಧೆಗಳನ್ನು ನಡೆಸುವ ವಿಧಾನ.–**(ಎ) ಮೊದಲಿಗೆ ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರು ತಮ್ಮ ತಮ್ಮ ನಾಯಕರನ್ನು ಆಯ್ಕೆ ಮಾಡಲು ವಿಫಲರಾದಲ್ಲಿ ತೀರ್ಪುಗಾರರ ಸಮಿತಿಯ ಸದಸ್ಯರು ಅವರಿಗೆ ಮಾರ್ಗದರ್ಶನ ನೀಡುವರು ಅಥವಾ ಸೂಕ್ತ ವಿದ್ಯಾರ್ಥಿಯನ್ನು ನಾಮನಿರ್ದೇಶನ ಮಾಡುವರು. ಮೇಲಿನ ಪ್ರಕಾರ್ಯಗಳು 10–00 ಗಂಟೆಯಿಂದ 10–55 ರೊಳಗೆ ಮುಕ್ತಾಯಗೊಳ್ಳಬೇಕಾಗಿದೆ.

(ಬಿ) 11–00 ಗಂಟೆಗೆ "ಸಭಾಧ್ಯಕ್ಷರು ಸದನಕ್ಕೆ ಆಗಮಿಸುತ್ತಿದ್ದಾರೆ" ಯೆಂಬುದಾಗಿ ಶಾಲಾ ಸಿಬ್ಬಂದಿಯೊಬ್ಬರು ಘೋಷಿಸುವರು.

(ಸಿ) ಸದನದ ಸದಸ್ಯರು ತಮ್ಮ ಆಸನಗಳಿಂದ ಎದ್ದು ನಿಲ್ಲುವರು. ಸಭಾಧ್ಯಕ್ಷರು ತಮ್ಮ ಸ್ಥಾನದಲ್ಲಿ ಕುಳಿತ ನಂತರ ಸದಸ್ಯರು ಆಸೀನರಾಗುವರು.

(ಡಿ) ಸಭಾಧ್ಯಕ್ಷರು.– 1. ಪ್ರಶ್ನೋತ್ತರ
ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳು
ಪ್ರಶ್ನೆ ಸಂಖ್ಯೆ–1
ಸಚಿವರು – ಉತ್ತರ ಒದಗಿಸಲಾಗಿದೆ.
ಸಭಾಧ್ಯಕ್ಷರು – ಪ್ರಶ್ನೆ ಸಂಖ್ಯೆ –2
ಸಚಿವರು – ಉತ್ತರ ಒದಗಿಸಲಾಗಿದೆ.
(ಇದೇ ಕ್ರಮವನ್ನು ಅನುಬಂಧ–3 ರ ಪ್ರಶ್ನೆಗಳ ಬಗ್ಗೆ ಅನುಸರಿಸಲಾಗುವುದು)
ಸಭಾಧ್ಯಕ್ಷರು – ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ)

ಪ್ರಶ್ನೆಗಳು ಮುಗಿದಿವೆ.

ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳು

ಸಚಿವರು – ಉತ್ತರಗಳನ್ನು ಕಳುಹಿಸಲಾಗಿದೆ.



ಪ್ರಶ್ನೆ ಕೇಳುವ ಸದಸ್ಯರು – (ಅ) ಉತ್ತರಗಳು ತೃಪ್ತಿಕರವಿಲ್ಲ;
(ಆ) ಉತ್ತರಗಳು ಸತ್ಯಕ್ಕೆ ದೂರವಾಗಿದೆ.
(ಇ) ಮಾನ್ಯ ಸಚಿವರು ಆಶ್ವಾಸನೆ ಕೊಡಬೇಕು.
(ಮುಂತಾದ ವಿಷಯಗಳ ಬಗ್ಗೆ ಮಾತಾಡುವರು)

ಇತರೆ ಸದಸ್ಯರು – ಅಧ್ಯಕ್ಷರ ಅನುಮತಿಯೊಂದಿಗೆ ಉತ್ತರಗಳ ಬಗ್ಗೆ ಮಾತಾಡಬಹುದು.

(ಇದೇ ಕ್ರಮವನ್ನು ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಬಗ್ಗೆ ಜರುಗಿಸುವುದು)

(ಇ) **ಶೂನ್ಯ ವೇಳೆ.–** ವಿಧಾನ ಸಭೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ಪ್ರಶ್ನೋತ್ತರಕ್ಕೆ ನಿಗದಿಪಡಿಸಿರುವ ಕಾರ್ಯಕಲಾಪವನ್ನು ಪೂರೈಸಿದನಂತರ ಸರ್ಕಾರಿ ಕಾರ್ಯಕಲಾಪ ಪ್ರಾರಂಭಿಸುವ ಮಧ್ಯದಲ್ಲಿನ ಅವಧಿಯನ್ನು "ಶೂನ್ಯ ವೇಳೆ" ಯೆಂದು ಕರೆಯಲಾಗುವುದು. ಪ್ರಸ್ತುತ ಅಧಿವೇಶನದಲ್ಲಿ ಪ್ರಶ್ನೋತ್ತರ ಮುಗಿದಿದೆ. "ಗಮನ ಸೆಳೆಯುವ ಸೂಚನೆ" ಗಳನ್ನು ತೆಗೆದು ಕೊಳ್ಳಬೇಕಾಗಿದೆ. ಈ ಶೂನ್ಯ ವೇಳೆಯಲ್ಲಿ ಅನೇಕ ಶಾಸಕರು ಪ್ರಸ್ತುತ ನಡೆಯುತ್ತಿರುವ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ "ವಿಜ್ಞಾನ" ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೆ ಪತ್ರಿಕೆಗಳು ಬಯಲಾಗಿರುವ ವಿಷಯದ ಬಗ್ಗೆ ಪ್ರಸ್ತಾಪಿಸಲು ಎದ್ದು ನಿಂತು ಅಧ್ಯಕ್ಷರ ಅನುಮತಿ ಕೋರುವರು.

ಸದಸ್ಯರು: ಪ್ರಸ್ತುತ ನಡೆಯುತ್ತಿರುವ ಎಸ್. ಎಸ್. ಎಲ್. ಸಿ. ಪರೀಕ್ಷೆಯ ವಿಜ್ಞಾನ ವಿಷಯದ ಪ್ರಶ್ನೆ ಪತ್ರಿಕೆ ನೂರು ರೂಪಾಯಿಗೆ ದೊರೆಯುತ್ತಿದೆ. ಇದರ ಬಗ್ಗೆ ಪ್ರಸ್ತಾಪಿಸಲು ನಮಗೆ ಅನುಮತಿ ಕೊಡಬೇಕು ಇತ್ಯಾದಿ.

ಸಭಾಧ್ಯಕ್ಷರು: ತಾವು ಎತ್ತ ಬೇಕೆಂದಿರುವ ವಿಷಯದ ಬಗ್ಗೆ ಸೂಚನಾ ಪತ್ರ ಕೊಡಿ. ಮಾನ್ಯ ಸಚಿವರು ಅದಕ್ಕೆ ಉತ್ತರಿಸಲು ಕಾಲಾವಕಾಶ ಬೇಕು. ನಂತರ ತೆಗೆದುಕೊಳ್ಳೋಣ.

ಸದಸ್ಯರು: ಇದು ಅತ್ಯಂತ ಗಂಭೀರವಾದ ತುರ್ತು ವಿಷಯ ನಡೆಯುತ್ತಿರುವ ಪರೀಕ್ಷೆಗಳು ತುರ್ತಾಗಿ ನಿಲ್ಲಬೇಕು. ಉಳಿದ ಕಲಾಪಗಳನ್ನು ನಂತರ ತೆಗೆದುಕೊಳ್ಳಬಹುದು.

ಸಂಬಂಧಪಟ್ಟ ಸಚಿವರು: ಈಗಾಗಲೇ ನಾನು ಎಸ್. ಎಸ್. ಎಲ್. ಸಿ. ಪರೀಕ್ಷಾ ಮಂಡಳಿಯಿಂದ ವರದಿ ಕೋರಿದ್ದೇನೆ. ಇಂದು ಸಂಜೆ ವರದಿ ತಲುಪುವ ನಿರೀಕ್ಷೆಯಿದೆ. ನಾಳೆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

ಸಭಾಧ್ಯಕ್ಷರು: ವಿಷಯವನ್ನು ನಾಳಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ "ಗಮನ ಸೆಳೆಯುವ ಸೂಚನೆಗಳಡಿಯಲ್ಲಿ ತೆಗೆದುಕೊಳ್ಳಲಾಗುವುದು" ಮುಂದಿನ ಕಾರ್ಯಕಲಾಪ "ಗಮನ ಸೆಳೆಯುವ ಸೂಚನೆ".

(ಎಫ್) **ಗಮನ ಸೆಳೆಯುವ ಸೂಚನೆ.–** ಪುಟ ಸಂಖ್ಯೆ 33 ರಲ್ಲಿರುವ ವಿಷಯದ ಬಗ್ಗೆ ಸಂಬಂಧಪಟ್ಟ ಸಚಿವರು ವಿವರಣೆಯನ್ನು ನೀಡುವರು.

ಗಮನ ಸೆಳೆಯುವ ಸೂಚನೆ ನೀಡಿರುವ ಶಾಸಕರು "ವಿವರಣೆ ತೃಪ್ತಿಕರವಾಗಿಲ್ಲ". ವಾಸ್ತವಿಕತೆ ದೂರವಾಗಿದೆ, ಸರ್ಕಾರವು ತಮ್ಮ ಅಸಮರ್ಥತೆಯನ್ನು ಒಪ್ಪಿಕೊಳ್ಳಬೇಕು. ಸದನ ಸಮಿತಿ ರಚಿಸಬೇಕು ಇತ್ಯಾದಿ ವಿಷಯಗಳ ಬಗ್ಗೆ ಮಾತಾಡುವರು.

ಉಳಿದ ಶಾಸಕರು ಅಧ್ಯಕ್ಷರ ಅನುಮತಿಯ ಮೇರೆಗೆ ಚರ್ಚೆಯಲ್ಲಿ ಭಾಗವಹಿಸಬಹುದು. ನಂತರ ಸಚಿವರು ಉತ್ತರ/ ಆಶ್ವಾಸನೆ ನೀಡುವರು.

(ಜಿ) **ಅಲ್ಪ ಕಾಲಾವಧಿ ಚರ್ಚೆ.–** ಪುಟ ಸಂಖ್ಯೆ 31–32ರ ಮಾದರಿಗಳನ್ವಯ ಸೂಚನೆಯನ್ನು ಕೊಟ್ಟಿರುವ ಸದಸ್ಯರು ಒಂದು ಸಂಕ್ಷಿಪ್ತ ಹೇಳಿಕೆಯನ್ನು ಕೊಡುವರು. ಸಂಬಂಧಪಟ್ಟ ಮಂತ್ರಿಯವರು ಸಂಕ್ಷಿಪ್ತ ಉತ್ತರ ನೀಡುವರು. ಕೆಲವು ಸದಸ್ಯರು ಅಧ್ಯಕ್ಷರ ಅನುಮತಿ ಪಡೆದು ಚರ್ಚೆಯಲ್ಲಿ ಭಾಗವಹಿಸುವರು.

(ಹೆಚ್) **ವಿಧೇಯಕದ ಮಂಡನೆ.–** ಪುಟ ಸಂಖ್ಯೆ 61–77 ಮಾದರಿಗಳನ್ವಯ ವಿಧೇಯಕವನ್ನು ಮಂಡಿಸುವಂತೆ ಸಂಬಂಧಪಟ್ಟ ಸಚಿವರಿಗೆ ಸಭಾಧ್ಯಕ್ಷರು ಸೂಚಿಸುವರು.

ಸಂಬಂಧಪಟ್ಟ ಮಂತ್ರಿಯವರು (ಮಾನ್ಯ ಸಾರಿಗೆ ಮಂತ್ರಿಗಳು) ಎದ್ದು ನಿಂತು.– ನಾನು "ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ವಿಧೇಯಕ, 2017"ನ್ನು ಮಂಡಿಸುತ್ತಿದ್ದೇನೆ.

ಸಭಾಧ್ಯಕ್ಷರು – ವಿಧೇಯಕವನ್ನು ಮಂಡಿಸಲಾಗಿದೆ.

(ಐ) **ವಿಧೇಯಕದ ಪರ್ಯಾಲೋಚನೆ.–** ಸಂಬಂಧಪಟ್ಟ ಸಚಿವರು ವಿಧೇಯಕದ ಉದ್ದೇಶವನ್ನು ವಿವರಿಸುವರು ಹಾಗೂ ಮುಗಿಸಿದನಂತರ ಕುಳಿತುಕೊಳ್ಳುವರು.

ಸಭಾಧ್ಯಕ್ಷರು: ವಿಧೇಯಕದ ಬಗ್ಗೆ ಚರ್ಚೆಯಲ್ಲಿ ಪಾಲ್ಗೊಳ್ಳಲು ಸೂಚನೆ ನೀಡಿರುವ ಶಾಸಕರ ಹೆಸರನ್ನು ಕರೆಯುವರು– ತಮ್ಮ ತಮ್ಮ ಸರದಿಯನ್ವಯ ಶಾಸಕರು ಚರ್ಚೆಯಲ್ಲಿ ಭಾಗವಹಿಸಿ ಸಲಹೆ/ಸೂಚನೆ ನೀಡುವರು.

ಸಂಬಂಧಪಟ್ಟ ಸಚಿವರು: ಸಲಹೆಗಳ ಬಗ್ಗೆ ಉತ್ತರಿಸುವರು. ಇದಾದ ನಂತರ

ಸಭಾಧ್ಯಕ್ಷರು: ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕಲಾಗಿದೆ. ವಿಧೇಯಕದ ಪರವಾಗಿರುವವರು "ಹೌದು" ಎಂದು ಉತ್ತರಿಸಬೇಕು. ವಿಧೇಯಕಕ್ಕೆ ವಿರುದ್ಧವಾಗಿರುವವರು "ಇಲ್ಲ" ಎಂದು ಉತ್ತರಿಸಬೇಕು ಎಂದು ಹೇಳುವರು.

(ಸದಸ್ಯರು ತಮ್ಮ ತಮ್ಮ ನಿರ್ಣಯಗಳನ್ನು "ಹೌದು" ಅಥವಾ "ಇಲ್ಲ" ಎಂದು ಉತ್ತರಿಸುವರು.)

ಸಭಾಧ್ಯಕ್ಷರು – ವಿಧೇಯಕ ಅಂಗೀಕಾರವಾಗಿದೆ.

ಸಭಾಧ್ಯಕ್ಷರು – ಇಂದಿನ ಕಾರ್ಯಕಲಾಪಗಳು ಮುಗಿದಿವೆ. ನಾಳೆ ಪೂರ್ವಾಹ್ನ 11–00 ಗಂಟೆಗೆ ಸೇರಲಾಗುವುದು.

ಎಂದು ತಿಳಿಸುವರು. ಸದಸ್ಯರೆಲ್ಲರೂ ಎದ್ದು ನಿಲ್ಲುವರು. ಸಭಾ ಸದಸ್ಯರು ನಿರ್ಗಮಿಸಿದ ನಂತರ ಸದಸ್ಯರು ತಮ್ಮ ಆಸನಗಳಿಂದ ನಿರ್ಗಮಿಸುವರು.

ಮಾದರಿ ಕಾರ್ಯಕ್ರಮ ಹಾಗೂ ಕಡ್ಡಾಯ ವಿಷಯಗಳ ಪಟ್ಟಿಯನ್ನು ಕ್ರಮವಾಗಿ ಅನುಬಂಧ–ಎ ಮತ್ತು ಅನುಬಂಧ–ಬಿ ಯಲ್ಲಿ ಒದಗಿಸಲಾಗಿದೆ.

**(ಜೆ) ಶಿಷ್ಟಾಚಾರ ಸಂಹಿತೆ** – ಸ್ಧರ್ಧೆಗೆ ಭಾಗವಹಿಸುವ ವಿದ್ಯಾರ್ಥಿಗಳು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.–

(1) ವಿದ್ಯಾರ್ಥಿಗಳು ಕೊಟ್ಟ ವಿಷಯವನ್ನು ಮಾತನಾಡಬೇಕಾಗುತ್ತದೆ. ವಿಷಯವನ್ನು ಮೀರಿ ಮಾಡನಾಡಲು ಅವಕಾಶವಿರುವುದಿಲ್ಲ.

(2) ಶಿಸ್ತು ಸಂಯಮಗಳು, ನಿಯಮಗಳು ಸ್ಪರ್ಧೆಯ ಎಲ್ಲಾ ವಿದ್ಯಾರ್ಥಿಗಳಿಗೆ ಮೀಸಲಾಗಿರುತ್ತದೆ.

6. **ತೀರ್ಪುಗಾರರ ಸಮಿತಿಯ ರಚನೆ:**– ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯ ತೀರ್ಪುಗಾರರ ಸಮಿತಿಯಲ್ಲಿ,–

(1) ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ನಿಯೋಜಿತ ಅಧಿಕಾರಿ;

(2) ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಯ ದರ್ಜೆಗಿಂತ ಕಡಿಮೆ ಇಲ್ಲದ ಅಧಿಕಾರಿ;

(3) ಸ್ಥಳೀಯ ಶಾಸಕರು/ಜಿಲ್ಲಾ ಪಂಚಾಯತ್/ ತಾಲ್ಲೂಕ್ ಪಂಚಾಯತ್ ಸದಸ್ಯರು.

ಇರತಕ್ಕದ್ದು.

**7. ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸುವುದು ಹಾಗೂ ಬಹುಮಾನ:–** ಮೆರಿಟ್ ಪಟ್ಟಿ ಹಾಗೂ ವರದಿಯನ್ನು ರಾಜ್ಯಮಟ್ಟದ ಯುವ ಸಂಸತ್ ಸ್ಪರ್ಧೆಗೆ ನಿಗದಿ ಪಡಿಸಿರುವ ಮಾದರಿಯಲ್ಲೇ ಸಿದ್ದಪಡಿಸತಕ್ಕದ್ದು. ಬಹುಮಾನಗಳನ್ನು ಸ್ಥಳೀಯ ಅಗತ್ಯತೆಗಳಿಗನುಗುಣವಾಗಿ ಮೊದಲ 5 ಸ್ಥಾನ ಗಳಿಸಿದವರಿಗೆ ಉತ್ತಮ ನಿರ್ವಹಣೆಗಾಗಿ ಬಹುಮಾನಗಳನ್ನು ನೀಡುವುದರೊಂದಿಗೆ, ಸ್ಪರ್ಧಿಗಳಿಗೆ ಬಹುಮಾನ ನೀಡುವುದನ್ನು ತೀರ್ಪುಗಾರರ ಸಮಿತಿಯು ನಿರ್ಧರಿಸಬಹುದು. ಜಿಲ್ಲಾ ಮಟ್ಟದ ಸ್ಪರ್ಧಿಗಳಿಗೆ/ಶಾಲೆಗಳಿಗೆ ಅನುಬಂಧ IV (ಪುಟ 24 ನೋಡಿ) ಮತ್ತು v (ಪುಟ 25 ನೋಡಿ)ರಲ್ಲಿ ನಿಗದಿ ಪಡಿಸಿದ ರೀತ್ಯಾ ಪ್ರಮಾಣ ಪತ್ರಗಳನ್ನು ಸ್ಪರ್ಧೆಯ ಸ್ಥಳದಲ್ಲೇ ನೀಡಲಾಗುವುದು.

# ಅನುಬಂಧ – ಎ

## ಮಾದರಿ ಕಾರ್ಯಕ್ರಮಗಳು

| | | |
|---|---|---|
| **ಪೂರ್ವಾಹ್ನ** | **11.00 ರಿಂದ 11.30 ರವರೆಗೆ** | **ಉದ್ಘಾಟನೆ** |
| | 11.30 ರಿಂದ 11.45 ರವರೆಗೆ | ಆಸನಗಳ ಜೋಡಣೆ ಇತ್ಯಾದಿ |
| | 11.45 ರಿಂದ ಅ. 1.00 ರವರೆಗೆ | ಮೊದಲನೆ ತಂಡದ ಪ್ರದರ್ಶನ |
| ಅಪರಾಹ್ನ | 1.00 ರಿಂದ 2.00 ರವರೆಗೆ | ಊಟದ ವಿರಾಮ |
| | 2.00 ರಿಂದ 3.15 ರವರೆಗೆ | ಎರಡನೆ ತಂಡದ ಪ್ರದರ್ಶನ |
| | 3.15 ರಿಂದ 3.45 ರವರೆಗೆ | ಫಲಿತಾಂಶ ನಿರ್ಣಯ |
| | 3.45 ರಿಂದ 4.14 ರವರೆಗೆ | ಮುಕ್ತಾಯ |

## ಅನುಬಂಧ – ಬಿ

### ಭಾಗ – 1 – ಕಡ್ಡಾಯ ವಿಷಯಗಳ ಪಟ್ಟಿ

1. ಸಭಾಧ್ಯಕ್ಷರ ಆಗಮನ
2. ಪ್ರಶ್ನೋತ್ತರ ವೇಳೆ
3. ಗಮನ ಸೆಳೆಯುವ ಸೂಚನೆಗಳು
4. ವಿಧೇಯಕಗಳ ಮಂಡನೆ
5. ಅಲ್ಪ ಕಾಲಾವಧಿ ಚರ್ಚೆ

### ಭಾಗ –2 ಐಚ್ಛಿಕ ವಿಷಯಗಳ ಪಟ್ಟಿ

1. ಸಂತಾಪ ಸೂಚನೆಗಳು
2. ಶೂನ್ಯ ವೇಳೆ
3. ವಿಧೇಯಕಗಳ ಪರಿಶೀಲನೆ / ಅಂಗೀಕಾರ
4. ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ
5. ಖಾಸಗೀ ಕಲಾಪಗಳು (ನಿರ್ಣಯ ಅಥವಾ ಖಾಸಗೀ ವಿಧೇಯಕದ ಮಂಡನೆ ಇತ್ಯಾದಿ)

ಸ್ಪರ್ಧೆಯ ಬಗ್ಗೆ ಸ್ಪಷ್ಟೀಕರಣ ಅಗತ್ಯತೆ ಇದ್ದಲ್ಲಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., 100 ಅಡಿ ರಿಂಗ್‌ರಸ್ತೆ, ಹೊಸಕೆರೆ ಹಳ್ಳಿ, ಬೆಂಗಳೂರು ಅಥವಾ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆ, ವಿಧಾನಸೌಧ, ಬೆಂಗಳೂರು ಇವರನ್ನು ಸಂಪರ್ಕಿಸಬಹುದು.

**ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸಿದ ಶಾಲೆಗೆ ಹಾಗೂ ಬಹುಮಾನಿತರಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ**

ಅನುಬಂಧ- IV

ಕರ್ನಾಟಕ ಸರ್ಕಾರ

ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ

**ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ 2018–19**

--------------------------------ಶಾಲೆಯ -------------------- ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ --------------------------------ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಭಾಗಿತ್ವದಲ್ಲಿ 2018–19ನೇ ಶೈಕ್ಷಣಿಕ ವರ್ಷದಲ್ಲಿ ನಡೆಸಿದ **"ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ"** ಭಾಗವಹಿಸಿದ್ದಾರೆಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| ಸ್ಥಳ:__________ | ಉಪ ನಿರ್ದೇಶಕರು | ಸಕ್ಷಮ ಪ್ರಾಧಿಕಾರಿ |
| ದಿನಾಂಕ:__________ | ಸಾರ್ವಜನಿಕ ಶಿಕ್ಷಣ ಇಲಾಖೆ | ಸಂಸದೀಯ ವ್ಯವಹಾರಗಳ ಇಲಾಖೆ |
| | ______________ ಜಿಲ್ಲೆ | |

**ಅನುಬಂಧ–V**

ಕರ್ನಾಟಕ ಸರ್ಕಾರ

ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ

**"ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ" 2018 –2019**

------------------------------ಶಾಲೆಯ--------------------------

ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ------------------------------------ಅವರಿಗೆ 2018 – 2019 ನೇ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳ ಇಲಾಖೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸಹಭಾಗಿತ್ವದಲ್ಲಿ ನಡೆಸಲಾದ "ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ"ಯಲ್ಲಿ ಅತ್ಯುತ್ತಮ ಸಾಧನೆಗೆ ----------------------------- ಬಹುಮಾನವನ್ನು ನೀಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| ಸ್ಥಳ:__________ | ಉಪ ನಿರ್ದೇಶಕರು | ಸಕ್ಷಮ ಪ್ರಾಧಿಕಾರಿ |
| ದಿನಾಂಕ:__________ | ಸಾರ್ವಜನಿಕ ಶಿಕ್ಷಣ ಇಲಾಖೆ | ಸಂಸದೀಯ ವ್ಯವಹಾರಗಳ |
| | ________________ ಜಿಲ್ಲೆ | ಇಲಾಖೆ |

**ಕರ್ನಾಟಕ ರಾಜ್ಯದ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಡೆಸುವ ಯುವ ಸಂಸತ್ ಸ್ಪರ್ಧೆಗೆ ಪೂರಕವಾಗಿ ಸಂಸತ್ ಕಾರ್ಯಕಲಾಪಗಳ ಬಗೆಗೆ ಕೆಲವು ವಿಶೇಷ ಮಾಹಿತಿಗಳು:**

ಅಖಿಲ ಭಾರತ ಮುಖ್ಯ ಸಚೇತಕರ ಸಮ್ಮೇಳನವು ಮಾಡಿರುವ ಶಿಫಾರಸ್ಸುಗಳನ್ವಯ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಬಗ್ಗೆ ಸಂಸತ್ತು, ವಿಧಾನ ಮಂಡಲದ ಅಧಿವೇಶನಗಳ ಬಗ್ಗೆ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವ ಉದ್ದೇಶದಿಂದ ಕರ್ನಾಟಕ ರಾಜ್ಯದಲ್ಲಿ "ಯುವ ಸಂಸತ್" ಸ್ಪರ್ಧೆಗಳನ್ನು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ನಡೆಸಲಾಗುತ್ತಿದೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ "ವಿಧಾನ ಸಭೆಯ" ಮಾದರಿ ಅಧಿವೇಶನವನ್ನು ನಡೆಸುವ ಕಾರ್ಯಕ್ರಮವನ್ನು ರೂಪಿಸಲಾಗಿದೆ.

**2. ವಿಧಾನ ಸಭೆಯ ರಚನೆ.–** ಭಾರತ ಸಂವಿಧಾನದ 170ನೇ ಅನುಚ್ಛೇದದ ಅನ್ವಯ ಕರ್ನಾಟಕ ರಾಜ್ಯದ ವಿಧಾನ ಸಭೆಯಲ್ಲಿ 224 ಚುನಾಯಿತ ಸದಸ್ಯರು ಹಾಗೂ ನಾಮನಿರ್ದೇಶಿತ ಒಬ್ಬ ಆಂಗ್ಲೋ ಇಂಡಿಯನ್ ಸದಸ್ಯರಿದ್ದಾರೆ.

**3. ವಿಧಾನ ಸಭೆಯ ಕಾರ್ಯಕಲಾಪಗಳು.–** ವಿಧಾನ ಸಭೆಯ ಕಾರ್ಯಕಲಾಪಗಳ ಪಟ್ಟಿಯನ್ನು ವಿಧಾನ ಸಭಾಧ್ಯಕ್ಷರ ಅನುಮೋದನೆಯೊಂದಿಗೆ ವಿಧಾನ ಸಭಾ ಸಚಿವಾಲಯದ ಕಾರ್ಯದರ್ಶಿಯವರು ಹೊರಡಿಸುವರು. ಕಾರ್ಯಕಲಾಪಗಳ ಪಟ್ಟಿಯಲ್ಲಿ,–

(ಅ) ಸಂತಾಪ ಸೂಚನೆ

(ಆ) ಪ್ರಶ್ನೋತ್ತರ

(ಇ) ವರದಿಗಳನ್ನು ಒಪ್ಪಿಸುವುದು

(ಈ) ಗಮನ ಸೆಳೆಯುವ ಸೂಚನೆಗಳು

(ಉ) ವಿತ್ತೀಯ ಕಾರ್ಯಕಲಾಪಗಳು

(ಊ) ಪೂರಕ ಕಾರ್ಯಕಲಾಪಗಳ ಪಟ್ಟಿ

(ಋ) ನಿಯಮ 69ರ ಅಡಿಯಲ್ಲಿ ಸಾರ್ವಜನಿಕ ಮಹತ್ವಗಳ ಜರೂರು ವಿಷಯದ ಚರ್ಚೆ.

(ಎ) ಶಾಸನ ರಚನೆ.

ಹಾಗೂ ಇನ್ನಿತರೆ ವಿಷಯಗಳನ್ನು ಸೇರಿಸಬಹುದು. ಪ್ರಸ್ತುತ ಅಧಿವೇಶನದ ಮಾದರಿ ಕಾರ್ಯಕಲಾಪಗಳ ಪಟ್ಟಿಯನ್ನು ಅನುಬಂಧ –vi ರಲ್ಲಿ ಒದಗಿಸಲಾಗಿದೆ.

**4. ಸಂತಾಪ ಸೂಚನೆಗಳು:** ಅಧಿವೇಶನ ಪ್ರಾರಂಭವಾದ ದಿನದ ಮೊದಲಿಗೆ ಅಗಲಿದ ಗಣ್ಯ ವ್ಯಕ್ತಿಗಳಿಗೆ ಸಭಾಧ್ಯಕ್ಷರಿಂದ ಸಂತಾಪ ಸೂಚನೆ. ಸಂತಾಪ ಸೂಚನೆಯನ್ನು ಪುಟ ಸಂಖ್ಯೆ 33–34ರಲ್ಲಿ ಒದಗಿಸಲಾಗಿದೆ.

**5. ಪ್ರಶ್ನೋತ್ತರಗಳು.–** (1) ಪ್ರತಿಯೊಂದು ದಿನದ ಅಧಿವೇಶನದ ಮೊದಲನೆಯ ಒಂದು ಗಂಟೆಯ ಅವಧಿಯನ್ನು ಪ್ರಶ್ನೆ ಕೇಳುವುದಕ್ಕೆ ಮತ್ತು ಉತ್ತರಿಸುವುದಕ್ಕೆ ಮೀಸಲಿಡಲಾಗುವುದು. ಸದರಿ ವಿಷಯದಲ್ಲಿ ಒಂದು ಉಪ ಪ್ರಶ್ನೆಗೆ ಅವಕಾಶವಿರುತ್ತದೆ.

(2) ಪ್ರಶ್ನೆಯನ್ನು ಕೇಳಲಿಚ್ಛಿಸುವ ಸದಸ್ಯರು 15 ದಿನಗಳಿಗೆ ಕಡಿಮೆ ಇಲ್ಲದೆ ಪ್ರಶ್ನೆಯ ಬಗ್ಗೆ ಸೂಚನಾ ಪತ್ರವನ್ನು ವಿಧಾನ ಸಭೆಯ ಕಾರ್ಯದರ್ಶಿಯವರಿಗೆ ಕೊಡಬೇಕು. ಪ್ರಶ್ನೆಯು ಲಿಖಿತ ರೂಪದಲ್ಲಿರಬೇಕು ಹಾಗೂ ಅದರಲ್ಲಿ ಯಾರಿಗೆ ಪ್ರಶ್ನೆ ಕೇಳಲಾಗಿದೆಯೋ ಆ ಸಚಿವರ ಪದನಾಮವನ್ನು ನಮೂದಿಸಬೇಕು.

(3) ಪ್ರಶ್ನೆಗಳನ್ನು,–

(ಅ) ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳು; ಹಾಗೂ

(ಆ) ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳು

ಎಂದು ವಿಂಗಡಿಸಲಾಗಿದೆ.

(4) ಪ್ರಶ್ನೆ ಕೇಳುವ ಬಗ್ಗೆ ಕೆಳಕಂಡ ಕೆಲವು ಪ್ರಮುಖ ಷರತ್ತುಗಳಿವೆ,–

(ಎ) ಒಂದು ಪ್ರಶ್ನೆಯು ಒಂದೇ ವಿಚಾರಕ್ಕೆ ಸಂಬಂಧ ಪಟ್ಟಿರಬೇಕು.

(ಬಿ) ಪ್ರಶ್ನೆಯು ಅರ್ಥವಾಗುವಂತೆ ಇರಬೇಕು.

(ಸಿ) ಪ್ರಶ್ನೆಯು ಸಾಮಾನ್ಯವಾಗಿ 150 ಪದಗಳನ್ನು ಮೀರತಕ್ಕುದ್ದಲ್ಲ.

(ಡಿ) ಸರ್ಕಾರಕ್ಕೆ ಸಂಬಂಧಪಡದ ಯಾವುದೇ ವಿಷಯಗಳ ಬಗ್ಗೆ ಪ್ರಶ್ನೆ ಕೇಳತಕ್ಕದ್ದಲ್ಲ.

(ಇ) ಕ್ಷುಲ್ಲಕ, ಸುಲಭವಾಗಿ ದೊರೆಯುವ ಮಾಹಿತಿಗಳನ್ನು ಕೇಳತಕ್ಕದ್ದಲ್ಲ.

(ಎಫ್) ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ವಿಷಯವನ್ನು ಪ್ರಶ್ನಿಸುವಂತಿಲ್ಲ. ಇತ್ಯಾದಿ.

(5) ವಿದ್ಯಾರ್ಥಿಗಳ ಉಪಯೋಗಕ್ಕಾಗಿ, ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಹಾಗೂ ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳ ಕೆಲವು ಮಾದರಿಗಳನ್ನು ಪುಟ ಸಂಖ್ಯೆ 35–57ರಲ್ಲಿ ಒದಗಿಸಲಾಗಿದೆ.

**6. ಶೂನ್ಯವೇಳೆ.–** ಪ್ರಶ್ನೋತ್ತರ ವೇಳೆ ನಂತರ ಸರ್ಕಾರಿ ಕಾರ್ಯಕಲಾಪಕ್ಕೆ ಮೊದಲು ಬರುವ ಅವಧಿಯೇ ಶೂನ್ಯವೇಳೆ. ಈ ಅವಧಿಯಲ್ಲಿ ತುರ್ತು ವಿಷಯಗಳನ್ನು ಮಾತ್ರ ಪ್ರಸ್ತಾಪಿಸಬಹುದು.

**7. ಗಮನ ಸೆಳೆಯುವ ಸೂಚನೆಗಳು.–** (1) ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಮಂತ್ರಿಯವರ ಗಮನಕ್ಕೆ ತರಬಹುದು. ಮಂತ್ರಿಯವರು ಸಂಕ್ಷಿಪ್ತವಾಗಿ ಒಂದು ಹೇಳಿಕೆಯನ್ನು ಕೊಡಬಹುದು ಅಥವಾ ಇನ್ನೊಂದು ದಿನ ತಮ್ಮ ಹೇಳಿಕೆ ನೀಡಲು ಕಾಲಾವಕಾಶ ಕೋರಬಹುದು.

(2) (ಅ) ಗಮನ ಸೆಳೆಯುವ ಸೂಚನೆಯನ್ನು ಒಂದಕ್ಕಿಂತ ಹೆಚ್ಚು ಸದಸ್ಯರು ಸಹಿ ಮಾಡಿದ್ದಲ್ಲಿ, ಕಾರ್ಯಕಲಾಪಗಳ ಪಟ್ಟಿಯಲ್ಲಿ ನಮೂದಿಸಿರುವ ಸದಸ್ಯರು ಗಮನ ಸೆಳೆಯಬಹುದು.

(ಆ) ಗಮನ ಸೆಳೆಯುವ ಕಾರ್ಯಕಲಾಪದಲ್ಲಿ ಚರ್ಚೆಗೆ ಅವಕಾಶವಿಲ್ಲ. ಆದರೆ ಸಭಾಧ್ಯಕ್ಷರ ಅನುಮತಿಯೊಂದಿಗೆ ಸ್ಪಷ್ಟೀಕರಣ ಕೋರಬಹುದು. ಗಮನ ಸೆಳೆಯುವ ಸೂಚನೆಗಳ ಮಾದರಿಗಳನ್ನು ಪುಟ ಸಂಖ್ಯೆ 30 ರಲ್ಲಿ ನೀಡಲಾಗಿದೆ.

**8. ಸಾರ್ವಜನಿಕ ಮಹತ್ವದ ಜರೂರು ವಿಷಯದ ಅಲ್ಪ ಕಾಲಾವಧಿ ಚರ್ಚೆ.–** ನಿಯಮ 69ರ ಅಡಿಯಲ್ಲಿ ಸಾರ್ವಜನಿಕ ಮಹತ್ವದ ಒಂದು ಜರೂರು ವಿಷಯದ ಮೇಲೆ ಚರ್ಚೆ ನಡೆಸಲು ಅಪೇಕ್ಷಿಸುವ ಸದಸ್ಯರು ಬರಹದ ಮೂಲಕ ಸೂಚನೆಯನ್ನು ವಿವರಣಾತ್ಮಕ ಟಿಪ್ಪಣಿಯೊಂದಿಗೆ ಕಾರ್ಯದರ್ಶಿಯವರಿಗೆ ಕೊಡಬಹುದು. ಆ ಸೂಚನೆಗೆ ಕನಿಷ್ಟ ಬೇರೆ ಇಬ್ಬರು ಸದಸ್ಯರು ತಮ್ಮ ಸಹಿಗಳನ್ನು ಹಾಕುವುದರ ಮೂಲಕ ಬೆಂಬಲಿಸಲ್ಪಟ್ಟಿರಬೇಕು. ನಿಯಮದ ಅಡಿಯಲ್ಲಿ ಸೂಚನೆಯನ್ನು ಕೊಟ್ಟಿರುವ ಸದಸ್ಯನು ಒಂದು ಸಂಕ್ಷಿಪ್ತ ಹೇಳಿಕೆಯನ್ನು ನೀಡಬಹುದು ಮತ್ತು ಮಂತ್ರಿಗಳು ಸಂಕ್ಷಿಪ್ತವಾಗಿ ಉತ್ತರ ನೀಡಬೇಕು. ಅಧ್ಯಕ್ಷರ ಅನುಮತಿ ಪಡೆದ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಬಹುದು. ಈ ನಿಯಮದಡಿ ನೀಡುವ ಮಾದರಿ ಸೂಚನೆಯನ್ನು ಪುಟ ಸಂಖ್ಯೆ 32 ರಲ್ಲಿ ಒದಗಿಸಿದೆ.

**9. ಶಾಸನ ರಚನೆ.–** (1) ಶಾಸನ ರಚನೆಯು ಶಾಸಕರ ಪ್ರಮುಖ ಅಧಿಕಾರ ಮತ್ತು ಕರ್ತವ್ಯಗಳಲ್ಲಿ ಒಂದು. ಭಾರತ ಸಂವಿಧಾನದ ಏಳನೇ ಅನುಸೂಚಿಯ ಎರಡನೇ ಪಟ್ಟಿ (ರಾಜ್ಯ ಪಟ್ಟಿ) ಹಾಗೂ ಮೂರನೇ ಪಟ್ಟಿ (ಸಂಯುಕ್ತ ಪಟ್ಟಿ) ಯಲ್ಲಿರುವ ವಿಷಯಗಳ ಬಗ್ಗೆ, ವಿಧಾನ ಸಭೆಯು ಶಾಸನಗಳನ್ನು ರಚಿಸಲು ಅಧಿಕಾರ ಹೊಂದಿದೆ.

(2) ಶಾಸನ ರಚನೆಯಲ್ಲಿ,–

(ಅ) ವಿಧೇಯಕವನ್ನು ಮಂಡಿಸುವುದು;

(ಆ) ವಿಧೇಯಕವನ್ನು ಪರ್ಯಾಲೋಚಿಸುವುದು; ಹಾಗೂ

(ಇ) ವಿಧೇಯಕವನ್ನು ಅಂಗೀಕರಿಸುವುದು.

ಈ ರೀತಿ ಮೂರು ಹಂತಗಳಿವೆ.

(3) ವಿಧೇಯಕಗಳನ್ನು ಸರ್ಕಾರವು ಸಂಬಂಧಪಟ್ಟ ಸಚಿವರ ಮುಖಾಂತರ ವಿಧಾನ ಸಭೆಯಲ್ಲಿ ಮಂಡಿಸುವುದು. ವಿಧೇಯಕದ ಪರ್ಯಾಲೋಚನೆಯಲ್ಲಿ ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರು ಸಲಹೆಗಳನ್ನು ನೀಡಬಹುದು ಹಾಗೂ ತಿದ್ದುಪಡಿಗಳನ್ನು ಸೂಚಿಸಬಹುದು.

ಪರ್ಯಾಲೋಚನೆಯ ನಂತರ ವಿಧೇಯಕವನ್ನು ಖಂಡ ಖಂಡವಾಗಿ (clause by clause) ಮತಕ್ಕೆ ಹಾಕಲಾಗುವುದು ಹಾಗೂ ಅಂಗೀಕರಿಸಲಾಗುವುದು.

(4) ವಿಧೇಯಕದ ಮಾದರಿಯನ್ನು ಪುಟ ಸಂಖ್ಯೆ 58–61 ರಲ್ಲಿ ಕೊಡಲಾಗಿದೆ.

## ಅನುಬಂಧ – VI

## ಕರ್ನಾಟಕ ವಿಧಾನ ಸಭೆಯ ಮಾದರಿ ಕಾರ್ಯಕಲಾಪಗಳ ಪಟ್ಟಿ

### ಮಾದರಿ – 1

**ಕರ್ನಾಟಕ ವಿಧಾನಸಭೆ**

(15ನೇ ವಿಧಾನಸಭೆ)

(ಮೊದಲನೇ ಅಧಿವೇಶನ)

**ಕಾರ್ಯಕಲಾಪಗಳ ಪಟ್ಟಿ**

(ಸಮಯ: ಬೆಳಿಗ್ಗೆ 11.00 ಗಂಟೆಗೆ)

----

**01. ಸಂತಾಪ ಸೂಚನೆಗಳು**

**02. ಪ್ರಶ್ನೋತ್ತರ**

**ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಮೊದಲನೇ ಪಟ್ಟಿ**

**ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಮೊದಲನೇ ಪಟ್ಟಿ**

**03. ಅರ್ಜಿಗಳನ್ನೊಪ್ಪಿಸುವುದು**

ಶ್ರೀ ಮಹಾಂತೇಶ್ ಎಸ್. ಕೌಜಲಗಿ, ಮಾನ್ಯ ವಿಧಾನ ಸಭಾ ಸದಸ್ಯರು, ಈ ಕೆಳಕಂಡ ಅರ್ಜಿಗಳನ್ನು ಒಪ್ಪಿಸುವುದು:

1) ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ದೊಡ್ಡವಾಡ ಗ್ರಾಮದಲ್ಲಿರುವ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯದ ಶಿಥಿಲಗೊಂಡಿರುವ ಕಟ್ಟಡವನ್ನು ದುರುಸ್ಥಿಗೊಳಿಸುವ ಬಗ್ಗೆ.
2) ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಅಮಟೂರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ದೇವಲಾಪೂರ ವಿಸ್ತರಣೆ ಪ್ರದೇಶದ ಜೈನ ಬಸ್ತಿಯ ಬಳಿ ಇರುವ ಹೊಲಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ದುರಸ್ತಿಗೊಳಿಸುವ ಬಗ್ಗೆ.

3) ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಕೊರವಿಕೊಪ್ಪ ಗ್ರಾಮದ ಶ್ರೀ ಹನಮಂತದೇವರ ಗುಡಿಯಿಂದ ಸ್ಮಶಾನದವರೆಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ದುರಸ್ಥಿಗೊಳಿಸುವ ಬಗ್ಗೆ.

4) ಬೆಳಗಾವಿ ಜಿಲ್ಲೆ, ಸವದತ್ತಿ ತಾಲ್ಲೂಕಿನ ಮುರಗೋಡ ಗ್ರಾಮದಲ್ಲಿ ಶಿಥಿಲಗೊಂಡಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡವನ್ನು ದುರಸ್ಥಿಗೊಳಿಸುವ ಬಗ್ಗೆ.

## 04. ಶಾಸನ ರಚನೆ

**ವಿಧೇಯಕವನ್ನು ಮಂಡಿಸುವುದು**

ಶ್ರೀ. , ಸಾರಿಗೆ ಸಚಿವರು) **ಅವರು:-**

ಅ) 2017ನೇ ಸಾಲಿನ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ವಿಧೇಯಕ, 2017ನ್ನು ಮಂಡಿಸಲು ಅನುಮತಿ ಕೋರುವುದು;

ಆ) ಹಾಗೂ ವಿಧೇಯಕವನ್ನು ಮಂಡಿಸುವುದು.

## 05. ಗ

1. **ಶ್ರೀ ಪಿ. ರಾಜೀವ್** ಅವರು ರಾಯಭಾಗ ತಾಲ್ಲೂಕಿನಲ್ಲಿರುವ ಜೈನ ಸಮುದಾಯದವರಿಗೆ ಅಲ್ಪ ಸಂಖ್ಯಾತರ ಪ್ರಮಾಣ ಪತ್ರ ನೀಡುವ ಕುರಿತು ಮಾನ್ಯ ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಗಮನ ಸೆಳೆಯುವುದು.

2. **ಶ್ರೀ ಗೂಳಿಹಟ್ಟಿ ಡಿ. ಶೇಖರ್** ಅವರು ಚಿತ್ರದುರ್ಗ, ತುಮಕೂರು ಹಾಗೂ ಹಾಸನ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಯುವಕ-ಯುವತಿಯರಿಗೆ ಕಂಪ್ಯೂಟರ್ ತರಬೇತಿ ನೀಡದೆ ಬಿ.ಆರ್.ಜಿ.ಎಫ್. ಅನುದಾನದ ಕೋಟ್ಯಾಂತರ ರೂಪಾಯಿಗಳನ್ನು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಗಮನ ಸೆಳೆಯುವುದು.

## 06. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

1. **ಶ್ರೀಯುತರುಗಳಾದ ಆರ್. ಅಶೋಕ್, ವಿ.ಸುನಿಲ್ ಕುಮಾರ್, ಸಿ.ಟಿ. ರವಿ, ಅರವಿಂದ ಲಿಂಬಾವಳಿ, ವಿ. ಸೋಮಣ್ಣ, ಡಾ. ಭರತ್ ಶೆಟ್ಟಿ ಮತ್ತು ರಾಜೇಶ್ ನಾಯಕ್** ಇವರುಗಳು ಬೆಂಗಳೂರು ನಗರ ಸೇರಿದಂತೆ ರಾಜ್ಯಾದ್ಯಂತ ಡ್ರಗ್ಸ್, ಗಾಂಜಾ ಮತ್ತಿತರ ಮಾದಕ ವಸ್ತುಗಳಿಗೆ ಯುವಜನತೆ ಬಲಿಯಾಗುತ್ತಿರುವುದರಿಂದ, ವೈದ್ಯರ ಚೀಟಿ ಇಲ್ಲದೇ ಅಮಲುಮಿಶ್ರಿತ ಔಷಧ ಸೇರಿದಂತೆ, ಮಾತ್ರೆ, ಇಂಜೆಕ್ಷನ್‌ಗಳನ್ನು ಮಾರಾಟ ಮಾಡುತ್ತಿರುವ ಔಷಧಿ ಅಂಗಡಿಗಳಿಗೆ ಕಡಿವಾಣ ಹಾಕುವುದರ ಬಗ್ಗೆ ಚರ್ಚಿಸಲು ನೀಡಿರುವ ಸೂಚನೆಯ ಮೇಲೆ ಚರ್ಚೆ.

2. **ಶ್ರೀಯುತರುಗಳಾದ ಎ.ಟಿ. ರಾಮಸ್ವಾಮಿ, ಸಿ.ಎನ್. ಬಾಲಕೃಷ್ಣ, ಕೆ.ಎಂ. ಶಿವಲಿಂಗೇಗೌಡ, ಎಂ. ಶ್ರೀನಿವಾಸ ಮತ್ತು ಕೆ. ಮಹದೇವ** ಇವರುಗಳು ಕೇಂದ್ರ ಸರ್ಕಾರವು ರಚಿಸಿರುವ ಕಾವೇರಿ ನಿರ್ವಹಣಾ ಪ್ರಾಧಿಕಾರ ಮತ್ತು ಕಾವೇರಿ ಜಲನಿಯಂತ್ರಣ ಸಮಿತಿಗಳು ಕರ್ನಾಟಕ ಕಾವೇರಿ ನೀರಾವರಿ ಯೋಜನೆಗಳಲ್ಲಿ ನೀರು ಸಂಗ್ರಹಣೆ, ಹಂಚಿಕೆ ಮತ್ತು ಬೆಳೆ ಬೆಳೆಯುವ ಬಗ್ಗೆ ನಿಗಾ ವಹಿಸುವುದರಿಂದ ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು, ಹಾಸನ, ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳಲ್ಲಿನ ರೈತರಿಗೆ ಅನ್ಯಾಯವಾಗುತ್ತಿರುವ ಬಗ್ಗೆ ಪ್ರಸ್ತಾಪಿಸಲು ನೀಡಿರುವ ಸೂಚನೆಯ ಮೇಲೆ ಚರ್ಚೆ.

**ಕರ್ನಾಟಕ ವಿಧಾನ ಪರಿಷತ್ತು**

**ನೂರ ಮೂವತ್ತೈದನೆಯ ಅಧಿವೇಶನ**

ಕಾರ್ಯಕಲಾಪಗಳ ಪಟ್ಟಿ

**(ಸಮಯ: ಬೆಳ್ಳಿಗ್ಗೆ. 10.30 ಗಂಟೆಗೆ)**

******

**01. ಸಂತಾಪ ಸೂಚನೆಗಳು**

**(15 ನಿಮಿಷಗಳ ನಂತರ ಸದನವು ಪುನ: ಸಮಾವೇಶಗೊಳ್ಳುವುದು)**

**02. ಪ್ರಶ್ನೋತ್ತರ**

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಒಂದನೆಯ ಪಟ್ಟಿ

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಒಂದನೆಯ ಪಟ್ಟಿ

**03. ಗಮನ ಸೆಳೆಯುವ ಸೂಚನೆಗಳು**

ಅ) **ಶ್ರೀ ಐವನ್ ಡಿ'ಸೋಜಾ** ಅವರು ದಕ್ಷಿಣ ಕನ್ನಡ ಜಿಲ್ಲೆಯ ಎನ್.ಹೆಚ್-169ರ ಗುರುಪುರ ಸೇತುವೆ ದುರಸ್ಥಿ ಬಗ್ಗೆ **ಮಾನ್ಯ ಲೋಕೋಪಯೋಗಿ** ಸಚಿವರ ಗಮನ ಸೆಳೆಯುವುದು.

ಆ) **ಶ್ರೀ ಎಂ. ಕೆ. ಪ್ರಾಣೇಶ್** ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ವಿವಿಧ ಹುದ್ದೆಗಳನ್ನು ಸೃಜಿಸುವುದರ ಬಗ್ಗೆ **ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ** ಸಚಿವರ ಗಮನ ಸೆಳೆಯುವುದು.

**04. ನಿಯಮ 330ರ ಮೇರೆಗೆ**

**ಶ್ರೀ ಮರಿತಿಬ್ಬೇಗೌಡ** ಅವರು ಪದವಿ ಪೂರ್ವ ಶಿಕ್ಷಣ ಇಲಾಖೆಯು 2018-2019ನೇ ಸಾಲಿನ ಶೈಕ್ಷಣಿಕ ವೇಳಾ ಪಟ್ಟಿಯ ಸುತ್ತೋಲೆ ಹೊರಡಿಸಿ, ತರಗತಿಗಳನ್ನು ಪ್ರಾರಂಭಿಸಿರುವುದರಿಂದ ಉಂಟಾದ ತೊಂದರೆ ವಿಷಯವನ್ನು ಪ್ರಸ್ತಾಪಿಸುವುದು. **(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

## ಅನುಬಂಧ–VII

**ಕರ್ನಾಟಕ ವಿಧಾನಸಭೆ**

ಹದಿನಾಲ್ಕನೇ ವಿಧಾನಸಭೆ

(ಹದಿನಾಲ್ಕನೇ ಅಧಿವೇಶನ)

**ಸಂತಾಪ ಸೂಚನೆ**

**ಮಾನ್ಯ ಸಭಾಧ್ಯಕ್ಷರು:**

ವಿಧಾನಸಭೆಯ ಹಾಲಿ ಸದಸ್ಯರಾಗಿದ್ದ ಸಿದ್ದು ಭೀ.ನ್ಯಾಮಗೌಡ ಮತ್ತು ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ವೈ.ಎನ್.ರುದ್ರೇಶಗೌಡ ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

**ಸಿದ್ದು ಭೀ.ನ್ಯಾಮಗೌಡ**

ಸಿದ್ದು ನ್ಯಾಮಗೌಡ ರವರು ದಿನಾಂಕ: 05.08.1949ರಂದು ಬಾಗಲಕೋಟೆ ಜಿಲ್ಲೆಯ ಜಮಖಂಡಿಯಲ್ಲಿ ಜನಸಿದ್ದು, ಬಿ.ಎಸ್ಸಿ. ಪದವೀಧರರಾಗಿದ್ದರು. 1987ರಲ್ಲಿ ಕೃಷ್ಣನದಿ ತೀರದ ರೈತರನ್ನು ಸಂಘಟಿಸಿ ಅವರ ಪರಿಶ್ರಮ ಮತ್ತು ಅವರ ವಂತಿಗೆಯಿಂದಲೇ ಚಿಕ್ಕಪಡಸಲಗಿ ಸಮೀಪ **"ಕೃಷ್ಣಾ ನದಿ"**ಗೆ ಸರ್ಕಾರದ ಯಾವುದೇ ಆರ್ಥಿಕ ಅನುದಾನವಿಲ್ಲದೆ, ಬ್ಯಾರೇಜ್‌ನ್ನು ನಿರ್ಮಿಸಿದ ಖ್ಯಾತಿ ಸಿದ್ದು ನ್ಯಾಮಗೌಡರದ್ದಾಗಿದೆ. ಅಂದಿನಿಂದ ರೈತರಿಂದಲೇ **"ಬ್ಯಾರೇಜ್ ಸಿದ್ದು"** ಎಂಬ ಬಿರುದು ಇವರಿಗೆ ನಾಮಾಂಕಿತಗೊಂಡಿತ್ತು. ರೈತರ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ನ್ಯಾಮಗೌಡ ಅವರು ರೈತರಿಗಾಗಿ ಜಮಖಂಡಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಿದ್ದಲ್ಲದೇ, ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಸೇವೆ ಸಲ್ಲಿಸಿದ್ದರು.

ದಿವಂಗತರು 1991ರಲ್ಲಿ ಬಾಗಲಕೋಟೆ ಲೋಕಸಭಾ ಕ್ಷೇತ್ರದಿಂದ ಚುನಾಯಿತರಾಗಿ 1996ರವರೆಗೆ ಕಾರ್ಯನಿರ್ವಹಿಸಿದ್ದರಲ್ಲದೆ ಅದೇ ಅವಧಿಯಲ್ಲಿ ಕೇಂದ್ರ ಕಲ್ಲಿದ್ದಲು ಖಾತೆಯ ಸಹಾಯಕ ಸಚಿವರಾಗಿಯೂ ಸೇವೆ ಸಲ್ಲಿಸಿದ್ದರು. ದಿವಂಗತರು 2004 ರಿಂದ 2010 ರವರೆಗೆ ವಿಧಾನ ಪರಿಷತ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದು, 2013ರಲ್ಲಿ ಜಮಖಂಡಿ ಸರಳ ಸಜ್ಜನ ರಾಜಕಾರಣಿಯಾಗಿದ್ದ ಸಿದ್ದು ನ್ಯಾಮಗೌಡ ಅವರು ದಿನಾಂಕ 28.05.2018ರಂದು ನಿಧನ ಹೊಂದಿರುತ್ತಾರೆ.

**ವೈ.ಎನ್.ರುದ್ರೇಶಗೌಡ**

ವೈ.ಎನ್.ರುದ್ರೇಶಗೌಡ ರವರು ದಿನಾಂಕ: 16.10.1955ರಂದು ಹಾಸನ ಜಿಲ್ಲೆಯ ಬೇಲೂರಿನಲ್ಲಿ ಜನಿಸಿದ್ದು, ಕಾನೂನು ಪದವೀಧರಾಗಿದ್ದರು. 1987ರಲ್ಲಿ ಕಳ್ಳೇರಿ ಕ್ಷೇತ್ರದಿಂದ ಮತ್ತು 1995ರಲ್ಲಿ ನಾಗೇನಹಳ್ಳಿ ಕ್ಷೇತ್ರದಿಂದ ಹಾಸನ ಜಿಲ್ಲಾ ಪಂಚಾಯತ್ ಸದಸ್ಯರಾಗಿ ಆಯ್ಕೆಯಾಗಿದ್ದು, 1996ರಲ್ಲಿ ಅದೇ ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

1996ರಲ್ಲಿ ಹಾಸನ ಲೋಕಸಭಾ ಕ್ಷೇತ್ರದಿಂದ ಲೋಕಸಭೆಗೆ ಪ್ರಥಮ ಪ್ರಯತ್ನದಲ್ಲಿಯೇ ಚುನಾಯಿತರಾಗಿ ಕಾರ್ಯನಿರ್ವಹಿಸಿದ್ದು, 2008 ಮತ್ತು 2013ರಲ್ಲಿ ಕ್ರಮವಾಗಿ 13 ಮತ್ತು 14ನೇ ವಿಧಾನಸಭೆಗೆ ಬೇಲೂರು ವಿಧಾನಸಭಾ ಕ್ಷೇತ್ರದಿಂದ ಆಯ್ಕೆಗೊಂಡು ಕಾರ್ಯನಿರ್ವಹಿಸಿದ್ದರು.

ಸರಳ ಸಜ್ಜನ ರಾಜಕಾರಣಿಯಾಗಿದ್ದ ವೈ.ಎನ್.ರುದ್ರೇಶ್‌ಗೌಡ ಅವರು 14ನೇ ವಿಧಾನಸಭೆಯ ಸದಸ್ಯರಾಗಿದ್ದಾಗಲೇ ದಿನಾಂಕ 24.03.2018ರಂದು ನಿಧನ ಹೊಂದಿರುತ್ತಾರೆ.

(ಮೃತರ ಗೌರವಾರ್ಥ ಮಾನ್ಯ ಸದಸ್ಯರು ಒಂದು ನಿಮಿಷ ಮೌನ ಆಚರಿಸಿದರು)

**ಸಭಾಧ್ಯಕ್ಷರು**

**ಕರ್ನಾಟಕ ವಿಧಾನಸಭೆ**

**ಅನುಬಂಧ-VIII**

# ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಹಾಗೂ ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳ ಹಾಗೂ ಉತ್ತರಗಳ ಕೆಲವು ಮಾದರಿಗಳು, ವಿಧಾನ ಸಭೆ ಮತ್ತು ವಿಧಾನ ಪರಿಷತ್ತು

**ಕರ್ನಾಟಕ ವಿಧಾನಸಭೆ**

| | | | |
|---|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 435 |
| 2. | ಸದಸ್ಯರ ಹೆಸರು | : | |
| 3. | ಉತ್ತರಿಸಬೇಕಾದ ದಿನಾಂಕ | : | |
| 4. | ಉತ್ತರಿಸಬೇಕಾದ ಸಚಿವರು | : | ವೈದ್ಯಕೀಯ ಶಿಕ್ಷಣ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಶಿಕ್ಷಣ ಕಾಲೇಜನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; | ಜಿಲ್ಲೆಗೊಂದು ಸರ್ಕಾರಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಬೇಕೆಂಬುದು ಸರ್ಕಾರದ ನೀತಿಯಾಗಿದೆ. ಅದರಂತೆ ಪ್ರಸ್ತುತ ರಾಜ್ಯದಲ್ಲಿ 16 ಜಿಲ್ಲೆಗಳಲ್ಲಿ ರಾಜ್ಯ ಸರ್ಕಾರದ ವ್ಯಾಪ್ತಿಯಡಿ 16 ಮತ್ತು ಕೇಂದ್ರ ಸರ್ಕಾರಿ ಸ್ವಾಮಿತ್ವದ 02 ಇ.ಎಸ್.ಐ. ವೈದ್ಯಕೀಯ ಕಾಲೇಜುಗಳು |

| | | |
|---|---|---|
| ಆ) | ಹಾಗಿದ್ದಲ್ಲಿ ಸದರಿ ಕಾಲೇಜನ್ನು ಯಾವ ಸ್ಥಳದಲ್ಲಿ ಸ್ಥಾಪಿಸಲಾಗುವುದು? | ಕಾರ್ಯನಿರ್ವಹಿಸುತ್ತಿವೆ.<br><br>ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಬೆಂಗಳೂರು ನಗರ ಜಿಲ್ಲೆಗೆ ಹೊಂದಿಕೊಂಡಿದ್ದು, ಜಿಲ್ಲಾ ಕೇಂದ್ರ ಸ್ಥಾನವು ಬೆಂಗಳೂರು ಮಹಾನಗರದಲ್ಲಿರುತ್ತದೆ.<br><br>ಬೆಂಗಳೂರು ಕೇಂದ್ರಸ್ಥಾನದಲ್ಲಿ ಈಗಾಗಲೇ ಬೆಂಗಳೂರು ವೈದ್ಯಕಿಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು ಕಾರ್ಯನಿರ್ವಹಿಸುತ್ತಿದ್ದು, 2016–17 ನೇ ಸಾಲಿನ ಆಯವ್ಯಯ ಘೋಷಣೆಯನ್ವಯ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ಹೊಸ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಕ್ರಮವಹಿಸಿರುವುದರಿಂದ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹೊಸ ವೈದ್ಯಕೀಯ ಕಾಲೇಜನ್ನು ಸ್ಥಾಪಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುವುದಿಲ್ಲ. |

ಸಂಖ್ಯೆ: ಆಕುಕ 58 ಎಂಪಿಎಸ್ 2018

ವೈದ್ಯಕೀಯ ಶಿಕ್ಷಣ ಸಚಿವರು

<u>**ಕರ್ನಾಟಕ ವಿಧಾನಸಭೆ**</u>

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 08 |
| 2 | ಸದಸ್ಯರ ಹೆಸರು | ; | |
| 3 | ಉತ್ತರಿಸುವ ದಿನಾಂಕ | : | |
| 4 | ಉತ್ತರಿಸುವವರು | : | ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ನಗರದಲ್ಲಿ ಬಿದ್ದ ಭಾರಿ ಮಳೆಯಿಂದಾಗಿ ರಸ್ತೆ ಚರಂಡಿಗಳು ನೀರು ತುಂಬಿ ಮನೆಗಳಿಗೆಲ್ಲಾ ನುಗ್ಗಿ ಅನಾಹುತಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರು ನಗರದಲ್ಲಿ ಬಿದ್ದ ಭಾರಿ ಮಳೆಯಿಂದ ನಗರದ ಕೆಲವೊಂದು ತಗ್ಗು ವಸತಿ ಪ್ರದೇಶಗಳಿಗೆ ಮಳೆ ನೀರು ನುಗ್ಗಿ ಜನರಿಗೆ ತೊಂದರೆ ಉಂಟಾಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆ. |
| **ಆ** | ಹಾಗಿದ್ದಲ್ಲಿ, ಮಳೆ ನೀರು ಸರಾಗವಾಗಿ ಹರಿದು ಹೋಗಲು ಹೊಸದಾಗಿ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಲಾಗಿದೆಯೇ; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಾನಿಗೊಳಗಾಗಬಹುದಾದ ತಗ್ಗು ಪ್ರದೇಶಗಳನ್ನು ಗುರುತಿಸಿ ಶಾಶ್ವತ ಪರಿಹಾರ ಕಾಮಗಾರಿಗಳನ್ನು ನಿರ್ವಹಿಸಲು, ಮಳೆನೀರು ಪ್ರವಾಹ ನಿಯಂತ್ರಣಾ ಕಾಮಗಾರಿಗಳು ಹಾಗೂ ನೀರುಗಾಲುವೆಗಳ ನಿರ್ವಹಣೆಗಾಗಿ ಸರ್ಕಾರವು 2016-17, 2017-18ನೇ ಸಾಲಿನ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ-1), ದಿನಾಂಕ: 21-06-2016 ರಲ್ಲಿ ರೂ.800 ಕೋಟಿ ಹಾಗೂ ಆದೇಶ ಸಂಖ್ಯೆ: ನಅಇ 536 ಎಂಎನ್‌ವೈ 2017, ದಿನಾಂಕ: 21-09-2017 ರಲ್ಲಿ ರೂ.300 ಕೋಟಿ ಒಟ್ಟು ರೂ.1100.00 ಕೋಟಿಗಳ ಅನುದಾನದಲ್ಲಿ ನಗರೋತ್ಥಾನ ಯೋಜನೆಯಡಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br><br>ಹೆಚ್ಚುವರಿ ಮಳೆನೀರಿನ ಪ್ರವಾಹವನ್ನು ನಿಯಂತ್ರಿಸುವ ಮಳೆನೀರುಗಾಲುವೆಗಳ ಭದ್ರತೆ ಮತ್ತು ಸುವ್ಯವಸ್ಥೆಗಾಗಿ ಹಾಗೂ |

| | | |
|---|---|---|
| | | ಮುಂಬರುವ ವರ್ಷಗಳಲ್ಲಿನ ಅಧಿಕ ಪ್ರಮಾಣದ ನೀರಿನ ವ್ಯವಸ್ಥಿತ ನಿರ್ವಹಣೆಗಾಗಿ ಮಳೆನೀರುಗಾಲುವೆಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ಬೃಹತ್ ನೀರುಗಾಲುವೆ ವಿಷಯಕ್ಕೆ ಸಂಬಂಧಪಟ್ಟಂಥೆ ನುರಿತ ತಾಂತ್ರಿಕ ಸಮಾಲೋಚಕರಾದ M/s. STUP consultants ಇವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಮಾಲೋಚಕರಾಗಿ ನೇಮಕ ಮಾಡಿಕೊಂಡಿದ್ದು, ಸದರಿ ಸಂಸ್ಥೆಯವರು ನೀಡಿರುವ ಸಲಹೆ ಮತ್ತು ವರದಿಗಳನ್ವಯ ಕ್ರಮ ವಹಿಸಲಾಗುತ್ತಿರುತ್ತದೆ. ಮುಂದುವರೆದು, ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳನ್ನು ಗುರುತಿಸಿ ಇನ್ನು ಮುಂದೆ ಆಗುವ ಪ್ರವಾಹ ಹಾನಿಯನ್ನು ತಪ್ಪಿಸಲು ಅಭಿವೃದ್ಧಿ ಕಾಮಗಾರಿಗಳನ್ನು ಹಾಗೂ ನಿರ್ವಹಣೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರವು ಪತ್ರ ಸಂಖ್ಯೆ: ನಅಇ 565 ಎಂಎಸ್‌ವೈ 2017, ದಿನಾಂಕ: 21-12-2017 ರಲ್ಲಿ ಹೆಚ್ಚುವರಿಯಾಗಿ ರೂ.117.00 ಕೋಟಿಗಳ ಅಂದಾಜು ಮೊತ್ತದಲ್ಲಿ ಬೃಹತ್ ನೀರುಗಾಲುವೆ ವಿಭಾಗದ ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್ ಪ್ರಕ್ರಿಯೆಯನ್ನು ನಡೆಸುವಂತೆ ಆಯುಕ್ತರು, ಬಿಬಿಎಂಪಿ ಇವರಿಗೆ ನಿರ್ದೇಶನ ನೀಡಲಾಗಿದೆ. ಅದರಂತೆ, ಪಾಲಿಕೆಯ ವತಿಯಿಂದ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |

**ಸಂಖ್ಯೆ: ನಇ 75 ಎಂಎಸ್‌ವೈ 2018**

ಬೆಂಗಳೂರು ಅಭಿವೃದ್ಧಿ ಹಾಗೂ

ನಗರ ಯೋಜನಾ ಸಚಿವರು

**ಕರ್ನಾಟಕ ವಿಧಾನಸಭೆ**

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 240 |
| ಸದಸ್ಯರ ಹೆಸರು | : | |
| ಉತ್ತರಿಸಬೇಕಾದ ದಿನಾಂಕ | : | |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವು ತನ್ನ ವ್ಯಾಪ್ತಿಯಲ್ಲಿ ಹಮ್ಮಿಕೊಂಡು ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳು ಮತ್ತು ಪರಿಣಾಮಕಾರಿ ಕ್ರಿಯಾಯೋಜನೆಗಳಾವುವು; (ವಿವರ ಒದಗಿಸುವುದು); | 1) ಬೆಂಗಳೂರು ಮಹಾನಗರ ಪ್ರದೇಶದ ಯೋಜಿತ ಬೆಳವಣಿಗೆಯ ಉದ್ದೇಶದಿಂದ ಬೆಂಗಳೂರು ಮಹಾನಗರ ಪ್ರದೇಶದ ರಚನಾ ನಕ್ಷೆ–2011 (Structure Plan-2011) ಅನ್ನು 2005 ರಲ್ಲಿ ಹಾಗೂ 'ಪರಿಷ್ಕೃತ ರಚನಾ ನಕ್ಷೆ–2031' ನ್ನು 2017ರಲ್ಲಿ ತಯಾರಿಸಲಾಗಿರುತ್ತದೆ.<br>2) ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಪ್ರಯಾಣಿಕರ, ಸರಕು ಸಾಗಣೆ ಮತ್ತು ಸಾರಿಗೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಕುರಿತು 'ಸಮಗ್ರ ಸಂಚಾರ ಮತ್ತು ಸಾರಿಗೆ ಅಧ್ಯಯನ'ವನ್ನು ನಡೆಸಲಾಗಿದೆ.<br>3) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಲ್ಲಿ ಲಭ್ಯವಿರುವ ಹಣದಲ್ಲಿ ಕನಕಪುರ ತಾಲ್ಲೂಕಿನ ಕೋಡಿಹಳ್ಳಿ, ದೊಡ್ಡಾಲಹಳ್ಳಿ, ಬನ್ನಿಮುಕ್ಕೊಡ್ಲು ಗ್ರಾಮ ಪಂಚಾಯಿತಿಗಳಲ್ಲಿ ತಲಾ ರೂ. 1.00 ಕೋಟಿ ಹಾಗೂ ರಾಮನಗರ ತಾಲ್ಲೂಕು ಕಂಚುಗಾರನಹಳ್ಳಿ ಪರಿಮಿತಿಯಲ್ಲಿ ರೂ.2.00 ಕೋಟಿ ಅಂದಾಜು ಮೊತ್ತದ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖಾ ವತಿಯಿಂದ 2016ರಲ್ಲಿ ಕೈಗೊಳ್ಳಲಾಗಿರುತ್ತದೆ.<br>4) ಬೆಂಗಳೂರು ಮಹಾನಗರ ಪ್ರದೇಶ ವ್ಯಾಪ್ತಿಯಲ್ಲಿ ಸಂಗ್ರಹವಾಗಿರುವ 'ಕೆರೆ ಸಂರಕ್ಷಣಾ ಶುಲ್ಕ'ದಲ್ಲಿ ಕನಕಪುರ ತಾಲ್ಲೂಕು, ದೊಡ್ಡಾಲಹಳ್ಳಿ ಗ್ರಾಮದ ಅರಿಶಿನಕುಂಟೆ ಕೆರೆ ಹಾಗೂ ಕೋಡಿಹಳ್ಳಿ ಗ್ರಾಮದ ಕೆರೆ ಅಭಿವೃದ್ಧಿಯನ್ನು ರೂ.4.99 ಕೋಟಿ ಅಂದಾಜು ವೆಚ್ಚದಲ್ಲಿ |

| | | |
|---|---|---|
| | | ಕೈಗೊಳ್ಳಲು ಕನಕಪುರ ಯೋಜನಾ ಪ್ರಾಧಿಕಾರಕ್ಕೆ ರೂ.3.39 ಕೋಟಿ ಮೊತ್ತದ ಅನುದಾನವನ್ನು ದಿನಾಂಕ: 16.05.2017 ರಲ್ಲಿ ಬಿಡುಗಡೆ ಮಾಡಲಾಗಿದೆ.<br>5) ಬೆಂಗಳೂರು ಮಹಾನಗರ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಯೋಜನಾ ಪ್ರದೇಶಗಳ ಮಹಾಯೋಜನೆಗಳ ತಯಾರಿಕೆ ಮತ್ತು ಪರಿಷ್ಕರಣೆ ಕಾರ್ಯಗಳನ್ನು ಕೈಗೊಳ್ಳಲಾಗಿರುತ್ತದೆ. |
| ಆ | ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಕುರಿತು ಪ್ರಾಧಿಕಾರದ ಮುಂದಿರುವ ಪ್ರಸ್ತಾವನೆಗಳು ಯಾವುವು; | ಬೆಂಗಳೂರು ಮಹಾನಗರ ಪ್ರದೇಶ ವ್ಯಾಪ್ತಿಯಲ್ಲಿ ಕೃಷಿ ವಲಯದಲ್ಲಿ ಇರುವ ಗ್ರಾಮಗಳ 'ಗ್ರಾಮ ಅಭಿವೃದ್ಧಿ ನಕ್ಷೆ' ತಯಾರಿಸುವ ಯೋಜನೆ ಕೈಗೆತ್ತಿಕೊಂಡಿದೆ. |
| ಇ | ಪ್ರಾಧಿಕಾರವು ಮಹಾನಗರ ಪ್ರದೇಶಾಭಿವೃದ್ಧಿಗಾಗಿ ಹೊಂದಿರುವ ನಿಲುವುಗಳು ಹಾಗೂ ದೀರ್ಘಕಾಲಿಕ ಯೋಜನೆಗಳು ಯಾವುವು? | ಬೆಂಗಳೂರು ಮಹಾನಗರ ಪ್ರದೇಶ ವ್ಯಾಪ್ತಿಯಲ್ಲಿ ಬೆಂಗಳೂರು ಕೇಂದ್ರ ನಗರ ಹೊರತುಪಡಿಸಿ ಉಳಿದ ಬೆಂಗಳೂರು ಮಹಾನಗರ ಪ್ರದೇಶ ವ್ಯಾಪ್ತಿಯಲ್ಲಿ ನಗರೀಕರಣ ಅಭಿವೃದ್ಧಿಗಾಗಿ ಈ ಕೆಳಕಂಡಂತೆ 8 ಕ್ಲಸ್ಟರ್‌ಗಳನ್ನು ಮತ್ತು 4 ನೋಡ್‌ಗಳನ್ನು ಗುರುತಿಸಲಾಗಿದೆ.<br>ಕ್ಲಸ್ಟರ್ 1 : ರಾಮನಗರ–ಚನ್ನಪಟ್ಟಣ<br>ಕ್ಲಸ್ಟರ್ 2 : ಬಿಡದಿ–ಹಾರೋಹಳ್ಳಿ<br>ಕ್ಲಸ್ಟರ್ 3 : ನೆಲಮಂಗಲ–ಪೀಣ್ಯ<br>ಕ್ಲಸ್ಟರ್ 4 : ಡಾಬಸ್‌ಪೇಟೆ–ನೆಲಮಂಗಲ<br>ಕ್ಲಸ್ಟರ್ 5 : ದೊಡ್ಡಬಳ್ಳಾಪುರ<br>ಕ್ಲಸ್ಟರ್ 6 : ದೇವನಹಳ್ಳಿ–ಯಲಹಂಕ<br>ಕ್ಲಸ್ಟರ್ 7 : ಹೊಸಕೋಟೆ–ಕೆ.ಆರ್.ಪುರಂ<br>ಕ್ಲಸ್ಟರ್ 8 : ಜಿಗಣಿ–ಎಲೆಕ್ಟ್ರಾನಿಕ್ ಸಿಟಿ–ಬೊಮ್ಮಸಂದ್ರ – ಅತ್ತಿಬೆಲೆ<br><br>ಬೆಳವಣಿಗೆ ನೋಡ್ 1 : ಆನೇಕಲ್<br>ಬೆಳವಣಿಗೆ ನೋಡ್ 2 : ಕನಕಪುರ<br>ಬೆಳವಣಿಗೆ ನೋಡ್ 3 : ಮಾಗಡಿ<br>ಬೆಳವಣಿಗೆ ನೋಡ್ 4 : ವಿಜಯಪುರ<br><br>• ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಂಗಳೂರು ನಗರ ಸಂಚಾರದಟ್ಟಣೆ ಹಾಗೂ ಜನಸಾಂದ್ರತೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿ ಉಪನಗರ ವರ್ತುಲ ರಸ್ತೆ (STRR) ಅಭಿವೃದ್ಧಿಗೆ ಯೋಜಿಸಲಾಗಿದೆ. |

| | | |
|---|---|---|
| | | • ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವತಿಯಿಂದ "ಕೆಲಸ-ಆಟ-ವಸತಿ" ಇವುಗಳನ್ನು ಆಧಾರವನ್ನಾಗಿ ಇಟ್ಟುಕೊಂಡು ಗ್ರೇಟರ್ ಬೆಂಗಳೂರು-ಬಿಡದಿ ಸ್ಮಾರ್ಟ್ ಸಿಟಿ ಸಮಗ್ರ ಉಪನಗರವನ್ನು ನಿರ್ಮಿಸಲು ಯೋಜಿಸಲಾಗಿದೆ. |

**ಸಂಖ್ಯೆ: ನಅಇ 23 ಬಿಎಂಆರ್ 2018**

ಬೆಂಗಳೂರು ಅಭಿವೃದ್ಧಿ ಹಾಗೂ

ನಗರ ಯೋಜನಾ ಸಚಿವರು

**<u>ಕರ್ನಾಟಕ ವಿಧಾನಸಭೆ</u>**

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 131 |
| ಸದಸ್ಯರ ಹೆಸರು | : | |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |
| ಉತ್ತರಿಸಬೇಕಾದ ದಿನಾಂಕ | : | |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ನೂತನ ಪಿಂಚಣಿ ಯೋಜನೆಯಿಂದ ನೌಕರರು ಪಿಂಚಣಿಯಿಂದ ಬಾಧಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; | ಈ ಬಗ್ಗೆ ಹಲವಾರು ಮನವಿಗಳನ್ನು ಸ್ವೀಕರಿಸಲಾಗಿದೆ. |
| (ಆ) | ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು. (ವಿವರ ಒದಗಿಸುವುದು) | ಆರನೇ ವೇತನ ಆಯೋಗವು ಇತ್ತೀಚೆಗೆ ನೂತನ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ಕೆಲವು ಶಿಫಾರಸ್ಸುಗಳನ್ನು ಮಾಡಿದ್ದು ಅವುಗಳು ಪರಿಶೀಲನೆಯಲ್ಲಿರುತ್ತವೆ. |
| (ಇ) | 2006ನೇ ಸಾಲಿನಿಂದ ನೇಮಕಗೊಂಡ ನೌಕರರ ಎನ್.ಪಿ.ಎಸ್. ಯೋಜನೆಯಿಂದ ನೀಡಲಾಗುವ ಪಿಂಚಣಿ ಸೌಲಭ್ಯದಲ್ಲಿ ಹಲವು ನ್ಯೂನತೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಇಲ್ಲ. ಈ ಯೋಜನೆಯು ಈಗಾಗಲೇ ಕೇಂದ್ರ ಸರ್ಕಾರದ ಹಾಗೂ ದೇಶದ ಇತರೆ ರಾಜ್ಯಗಳಲ್ಲಿ ಕಾರ್ಯರೂಪದಲ್ಲಿದೆ. |
| (ಈ) | ಹಾಗಿದ್ದಲ್ಲಿ, ಈ ನ್ಯೂನತೆಗಳನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು. (ವಿವರ ಒದಗಿಸುವುದು) | ಉದ್ಭವಿಸುವುದಿಲ್ಲ. |
| (ಉ) | ಎನ್.ಪಿ.ಎಸ್. ಯೋಜನೆಯ ಪಿಂಚಣಿ ಸೌಲಭ್ಯದಲ್ಲಿ ಟ್ರಸ್ಟ್ ಮ್ಯಾನೇಜ್‌ಮೆಂಟ್ ಆರ್ಥಿಕ | ಇಲ್ಲ. |

| | | |
|---|---|---|
| | ಕಾರ್ಯನಿರ್ವಹಣೆಯಲ್ಲಿ ಯಾವುದೇ ಬದ್ಧತೆಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. | |
| (ಊ) | ಹಾಗಿದ್ದಲ್ಲಿ, ಸುಮಾರು 180 ಲಕ್ಷ ನೌಕರರು ನಿವೃತ್ತಿ ಸಮಯದಲ್ಲಿ ಪಿಂಚಣಿ ಸೌಲಭ್ಯದಿಂದ ವಂಚಿತರಾಗುತ್ತಿದ್ದು, ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು) | ಉದ್ಭವಿಸುವುದಿಲ್ಲ. |

**ಸಂಖ್ಯೆ: ಆಇ/(ಎ) 14 ಪಿಇಎಸ್ 2018**

ಮುಖ್ಯಮಂತ್ರಿ

# ಕರ್ನಾಟಕ ವಿಧಾನಸಭೆ

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 140 |
| ಸದಸ್ಯರ ಹೆಸರು | |
| ಉತ್ತರದ ದಿನಾಂಕ | |
| ಉತ್ತರಿಸುವವರು | ಅಬಕಾರಿ ಸಚಿವರು |

| ಕ್ರ, ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಹೋಂ ಸ್ಟೇಗಳಲ್ಲಿ ಮದ್ಯ ಸರಬರಾಜಿಗೆ ಅವಕಾಶ ನೀಡಲಾಗಿದೆಯೇ? | ಇಲ್ಲ |
| ಆ) | ಕೆಲವೊಂದು ಹೋಂ ಸ್ಟೇಗಳಲ್ಲಿ ಅಕ್ರಮವಾಗಿ ಮದ್ಯ ಸರಬರಾಜು ಆಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಇ) | ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು) | ನಿಯಮಗಳನ್ನು ಉಲ್ಲಂಘಿಸಿ ಹೋಂ ಸ್ಟೇಗಳಲ್ಲಿ ಮದ್ಯ ಸೇವನೆಗೆ ಅವಕಾಶ ಮಾಡಿಕೊಟ್ಟಿರುವವರ ವಿರುದ್ಧ ಅಬಕಾರಿ ಕಾಯ್ದೆ 1965 ಕಲಂ 15(ಎ) ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.<br><br>ಈ ಸಂಬಂಧ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಕ್ಯಾಪಿಟಲ್ ಹೋಂ ಸ್ಟೇ ಇಲ್ಲಿ ಮದ್ಯ ಸೇವನೆಗೆ ಅವಕಾಶ ಮಾಡಿದವರ ವಿರುದ್ಧ 2016-17ನೇ ಸಾಲಿನಲ್ಲಿ ಎರಡು ಪ್ರಕರಣಗಳು ಮತ್ತು 2017-18ನೇ ಸಾಲಿನಲ್ಲಿ ಒಂದು ಪ್ರಕರಣವನ್ನು ದಾಖಲಿಸಲಾಗಿದೆ. ಸದರಿ ಪ್ರಕರಣಗಳನ್ನು ರೂ. 5000/- ದಂಡ ವಿಧಿಸುವ ಮೂಲಕ ಇತ್ಯರ್ಥಪಡಿಸಲಾಗಿದೆ. |

ಆಇ 05 ಇಎಲ್‌ಕ್ಯೂ 2018

ಅಬಕಾರಿ ಸಚಿವರು

## ಕರ್ನಾಟಕ ವಿಧಾನಸಭೆ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 242 |
| ಸದಸ್ಯರ ಹೆಸರು : | |
| ಉತ್ತರಿಸಬೇಕಾದ ದಿನಾಂಕ : | |
| ಉತ್ತರಿಸಬೇಕಾದ ಸಚಿವರು : | ಮಾನ್ಯ ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗಿನ ರಸ್ತೆಗೆ ಫೆರಿಪೆರಲ್ ರಿಂಗ್ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಹಂತದಲ್ಲಿದೆಯೇ; | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬೆಂಗಳೂರು ನಗರದ ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗೆ ಹೊರವರ್ತುಲ ರಸ್ತೆ ನಿರ್ಮಿಸಲಾಗಿದೆ. ತುಮಕೂರು ರಸ್ತೆಯಿಂದ ಹೊಸೂರು ರಸ್ತೆಯವರೆಗೆ ಫೆರಿಪೆರಲ್ ರಿಂಗ್ ರಸ್ತೆ-1ನ್ನು ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ. ಸದರಿ ಫೆರಿಪೆರಲ್ ರಿಂಗ್ ರಸ್ತೆ ಭಾಗ-1ನ್ನು ತುಮಕೂರು ರಸ್ತೆಯ ಬಳಿ ಹಾಗೂ ಹೊಸೂರು ರಸ್ತೆ ಬಳಿ ನೈಸ್ ರಸ್ತೆಗೆ ಜೋಡಿಸಲು ಉದ್ದೇಶಿಸಲಾಗಿರುತ್ತದೆ. |
| ಆ) | ಹಾಗಿದ್ದಲ್ಲಿ, ಈಗಾಗಲೇ ಮಾರ್ಗವನ್ನು ಗುರುತಿಸಲಾಗಿದೆಯೇ ಮತ್ತು ಜಮೀನನ್ನು ವಶಪಡಿಸಿಕೊಳ್ಳಲಾಗಿದೆಯೇ; (ವಿವಿರ ನೀಡುವುದು) | ಫೆರಿಪೆರಲ್ ರಿಂಗ್ ರಸ್ತೆಯ ಮಾರ್ಗವನ್ನು ಈಗಾಗಲೇ ಗುರುತಿಲಾಗಿದ್ದು, ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ 1810 ಎಕರೆ 18.5 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ದಿನಾಂಕ 29.06.2007 ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಹಾಗೂ ಸದರಿ ಜಮೀನುಗಳ ಸ್ವಾಧೀನವನ್ನು ಇನ್ನು ಪಡೆದಿರುವುದಿಲ್ಲ. |
| ಇ) | ಸದರಿ ಫೆರಿಪೆರಲ್ ರಿಂಗ್ ರಸ್ತೆ ನಿರ್ಮಾಣಕ್ಕೆ ಗುರುತಿಸಿರುವ ಮಾರ್ಗಗಳಾವುವು; (ವಿವರ ನೀಡುವುದು); | ತುಮಕೂರು ರಸ್ತೆಯಿಂದ (ರಾಷ್ಟ್ರೀಯ ಹೆದ್ದಾರಿ-4) ಪ್ರಾರಂಭವಾಗಿ ಬಳ್ಳಾರಿ ರಸ್ತೆ(NH-4) ಹಳೆ ಮದ್ರಾಸು ರಸ್ತೆಯನ್ನು (NH-4) ದಾಟಿ ಹೊಸೂರು ರಸ್ತೆಯನ್ನು (NH-7) ಸೇರುವ 65.53 ಕಿ.ಮೀ ಉದ್ದದ ಫೆರಿಪೆರಲ್ ರಿಂಗ್ ರಸ್ತೆ ಭಾಗ-1ನ್ನು ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ. |

| | | |
|---|---|---|
| ಈ) | ಈ ಪ್ರಸ್ತಾವನೆ ಯಾವ ಹಂತದಲ್ಲಿದೆ (ಪೂರ್ಣ ವಿವರ ನೀಡುವುದು)? | ಫೆರಿಪೆರಲ್ ರಿಂಗ್ ರಸ್ತೆ ಯೋಜನೆಯನ್ನು Special Purpose Vehicle (SPV) ಮುಖಾಂತರ ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ನಅಇ 345 ಬೆಂಅಸೇ 2013 ದಿನಾಂಕ: 06.12.2016 ರಲ್ಲಿ ಅನುಮೋದನೆ ನೀಡಲಾಗಿದೆ. ಅದರಂತೆ The Bangalure Peripheral Ring Road Development Corporation Limited ನ್ನು ದಿನಾಂಕ: 05.05.2017 ರಂದು ನೊಂದಾಯಿಸಲಾಗಿದೆ. ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸುವ ಪ್ರಕ್ರಿಯೆಗಳು ಚಾಲನೆಯಲ್ಲಿರುತ್ತವೆ. |

ಸಂ:ನಅಇ 58 ಬೆಂಭೂಸ್ವಾ 2018.

ಬೆಂಗಳೂರು ಅಭಿವೃದ್ಧಿ ಹಾಗೂ

ನಗರ ಯೋಜನಾ ಸಚಿವರು

# ಕರ್ನಾಟಕ ವಿಧಾನ ಸಭೆ

| | | |
|---|---|---|
| 1) | ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : | 1306 |
| 2) | ಸದಸ್ಯರ ಹೆಸರು : | |
| 3) | ಉತ್ತರಿಸಬೇಕಾದ ದಿನಾಂಕ : | |
| 4) | ಉತ್ತರಿಸಬೇಕಾದ ಸಚಿವರು : | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಹೂಳೆತ್ತುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಹೌದು,<br><br>2016–17ನೇ ಸಾಲಿನಲ್ಲಿ ಈ ಕೆಳಕಂಡ ವಿಭಾಗಗಳಲ್ಲಿ ಕೆರೆಗಳ ಹೂಳೆತ್ತುವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. |

| ಕ್ರ. ಸಂ. | ವಿಭಾಗ | ಹೂಳೆತ್ತಿದ ಕೆರೆಗಳ ಸಂಖ್ಯೆ | ಲೆಕ್ಕ ಶೀರ್ಷಿಕೆ (ಯೋಜನೆ) |
|---|---|---|---|
| 1 | ಹಳಿಯಾಳ | 6 | ಆನೆ ಯೋಜನೆ |
| 2 | ಯಲ್ಲಾಪುರ | 125 | ಮಾನವ–ಪ್ರಾಣಿ ಸಂಘರ್ಷ |
| 3 | ದಾಂಡೇಲಿ | 106 | ಮಾನವ–ಪ್ರಾಣಿ ಸಂಘರ್ಷ –46<br>ಹುಲಿ ಯೋಜನೆ–60 |
| 4 | ಶಿರಸಿ | 7 | ಕಾಂಪಾ–6<br>ವಿಎಫ್‌ಡಿಎಫ್–1 |
| | ಒಟ್ಟು | 244 | |

ಸಂಖ್ಯೆ: ಅಪಜೀ 101 ಎಫ್‌ಟಿಎಸ್ 2017

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು.

## ಕರ್ನಾಟಕ ವಿಧಾನ ಸಭೆ

| | | |
|---|---|---|
| 1) | ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : | 688 |
| 2) | ಸದಸ್ಯರ ಹೆಸರು : | |
| 3) | ಉತ್ತರಿಸಬೇಕಾದ ದಿನಾಂಕ : | |
| 4) | ಉತ್ತರಿಸಬೇಕಾದ ಸಚಿವರು : | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು |

******

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2017–18ನೇ ಸಾಲಿಗೆ ಪ್ರಾದೇಶಿಕ ಅರಣ್ಯ ವಿಭಾಗದಿಂದ ಕಲ್ಬುರ್ಗಿ ಜಿಲ್ಲೆಗೆ ತಾಲ್ಲೂಕುವಾರು ನಿಗಧಿಯಾದ ಅನುದಾನ ಎಷ್ಟು; | 2017–18ನೇ ಸಾಲಿಗೆ ಪ್ರಾದೇಶಿಕ ಅರಣ್ಯ ವಿಭಾಗದಿಂದ ಕಲಬುರಗಿ ಜಿಲ್ಲೆಗೆ ತಾಲ್ಲೂಕುವಾರು ನಿಗಧಿಪಡಿಸಿದ ಅನುದಾನದ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ನಿಗಧಿಪಡಿಸಿದ ಅನುದಾನಕ್ಕೆ ಕ್ರಿಯಾ ಯೋಜನೆ ತಯಾರಿಸಲಾಗಿದೆಯೇ; | ನಿಗದಿಪಡಿಸಿದ ಅನುದಾನಕ್ಕೆ ಕ್ರಿಯಾ ಯೋಜನೆ ತಯಾರಿಸಲಾಗಿದೆ |
| ಇ) | ಕ್ರಿಯಾ ಯೋಜನೆ ತಯಾರಿಸುವಾಗ ಸ್ಥಳೀಯ ಶಾಸಕರ ಗಮನಕ್ಕೆ ತರಲಾಗಿದೆಯೇ; | ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಶೀರ್ಷಿಕೆಗಳಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದವರಿಗೆ ಸೌಲಭ್ಯ ಒದಗಿಸುವಾಗ ಫಲಾನುಭವಿಗಳ ಆಯ್ಕೆಯಲ್ಲಿ ಸಂಬಂಧಿಸಿದ ಮಾನ್ಯ ಶಾಸಕರ ಅನುಮೋದನೆ ಪಡೆಯಲಾಗುತ್ತಿದೆ.<br><br>ಇನ್ನುಳಿದ ಅರಣ್ಯೀಕರಣ ಕಾಮಗಾರಿಗಳಿಗೆ ಜಿಲ್ಲಾ ಮಟ್ಟದಲ್ಲಿ ನಡೆಸಲಾಗುತ್ತಿರುವ ಪ್ರಗತಿ ಪರಿಶೀಲನಾ ಸಭೆಯ ಸಂದರ್ಭದಲ್ಲಿ ಸ್ಥಳೀಯ ಶಾಸಕರ ಗಮನಕ್ಕೆ ತರಲಾಗಿರುತ್ತದೆ. |

| | | |
|---|---|---|
| ಈ) | ಕ್ರಿಯಾ ಯೋಜನೆ ಅನುಮೋದಿಸುವ ಪ್ರಾಧಿಕಾರ ಯಾವುದು? | ಕರ್ನಾಟಕ ಅರಣ್ಯ ಲೆಕ್ಕ ಸಂಹಿತೆ ಸೆಕ್ಷನ್ 34(3)ರಡಿ ಸಂಬಂಧಿಸಿದ ಅಧಿಕಾರಿಗಳು (ಸಕ್ಷಮ ಪ್ರಾಧಿಕಾರಗಳು) ಕ್ರಿಯಾ ಯೋಜನೆಗೆ ಅನುಮೋದನೆ ನೀಡುತ್ತಾರೆ. |

ಸಂಖ್ಯೆ: ಅಪಜೀ 93 ಎಫ್‌ಟಿಎಸ್ 2017

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು.

**ಅನುಬಂಧ**

**2017–18ನೇ ಸಾಲಿಗೆ ಪ್ರಾದೇಶಿಕ ಅರಣ್ಯ ವಿಭಾಗದಿಂದ ಕಲಬುರಗಿ ಜಿಲ್ಲೆಗೆ ತಾಲ್ಲೂಕುವಾರು**

**ನಿಗದಿಪಡಿಸಲಾದ ಅನುದಾನದ ವಿವರ**

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ನಿಗದಿಯಾದ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|
| 1 | 2 | 3 | 4 |
| 1 | ಕಲಬುರಗಿ | ಆಳಂದ | 176.684 |
| 2 | | ಅಫಜಲಪೂರ | 13.306 |
| 3 | | ಚಿಂಚೋಳಿ | 411.709 |
| 4 | | ಚಿತ್ತಾಪುರ | 163.061 |
| 5 | | ಸೇಡಂ | 55.823 |
| 6 | | ಕಲಬುರಗಿ | 224.791 |
| 7 | | ಜೇವರ್ಗಿ | 18.228 |
| **ಒಟ್ಟು** | | | **1063.602** |

<u>**ಕರ್ನಾಟಕ ವಿಧಾನ ಸಭೆ**</u>

| | | |
|---|---|---|
| 1) | ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : | 1328 |
| 2) | ಸದಸ್ಯರ ಹೆಸರು : | ಶ್ರೀ ಸುಧಾಕರ ಲಾಲ್ ಪಿ.ಆರ್. (ಕೊರಟಗೆರೆ) |
| 3) | ವಿಷಯ : | ಜಾತಿ ಪ್ರಮಾಣ ಪತ್ರ ವಿತರಣೆ |
| 4) | ಉತ್ತರಿಸಬೇಕಾದ ದಿನಾಂಕ : | 12.06.2017 |
| 5) | ಉತ್ತರಿಸಬೇಕಾದ ಸಚಿವರು : | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಆರ್ಯ, ವೈಶ್ಯ, ಬ್ರಾಹ್ಮಣ ಸಮುದಾಯಗಳಿಗೆ ಜಾತಿ ಪ್ರಮಾಣ ಪತ್ರ ನೀಡದೇ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಆರ್ಯ, ವೈಶ್ಯ ಮತ್ತು ಬ್ರಾಹ್ಮಣ ಸಮುದಾಯದ ಪೈಕಿ, ಆರ್ಯ/ಆರ್ಯರು ಜಾತಿಯನ್ನು ದಿನಾಂಕ: 30.03.2002 ರ ಸಮಾಜ ಕಲ್ಯಾಣ ಇಲಾಖೆಯ ಜಾತಿ ಪಟ್ಟಿಯಲ್ಲಿ ಸೇರಿಸಲಾಗಿರುತ್ತದೆ. ಅದರಂತೆ, ಸದರಿ ಜಾತಿಯವರಿಗೆ ನಾಡಕಛೇರಿ ತಂತ್ರಾಂಶದ ಮೂಲಕ ಜಾತಿ ಪ್ರಮಾಣ ಪತ್ರವನ್ನು ವಿತರಿಸಲಾಗುತ್ತಿದ್ದು, ದಿನಾಂಕ: 01.04.2016 ರಿಂದ 31.03.2017 ರವರೆಗೆ ಜಾತಿ ಪ್ರಮಾಣ ಪತ್ರ ಕೋರಿ ಸಲ್ಲಿಸಿರುವ 743 ಅರ್ಜಿಗಳಲ್ಲಿ 718 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. |
| ಆ) | ಈ ಸಮುದಾಯಗಳಿಗೆ ಜಾತಿ ಪ್ರಮಾಣ ಪತ್ರ ನೀಡದೇ ಇರಲು ಕಾರಣಗಳೇನು; (ವಿವರ ನೀಡುವುದು) | ವೈಶ್ಯ ಮತ್ತು ಬ್ರಾಹ್ಮಣ ಜನಾಂಗದವರಿಗೆ ಜಾತಿ ಪ್ರಮಾಣ ಪತ್ರ ನೀಡದೇ ತೊಂದರೆಯಾಗುತ್ತಿರುವ ಪ್ರಕರಣಗಳಿ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br><br>ವೈಶ್ಯ ಮತ್ತು ಬ್ರಾಹ್ಮಣ ಸಮುದಾಯದ ಜಾತಿಯ ಹೆಸರುಗಳು ಸರ್ಕಾರದ ಆದೇಶ ಸಂಖ್ಯೆ: ಸಕಇ 228 ಬಿಸಿಎ 2000; ದಿನಾಂಕ: 30.03.2002 ರಲ್ಲಿ ಹೊರಡಿಸಲಾದ ಜಾತಿ ಪಟ್ಟಿಯಲ್ಲಿ ಸೇರ್ಪಡೆಯಾಗಿಲ್ಲದೇ |

| | | |
|---|---|---|
| | | ಇರುವುದರಿಂದ, ಸದರಿ ಜಾತಿಯವರಿಗೆ ನಾಡಕಛೇರಿ ತಂತ್ರಾಂಶದ ಮೂಲಕ ವಿತರಿಸಲು ಅವಕಾಶವಿರುವುದಿಲ್ಲ.<br><br>ಆದರೆ, ಸದರಿ ಜನಾಂಗದವರಿಗೆ ಪಿಂಚಣಿ ಯೋಜನೆಯಡಿ ಪಿಂಚಣಿ ಸೌಲಭ್ಯಕ್ಕಾಗಿ ಸಲ್ಲಿಸುವ ಅರ್ಜಿಗಳ ಮೇಲೆ, ನಾಡಕಛೇರಿ ತಂತ್ರಾಂಶದ ಮೂಲಕ ಮಂಜೂರಾತಿ ಆದೇಶವನ್ನು ನೀಡಲಾಗುತ್ತಿದೆ. ದಿನಾಂಕ: 01.04.2016 ರಿಂದ 31.03.2017 ರವರೆಗೆ ಸದರಿ ಜನಾಂಗದವರಿಂದ ಪಿಂಚಣಿ ಮಂಜೂರಾತಿಗಾಗಿ 8374 ಅರ್ಜಿಗಳು ಸ್ವೀಕೃತವಾಗಿದ್ದು, 7750 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. |
| ಇ) | ಆರ್ಯ, ವೈಶ್ಯ, ಬ್ರಾಹ್ಮಣ ಸಮುದಾಯಗಳಿಗೆ ಜಾತಿ ಪ್ರಮಾಣ ಪತ್ರ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ; | ಆರ್ಯ/ಆರ್ಯರು ಸಮುದಾಯದವರಿಗೆ ನಾಡಕಛೇರಿ ತಂತ್ರಾಂಶದ ಮೂಲಕ ಜಾತಿ ಪ್ರಮಾಣ ಪತ್ರವನ್ನು ವಿತರಿಸಲಾಗುತ್ತಿದೆ. ವೈಶ್ಯ ಮತ್ತು ಬ್ರಾಹ್ಮಣ ಸಮುದಾಯದವರಿಗೆ ಜಾತಿ ಪ್ರಮಾಣ ಪತ್ರ ನಿಡುವ ಯೋಜನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಈ) | ಹಾಗಿದ್ದಲ್ಲಿ, ಯೋಜನೆಯನ್ನು ಯಾವಾಗ ರೂಪಿಸಲಾಗುವುದು? (ವಿವರ ನೀಡುವುದು) | ಉದ್ಭವಿಸುವುದಿಲ್ಲ. |

ಕಂಇ 27 ಎಜಿಎಸ್ 2017

ಕಂದಾಯ ಸಚಿವರು

# ಕರ್ನಾಟಕ ವಿಧಾನ ಸಭೆ

| | | | |
|---|---|---|---|
| 1) | ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1394 |
| 2) | ಸದಸ್ಯರ ಹೆಸರು | : | |
| 3) | ಉತ್ತರಿಸಬೇಕಾದ ದಿನಾಂಕ | : | |
| 4) | ಉತ್ತರಿಸಬೇಕಾದ ಸಚಿವರು | : | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರಿ ಉದ್ದೇಶದ ಭೂ ಬಳಕೆಗಾಗಿ ರಾಜ್ಯ ಸರ್ಕಾರ ಅನುಸರಿಸುವ ಮಾನದಂಡಗಳೇನು; ಇದಕ್ಕಾಗಿ ಸರ್ಕಾರಿ ಜಾಗದ ಬಳಕೆಯ ಜೊತೆಗೆ ಸಾರ್ವಜನಿಕರ ಭೂಮಿಯನ್ನು ಪಡೆಯಲು ಅವಕಾಶವಿದೆಯೇ; | ಸರ್ಕಾರದ ವಿವಿಧ ಉದ್ದೇಶದ ಯೋಜನೆಗಳಿಗಾಗಿ ಸರ್ಕಾರಿ ಜಾಗದ ಬಳಕೆಯ ಜೊತೆಗೆ ಭೂಸ್ವಾಧೀನ ಪ್ರಕ್ರಿಯೆಯ ಮೂಲಕ ಸಾರ್ವಜನಿಕರ ಭೂಮಿಯನ್ನು ಪಡೆಯಲು ಅವಕಾಶವಿದೆ. |
| ಆ | ರೈತರಿಂದ ನೇರವಾಗಿ ಭೂಮಿ ಖರೀದಿಸಲು ಅವಕಾಶವಿದೆಯೇ; | ಇದೆ. |
| ಇ | ಹಾಗಿದ್ದಲ್ಲಿ, ಈ ನೇರ ಖರೀದಿಯಿಂದ ರೈತರಿಗೆ ಉಂಟಾಗುವ ಅನುಕೂಲಗಳೇನು;<br><br>ಈ ನಿಯಮವು ಯಾವಾಗಿನಿಂದ ಜಾರಿಗೆ ಬರಲಿದೆ; | ನೇರ ಖರೀದಿಯಿಂದ ರೈತರು ಪರಿಹಾರ ಧನವನ್ನು ಕಡಿಮೆ ಅವಧಿಯಲ್ಲಿ ಪಡೆಯಲು ಅವಕಾಶವಿದೆ.<br><br>ದಿನಾಂಕ: 31–05–2016ರಿಂದ ಜಾರಿಗೆ ಬಂದಿರುತ್ತದೆ. |
| ಈ | ಗರಿಷ್ಠ ಎಷ್ಟು ಎಕರೆವರೆಗೆ ಈ ರೀತಿ ನೇರ ಭೂಮಿ ಪಡೆಯಬಹುದಾಗಿದೆ.; (ವಿವರಗಳನ್ನು ಒದಗಿಸುವುದು) | ವಸತಿ, ಸಶ್ಮಾನ, ಬಹುಗ್ರಾಮ ಕುಡಿಯುವ ಯೋಜನೆ, ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಉಪ ವಿದ್ಯುತ್ ಕೇಂದ್ರಗಳ ನಿರ್ಮಾಣ, ಒಳಚರಂಡಿ, ರಸ್ತೆ ನಿರ್ಮಾಣ ಮತ್ತು ಅಗಲೀಕರಣ, ರೈಲ್ವೇ ಮಾರ್ಗ ನಿರ್ಮಾಣ, ಕೆಳಸೇತುವೆ ಮತ್ತು ಮೇಲ್ಸೆತುವೆ, ಬಂದರು, ವಿಮಾನ ನಿಲ್ದಾಣ ಹಾಗೂ ಇನ್ನಿತರ ಸಾರ್ವಜನಿಕ |

| | | |
|---|---|---|
| | | ಉಪಯುಕ್ತತೆಯುಳ್ಳ ಸರ್ಕಾರದ ಯೋಜನೆಗಳಿಗೆ ಗರಿಷ್ಟ 100 ಎಕರೆ ಮೀರದಂತೆ ಪಡೆಯಬಹುದಾಗಿದೆ. |
| ಉ | ನೇರ ಖರೀದಿಗೆ ಸಾರ್ವಜನಿಕರ ಅಭಿಪ್ರಾಯ–ಪ್ರತಿಕ್ರಿಯೆ ಹೇಗಿರುತ್ತದೆ; ಇದಕ್ಕೆ ಬೆಲೆ ನಿಗಧಿಯನ್ನು ಯಾವ ರೀತಿ ಮಾಡಲಾಗುತ್ತದೆ? | ಭೂ–ಮಾಲೀಕರು ನೇರ ಖರೀದಿಗೆ ಒಪ್ಪಿಗೆ ಸೂಚಿಸಿದರೆ ಮಾತ್ರ ಭೂಮಿಯನ್ನು ನೇರ ಖರೀದೆಗೆ ಒಳಪಡಿಸಲಾಗುತ್ತದೆ.<br><br>ಸರ್ಕಾರದ ಸಾರ್ವಜನಿಕ ಯೋಜನೆಗಳಿಗೆ ಅಗತ್ಯವಿರುವ ಜಮೀನನ್ನು ನೇರವಾಗಿ ಖರೀದಿಸುವಾಗ ಯೋಜನೆಗಳ ವ್ಯಾಪ್ತಿಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಬೆಲೆ ನಿರ್ಧರಣಾ ಸಲಹಾ ಸಮಿತಿಯು ಬೆಲೆ ನಿಗದಿಪಡಿಸುತ್ತದೆ; ಹೀಗೆ ಬೆಲೆ ನಿಗದಿಪಡಿಸುವಾಗ ಭೂಸ್ವಾಧೀನ ಕಾಯ್ದೆ 2013 ರ ಕಲಂ 26 ರಿಂದ 30 ರಂತೆ ಪರಿಗಣಿಸಿ ಬೆಲೆ ನಿಗದಿಪಡಿಸಲಾಗುತ್ತದೆ. |

ಕಂಇ 12 ಭೂಸ್ವಾಳ 2017

ಕಂದಾಯ ಸಚಿವರು

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 683 |
| ಮಾನ್ಯ ಸದಸ್ಯರ ಹೆಸರು | |
| ಉತ್ತರಿಸಬೇಕಾದ ದಿನಾಂಕ | |
| ಉತ್ತರಿಸಬೇಕಾದ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವೈದ್ಯರು ಹಣದಾಸೆಯಿಂದಾಗಿ ಗರ್ಭಿಣಿಯರಿಗೆ ಅನಗತ್ಯ ಸಿಸೇರಿಯನ್ ಶಸ್ತ್ರಚಿಕಿತ್ಸೆಗೆ ಸಲಹೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲ್ಲ |
| ಆ) | ಹಾಗಿದ್ದಲ್ಲಿ, ಗರ್ಭಿಣಿಯರಿಗೆ ಯಾವ ಯಾವ ಸಂದರ್ಭದಲ್ಲಿ ಸಿಸೇರಿಯನ್ ಶಸ್ತ್ರಚಿಕಿತ್ಸೆ ಅನಿವಾರ್ಯ; (ವಿವರ ನೀಡುವುದು) | ಸಿಸೇರಿಯನ್ ಹೆರಿಗೆಮಾಡಲು ಇರುವ ಮಾನದಂಡಗಳ<br><br>ವಿವರ ಈ ಕೆಳಕಂಡಂತಿದೆ.<br><br>➢ ಕುಳ್ಳಗಿರುವ ಚೊಚ್ಚಲ ಗರ್ಭಿಣಿ.<br>➢ ತೀವ್ರರಕ್ತಹೀನತೆ<br>➢ ಗರ್ಭಿಣಿಯರಲ್ಲಿ ರಕ್ತದೊತ್ತಡ<br>➢ ಹಿಂದಿನ ಹೆರಿಗೆ ಸಿಜೇರಿಯನ್ ಆದಲ್ಲಿ<br>➢ ಅವಳಿ/ತ್ರಿವಳಿ<br>➢ ಅಡ್ಡಡ್ಡವಿರುವ ಭ್ರೂಣ<br>➢ ಹೆರಿಗೆಯ ಮೊದಲ ರಕ್ತಸ್ರಾವ<br>➢ ರಕ್ತದ ಗುಂಪಿನಲ್ಲಿ ಹೊಂದಿಕೊಳ್ಳದಿರುವುದು.<br>➢ ಗರ್ಭಾಶಯದಲ್ಲಿ ಗಡ್ಡೆ<br>➢ ಹೃದಯದ ಖಾಯಿಲೆ, ಮಧುಮೇಹ ಇತ್ಯಾದಿ ವೈದ್ಯಕೀಯ ಸಮಸ್ಯೆಗಳು.<br>➢ ಕುಂಠಿತ ಬೆಳವಣಿಗೆಯಿರುವ ಭ್ರೂಣ. |

| | | |
|---|---|---|
| ಇ) | ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯಂತೆ ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಪ್ರಮಾಣದ ಸಿಸೇರಿಯನ್ ಶಸ್ತ್ರಚಿಕಿತ್ಸೆಗೆ ಗರ್ಭಿಣಿಯರನ್ನು ಒಳಪಡಿಸಲಾಗಿದೆ | ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ಪ್ರಕಾರ 4 ವರ್ಷಗಳಿಗೆ ಒಮ್ಮೆ ಒಂದು ಬಾರಿ ಸಮೀಕ್ಷೆಯ ವರದಿ ನೀಡುತ್ತಾರೆ. ಅ ವರದಿ ಆಧಾರಿತ 2015-16ರ ಸಾಲಿನ ಸಿಸೇರಿಯನ್ ವರದಿ ನೀಡಿರುತ್ತಾರೆ. |
| ಈ) | ಅನಗತ್ಯ ಸಿಸೇರಿಯನ್ ಶಸ್ತ್ರ ಚಿಕಿತ್ಸೆಯನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಅನಗತ್ಯ ಸಿಸೇರಿಯನ್ ಶಸ್ತ್ರ ಚಿಕಿತ್ಸೆಯನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು:<br><br>• ಕೂಲಂಕಷವಾಗಿ ಕಾರಣಗಳನ್ನು ತಿಳಿಯಲು ಸಮಿತಿಯನ್ನು ರಚಿಸಲಾಗುವುದು.<br>• ಈ ಸಮಿತಿಯಲ್ಲಿ ಸರ್ಕಾರಿ ಮತ್ತು ಖಾಸಗಿ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರು, IMA ಪ್ರತಿನಿಧಿಗಳು ಮತ್ತು KSOGA ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ.<br>• ಈ ಸಮಿತಿಯ ಕಳೆದ ಮೂರು ವರ್ಷಗಳಲ್ಲಿ ಸಿಜೇರಿಯನ್ ಪ್ರಕರಣಗಳು ಹೆಚ್ಚುತ್ತಿರುವ ಆಸ್ಪತ್ರೆಗಳಿಗೆ ಭೇಟಿ ನೀಡಿ ಕಾರಣಗಳನ್ನು ಪರಿಶೀಲಿಸುವುದು.<br>• ಅನಗತ್ಯ ಶಸ್ತ್ರಚಿಕಿತ್ಸೆಗಳು ಆಸ್ಪತ್ರೆಗಳಲ್ಲಿ ನಡೆಯುತ್ತಿವೆ ಎಂದು ತಿಳಿದು ಬಂದಲ್ಲಿ ಕೆಪಿಎಂ ಆಕ್ಟ್ ಅಡಿಯಲ್ಲಿ ವಿಚಾರಣೆ ನಡೆಸಿ ಅಂತಹ ಆಸ್ಪತ್ರೆಯ ನೋಂದಾಣಿಯನ್ನು ರದ್ದು[ಡಿಸಲಾಗುವುದು. |
| ಉ) | ಇದರ ನಿರ್ವಹಣೆ ಮಾಡುವವರು ಯಾರು; ಹೇಗೆ ನಿರ್ವಹಿಸುವರು? (ವಿವರ ನೀಡುವುದು) | ಸಿಸೇರಿಯನ್ ಶಸ್ತ್ರಚಿಕಿತ್ಸೆಯನ್ನು ನಿಯಂತ್ರಿಸಲು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್) ಮತ್ತು ಉಪ ನಿರ್ದೇಶಕರು (ತಾಯಿ ಆರೋಗ್ಯ) ಇವರು ನಿರ್ವಹಣೆ ಮಾಡುತ್ತಿರುತ್ತಾರೆ.<br><br>• ಸಮಿತಿಯನ್ನು ರಚಿಸಿ ಪ್ರತಿ 3 ತಿಂಗಳಿಗೊಮ್ಮೆ ಸಮಿತಿಯ ವರದಿಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದು. |

| | | |
|---|---|---|
| | | • ತಪ್ಪಿತಸ್ಥ ಖಾಸಗಿ ವೈದ್ಯರು ಮತ್ತು ಆಸ್ಪತ್ರೆಗಳ ವಿರುದ್ಧ ಕೆ.ಪಿ.ಎಂ.ಇ ಆಕ್ಟ್ ಅಡಿಯಲ್ಲಿ ಸೂಕ್ತ ಶಿಸ್ತು ಕ್ರಮಕೈಗೊಳ್ಳಲು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳುರವರಿಗೆ ವರದಿ ಸಲ್ಲಿಸುವುದು. |

ಕಡತ ಸಂಖ್ಯೆ: ಆಕುಕ 14 ಎಸ್‌ಟಿಕ್ಯೂ 2018

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 376 |
| 2. | ಸದಸ್ಯರ ಸಂಖ್ಯೆ | : | |
| 3. | ಉತ್ತರಿಸಬೇಕಾದ ದಿನಾಂಕ | : | |
| 4. | ಉತ್ತರಿಸಬೇಕಾದ ಸಚಿವರು | : | ಮಾನ್ಯ ವೈದ್ಯಕಿಯ ಶಿಕ್ಷಣ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಅ) | ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಅಗತ್ಯತೆಗನುಗುಣವಾಗಿ ಪೆಟ್ ಸಿಟಿ ಸ್ಕ್ಯಾನ್ ಯಂತ್ರಗಳು ಲಭ್ಯವಿದೆಯೇ; ಇದ್ದಲ್ಲಿ, ವಿವರಗಳನ್ನು ನೀಡುವುದು. | ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ ನ್ಯೂಕ್ಲಿಯರ್ ಮೆಡಿಸನ್ ವಿಭಾಗದಲ್ಲಿ ಕ್ಯಾನ್ಸರ್ ಖಾಯಿಲೆಯ ಹಂತ, ಔಷಧಿಯ ಪ್ರಕ್ರಿಯೆ ಮತ್ತು ಕ್ಯಾನ್ಸರ್ ರೋಗ ಆವರಿಸಿರುವ ಪ್ರಮಾಣವನ್ನು ನಿರ್ಣಾಯಕವಾಗಿ ಪತ್ತೆ ಹಚ್ಚುವ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.<br><br>ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ ನ್ಯೂಕ್ಲಿಯರ್ ಮೆಡಿಸನ್ ವಿಭಾಗದಲ್ಲಿ ಬೋನದ ಸ್ಕ್ಯಾನ್, ಜಿಎಫ್ಆರ್ ಸ್ಕ್ಯಾನ್, ರಿನೋಗ್ರಾಮ್ ಸ್ಕ್ಯಾನ್, ರೀನಲ್ ಸ್ಕ್ಯಾನ್, ಹೃದಯದ ಸ್ಕ್ಯಾನ್, ಥೈರಾಯಿಡ್ ಸ್ಕ್ಯಾನ್, ಸೆಂಟಿನಲ್ನೋಡ್ ಸ್ಕ್ಯಾನ್, ಲಿವರ್ ಸ್ಕ್ಯಾನ್, ಬ್ರೈನ್ ಸ್ಕ್ಯಾನ್ ಮುಂತಾದ ಆಧುನಿಕ ಉಪಕರಣಗಳನ್ನು ಬಳಸಿಕೊಂಡು ಪ್ರತಿನಿತ್ಯ ಸರಾಸರಿ 50 ರಿಂದ 60 ಕ್ಯಾನ್ಸರ್ ರೋಗಿಗಳಿಗೆ ಕ್ಯಾನ್ಸರ್, ಥೈರಾಯಿಡ್ ಚಿಕಿತ್ಸೆ, ಥೈರಾಟೋಕ್ಸಿಕೋಸಿಸ್ ಚಿಕಿತ್ಸೆ, ಪ್ಯಾಲಿಯೇಟಿವ್ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ.<br><br>ಈ ಆಸ್ಪತ್ರೆಗೆ ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಆಗಮಿಸುವ ರೋಗಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿರುವುದರಿಂದ ಕೆಲಸದ ಒತ್ತಡ ಹೆಚ್ಚುತ್ತಿದ್ದು, ರೋಗಿಗಳಿಗೆ ಪೂರ್ಣಪ್ರಮಾಣದಲ್ಲಿ ಗುಣಾತ್ಮಕ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ.<br><br>PET_CT ಸ್ಕ್ಯಾನರ್ ಅತೀ ಸೂಕ್ಷ್ಮ ಉಪಕರಣವಾಗಿದ್ದು ಕ್ಯಾನ್ಸರ್ ಗೆಡ್ಡೆಯ ಜೈವಿಕ ಚಟುವಟಿಕೆಯನ್ನು ಪತ್ತೆ ಹಚ್ಚಲು ಹಾಗೂ ರೋಗದ ನಿಖರತೆಯನ್ನು ನಿರ್ದಿಷ್ಟವಾಗಿ ಪತ್ತೆ ಹಚ್ಚಲು ನೆರವಾಗಲಿದೆ. ಇದಲ್ಲದೆ |

| | | |
|---|---|---|
| | | ಕ್ಯಾನ್ಸರ್ ರೋಗದ ನಿರ್ದಿಷ್ಟ ಮೌಲ್ಯಮಾಪನವನ್ನು ಮಾಡುವಲ್ಲಿ ಸಹಾಯಕವಾಗಲಿದ್ದು, ಕಾಯಿಲೆಯ ಪ್ರಸ್ತುತ ಹಂತ, ಔಷಧ ಪ್ರಕ್ರಿಯೆ ಮತ್ತು ಕಾಯಿಲೆಯು ಆವರಿಸಿರುವ ಪ್ರಮಾಣವನ್ನು ನಿರ್ಣಾಯಕವಾಗಿ ಪತ್ತೆ ಹಚ್ಚುವ ಕಾರ್ಯವನ್ನು PET_CT (Positron Emission Tomography Computerised Tomography) ಯಂತ್ರವು ನಿರ್ವಹಿಸಲಿದೆ.<br><br>ಈ ಉಪಕರಣದ ಅಳವಡಿಕೆಯಿಂದಾಗಿ ರೋಗಿಗಳಿಗೆ ತುರ್ತು ಹಾಗೂ ಅಗತ್ಯವಿರುವ ಚಿಕಿತ್ಸೆ ಒದಗಿಸಲು ಅನುಕೂಲವಾಗಲಿರುವುದರಿಂದ 2018-19 ನೇ ಸಾಲಿನಲ್ಲಿ PET_CT ಯಂತ್ರವನ್ನು ರೂ.15.00 ಕೋಟಿಗಳ ವೆಚ್ಚದಲ್ಲಿ ಖರೀದಿಸಿ ಅಳವಡಿಸಲು ಉದ್ದೇಶಿಸಲಾಗಿದೆ. |

ಸಂಖ್ಯೆ: ಆಕುಇ 61 ಕೆವಿಎಂ 2018

ವೈದ್ಯಕೀಯ ಶಿಕ್ಷಣ ಸಚಿವರು

<u>**ಕರ್ನಾಟಕ ವಿಧಾನ ಪರಿಷತ್ತು**</u>

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 03 |
| 2 | ಸದಸ್ಯರ ಹೆಸರು | : | |
| 3 | ಉತ್ತರಿಸುವ ದಿನಾಂಕ | : | |
| 4 | ಉತ್ತರಿಸುವವರು | : | ಮಾನ್ಯ ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಮಲ್ಲೇಶ್ವರಂ 8ನೇ ಮುಖ್ಯರಸ್ತೆ (ಸಲಾರ್‌ಪುರಿಯಾ ವಸತಿ ಸಮುಚ್ಚಯಯಿಂದ) ತುಮಕೂರು ರಸ್ತೆ ಕಡೆಗೆ ಫ್ರೀ ಲೆಫ್ಟ್ ಟರ್ನ್ ನೀಡಲು ರಸ್ತೆ ಅಗಲೀಕರಣ ಮಾಡಲಾಗುತ್ತಿದೆಯೇ; (ವಿವರ ನೀಡುವುದು) | ಇಲ್ಲ. |
| ಆ | ಸರ್. ಸಿ.ವಿ. ರಾಮನ್ ರಸ್ತೆ (ಪೊಲೀಸ್ ಠಾಣೆ ಕಡೆಗೆ) ಯಿಂದ 8ನೇ ಮುಖ್ಯ ರಸ್ತೆ ಮಲ್ಲೇಶ್ವರಂ ಕಡೆಗೆ ಫ್ರೀ ಲೆಫ್ಟ್ ಟರ್ನ್ ನೀಡಲು ರಸ್ತೆ ಅಗಲೀಕರಣ ಮಾಡಲಾಗುತ್ತಿದೆಯೇ; (ವಿವರ ನೀಡುವುದು) | ಇಲ್ಲ. |

| | | |
|---|---|---|
| ಇ | ಮೇಲ್ಕಂಡ ರಸ್ತೆಗಳಲ್ಲಿ ಪದೇ ಪದೇ ಸಂಚಾರ ದಟ್ಟಣೆಯಿಂದ ಸಾವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು? | 8ನೇ ಮುಖ್ಯರಸ್ತೆ (ಸಲಾರ್ ಪುರಿಯಾ ವಸತಿ ಸಮುಚ್ಚಯಯಿಂದ) ತುಮಕೂರು ರಸ್ತೆ ಕಡೆಗೆ ಮತ್ತು ಸರ್. ಸಿ.ವಿ. ರಾಮನ್ ರಸ್ತೆ (ಪೊಲೀಸ್ ಠಾಣೆ ಕಡೆಗೆ) ಯಿಂದ 8ನೇ ಮುಖ್ಯ ರಸ್ತೆ ಮಲ್ಲೇಶ್ವರಂ ಕಡೆಗೆ ಫ್ರೀ ಲೆಫ್ಟ್ ಟರ್ನ್ ನೀಡಲು ರಸ್ತೆ ಅಗಲೀಕರಣ ಮಾಡುವ ಬಗ್ಗೆ ಅವಶ್ಯವಿರುವ ರಸ್ತೆ ಅಗಲೀಕರಣ / ಜಂಕ್ಷನ್ ಅಭಿವೃದ್ಧಿ ಕೈಗೊಳ್ಳಲು ಕೆಲವು ಸ್ವತ್ತುಗಳು ಭೂಸ್ವಾಧೀನಪಡಿಸಿಕೊಳ್ಳಬೇಕಾಗಿರುತ್ತದೆ. ಅಲ್ಲದೇ, ಸದರಿ ಜಂಕ್ಷನ್‌ನಲ್ಲಿ ದೀನದಯಾಳ್ ಉಪಾಧ್ಯಾಯ (ಯಶವಂತಪುರ) ಮೇಲ್ಸೇತುವೆ ಇರುವುದರಿಂದ ಸದರಿ ಜಂಕ್ಷನ್‌ನಲ್ಲಿ ವಾಹನ ಸಂಚಾರ / ಸಾಂದ್ರತೆಗಳನ್ನು ಪರಿಶೀಲಿಸಿ ನಗರ ಸಂಚಾರಿ ಪೊಲೀಸ್ ಇಲಾಖೆಯೊಂದಿಗೆ ಜಂಟಿ ತಪಾಸಣೆ ಕೈಗೊಂಡು ರಸ್ತೆ ಅಗಲೀಕರಣದ / ಜಂಕ್ಷನ್ ಅಭಿವೃದ್ಧಿಯನ್ನು ಕಾರ್ಯಸಧ್ಯತಾ (Feasibility) ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ. |

**ಸಂಖ್ಯೆ: ನಅ 73 ಎಂಎನ್‌ವೈ 2018**

ಬೆಂಗಳೂರು ಅಭಿವೃದ್ಧಿ ಹಾಗೂ

ನಗರ ಯೋಜನಾ ಸಚಿವರು

**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1] | ಚುಕ್ಕೆ ಗುರುತಿನ್ ಪ್ರಶ್ನೆ ಸಂಖ್ಯೆ | : | 145 |
| 2] | ಸದಸ್ಯರ ಹೆಸರು | : | |
| 3] | ಉತ್ತರಿಸುವ ದಿನಾಂಕ | : | |
| 4] | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಹಾಸನ ಜಿಲ್ಲೆ ಹೊಳೆನರಿಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳಿಗೆ ಅವಶ್ಯಕತೆಯಿರುವಷ್ಟು ಪೊಲೀಸ್ ಗೃಹಗಳಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹಾಸನ ಜಿಲ್ಲೆ ಹೊಳೆನರಿಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ಒಟ್ಟು 80 ಮಂಜೂರಾತಿ ಬಲವಿದ್ದು, 64 ಸಂಖ್ಯೆಯ ಹಾಲಿ ಬಲವಿರುತ್ತದೆ. 46 ವಸತಿಗೃಹಗಳು ಲಭ್ಯವಿರುತ್ತವೆ. |
| ಆ) | ಹಾಗಿದ್ದಲ್ಲಿ ಹೊಳೇನರಿಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪೊಲೀಸ್ ವಸತಿ ಗೃಹಗಳನ್ನು ನಿರ್ಮಾಣ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ಸಂಪೂಣ ಮಾಹಿತಿ ನೀಡುವುದು) | ಸದ್ಯ ಹೊಳೇನರಿಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಯಾವುದೇ ವಸತಿ ಗೃಹಗಳು ನಿರ್ಮಾಣವಾಗುತ್ತಿಲ್ಲದ. ಹೊಳೇನರಸೀಪುರದಲ್ಲಿ ಶೇ.50ಕ್ಕೂ ಹೆಚ್ಚಿನ ಪ್ರಮಾಣದ ವಸತಿಗೃಹಗಳು ಲಭ್ಯವಿದ್ದು, ಕಡಿಮೆ ಪ್ರಮಾಣದ ವಸತಿಗೃಹಗಳು ಇರುವಲ್ಲಿ ಆದ್ಯತೆಯ ಮೇಲೆ ನಿರ್ಮಿಸಲಾಗುತ್ತಿದೆ. |

**ಹೆಚ್‌ಡಿ 17 ಪಿಬಿಎಲ್ 2018**

ಗೃಹ ಸಚಿವರು

# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 129 |
| 2 | ಸದಸ್ಯರ ಹೆಸರು | : | |
| 3 | ಉತ್ತರಿಸುವ ದಿನಾಂಕ | : | |
| 4 | ಉತ್ತರಿಸುವವರು | : | ಮಾನ್ಯ ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದಲ್ಲಿ ಭೀಕರ ಮಳೆಯಿಂದಾಗಿ ಹಾನಿಗೊಳಗಾದ ಕುಟುಂಬಗಳಿಗೆ ಮಳೆ ಪರಿಹಾರವಾಗಿ ಎಷ್ಟು ಮೊತ್ತ ಒದಗಿಸಲಾಗಿದೆ; | ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದಲ್ಲಿ ಭೀಕರ ಮಳೆಯಿಂದಾಗಿ ಹಾನಿಗೊಳಗಾದ ಕುಟುಂಬಗಳಿಗೆ ರೂ. 2,30,43,400/- ಗಳ ಮೊತ್ತವನ್ನು ಪರಿಹಾರ ಧನವಾಗಿ ವಿತರಿಸಲಾಗಿರುತ್ತದೆ. |
| ಆ | ಕೆಲವು ವಾರ್ಡ್‌ಗಳಲ್ಲಿ ಸಂತ್ರಸ್ತರಿಗೆ ಇನ್ನು ಮಳೆ ಪರಿಹಾರ ಧನವನ್ನು ವಿತರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಳೆಯಿಂದ ಹಾನಿಗೊಳಗಾದ ಒಟ್ಟು ಕುಟುಂಬಗಳ ಸಂಖ್ಯೆ: 4892 ಆಗಿದ್ದು, ಇದರಲ್ಲಿ ಈಗಾಗಲೇ 4215 ಕುಟುಂಬಗಳಿಗೆ ಮಳೆ ಪರಿಹಾರ ಧನವನ್ನು ವಿತರಿಸಲಾಗಿದೆ.<br><br>ಉಳಿದಂತೆ, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವಾರ್ಡ್-42ರಲ್ಲಿ 332 ಕುಟುಂಬಗಳಿಗೆ, ವಾರ್ಡ್ ಸಂಖ್ಯೆ: 69ರಲ್ಲಿ 265 ಕುಟುಂಬಗಳಿಗೆ ಮತ್ತು ವಾರ್ಡ್ ಸಂಖ್ಯೆ: 129ರಲ್ಲಿ 80 ಒಟ್ಟು 677 ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ಧನವನ್ನು ವಿತರಿಸುವ ಕಾರ್ಯವು ಪ್ರಗತಿಯಲ್ಲಿದೆ. |
| ಇ | ಸಂತ್ರಸ್ತ ಕುಟುಂಬಗಳಿಗೆ ಮಳೆ ಪರಿಹಾರ ಒದಗಿಸುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು; | |

| | | |
|---|---|---|
| ಈ | ಸಂತ್ರಸ್ತ ಕುಟುಂಬಗಳಿಗೆ ಮಳೆ ಪರಿಹಾರ ಒದಗಿಸಲು ಅಧಿಕಾರಿಗಳು ನಿರ್ಲಕ್ಷ್ಯ ತೋರಿಸುತ್ತಿರುವುದನ್ನು ಸರ್ಕಾರವು ಗಮನಿಸಿದೆಯೇ; ಹಾಗಿದ್ದಲ್ಲಿ, ಅಂತಹ ಅಧಿಕಾರಗಳ ವಿರುದ್ಧ ಸರ್ಕಾರವು ಕೈಗೊಂಡ ಕ್ರಮವೇನು; | ಮಳೆಯಿಂದ ಹಾನಿಗೊಳಗಾದ ಸಂತ್ರಸ್ತರ ಬಹುತೇಕ ಕುಟುಂಬಗಳಿಗೆ ಪರಿಹಾರ ಧನವನ್ನು ಈಗಾಗಲೇ ವಿತರಿಸಲಾಗಿದ್ದು, ಬಾಕಿ ಉಳಿದವರಿಗೆ ಪರಿಹಾರ ಮೊತ್ತವನ್ನು ತ್ವರಿತವಾಗಿ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ಸಂತ್ರಸ್ತರ ಕುಟುಂಬಗಳಿಗೆ ಪರಿಹಾರ ಒದಗಿಸಲು ಯಾವುದೇ ವಿಳಂಬವಾಗಿರುವುದಿಲ್ಲ. ಆದ್ದರಿಂದ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಉ | ಮಳೆ ಪರಿಹಾರ ಧನವನ್ನು ಸಂಪೂರ್ಣವಾಗಿ ಯಾವಾಗ ವಿತರಿಸಲಾಗುವುದು? | |

**ಸಂಖ್ಯೆ: ನಇ 75 ಎಂಎಸ್‌ವೈ 2018**

ಬೆಂಗಳೂರು ಅಭಿವೃದ್ಧಿ ಹಾಗೂ

ನಗರ ಯೋಜನಾ ಸಚಿವರು

**ಕರ್ನಾಟಕ ವಿಧಾನ ಪರಿಷತ್**

| | |
|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1309 |
| 2 | ಸದಸ್ಯರ ಹೆಸರು : |
| 3 | ಉತ್ತರಿಸಬೇಕಾದ ದಿನಾಂಕ : |
| 4 | ಉತ್ತರಿಸುವ ಸಚಿವರು : ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರೈತರ ಸಂತೆ ಎಂದರೇನು; ಈ ಯೋಜನೆಯನ್ನು ಯಾವಾಗಿನಿಂದ ಜಾರಿಗೆ ತರಲಾಗಿದೆ | ರೈತರು ಬೆಳದ ಹಣ್ಣು ಮತ್ತು ತರಕಾರಿಗಳನ್ನು ತಂದು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ಎಲ್ಲಾ ಸೌಲಭ್ಯಗಳನ್ನೊಳಂಡ ವ್ಯವಸ್ಥಿತ ಸಂತೆಯೇ ರೈತರ ಸಂತೆ.<br>ಈ ಯೋಜನೆಯನ್ನು 2002 ರಿಂದ ಜಾರಿಗೆ ತರಲಾಗಿದೆ. |
| ಆ | ರಾಜ್ಯದಲ್ಲಿರುವ ಒಟ್ಟು ರೈತರ ಸಂತೆಗಳ ಸಂಖ್ಯೆ ಎಷ್ಟು; ಅವು ಯಾವುವು; (ಜಿಲ್ಲಾವಾರು ತಾಲ್ಲೂಕುವಾರು ಮಾಹಿತಿ ನೀಡುವುದು) | ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವತಿಯಿಂದ ಯಲಹಂಕ ಸಂತೆ ಮೈದಾನದಲ್ಲಿ ಒಂದು ರೈತರ ಸಂತೆಯನ್ನು ದಿನಾಂಕ: 04.07.2002 ರಿಂದ ಪ್ರಾರಂಭಿಸಲಾಗಿದೆ. |
| ಇ | ರೈತರ ಸಂತೆಯಲ್ಲಿ ಮಳಿಗೆಗಳನ್ನು ತೆರೆಯಲು ನಿಗಧಿಪಡಿಸಿರುವ ಮಾನದಂಡಗಳೇನು; | ಪಹಣಿ ಆಧಾರದ ಮೇಲೆ ಪ್ರತಿದಿನ ಸಂತೆಗೆ ಬರುವ ರೈತರಿಗೆ ಗುರುತಿನ ಚೀಟಿಗಳನ್ನು ನೀಡಿ, ರೈತರ ಸಂತೆಯಲ್ಲಿ ಜಾಗವನ್ನು ನಿಗಧಿಪಡಿಸಿ ಗ್ರಾಹಕರಿಗೆ ವ್ಯಾಪಾರ ಮಾಡಲು ಅವಕಾಶ ಮಾಡಿಕೊಡಲಾಗುವುದು. |
| ಈ | ರೈತರ ಸಂತೆಯಲ್ಲಿ ರೈತರ ಹೊರತಾಗಿ ಇತರ ವ್ಯಾಪಾರಸ್ಥರು ಮಳಿಗೆಗಳನ್ನು ತೆರೆದು ವ್ಯವಹಾರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |

| | | |
|---|---|---|
| ಉ | ರೈತರ ಸಂತೆಯಲ್ಲಿ ರೈತರಿಂದ ನೇರ ಮಾರಾಟ ವ್ಯವಸ್ಥೆ ಇರುವ ಬದಲು ಮಧ್ಯವರ್ತಿಗಳೇ ಹೆಚ್ಚಿನ ವ್ಯವಹಾರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುವುದಿಲ್ಲ. |
| ಊ | ಮಧ್ಯವರ್ತಿಗಳನ್ನು ಹಾಗೂ ಇತರ ವ್ಯಾಪಾರಸ್ಥರು ರೈತರ ಸಂತೆ ಪ್ರವೇಶಿಸುವುದನ್ನು ತಡೆಯಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? | ಪಹಣಿ ಆಧಾರದ ಮೇಲೆ ಪ್ರತಿದಿನ ಸಂತೆಗೆ ಬರುವ ರೈತರಿಗೆ ಗುರುತಿನ ಚೀಟಿಗಳನ್ನು ನೀಡುವ ಮೂಲಕ ಮಧ್ಯವರ್ತಿಗಳನ್ನು ಹಾಗೂ ಇತರೆ ವ್ಯಾಪಾರಸ್ಥರು ರೈತರ ಸಂತೆ ಪ್ರವೇಶಿಸುವುದನ್ನು ತಡೆಯಲು ಕ್ರಮವಹಿಸಲಾಗಿದೆ. ಹಾಗೂ ಸ್ಥಳೀಯ ಅಧಿಕಾರಿಗಳು ಈ ಕುರಿತಂತೆ ನಿರಂತರವಾಗಿ ಪರಿಶಿಲುಸಲು ಸಹ ತಿಳಿಸಲಾಗಿರುತ್ತದೆ. |

ಸಂಖ್ಯೆ: ಸಇ 88 ಎಂಆರ್‌ಇ 2018

ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು

## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ – | 163 |
| ಉತ್ತರಿಸಬೇಕಾದ ದಿನಾಂಕ – | |
| ಸದಸ್ಯರ ಹೆಸರು – | |
| ಉತ್ತರಿಸುವ ಸಚಿವರು – | ವಸತಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2017–18ನೇ ಸಾಲಿನ ಆಯವ್ಯಯದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ; | ಸರ್ಕಾರವು ಕರ್ನಾಟಕವನ್ನು ಗುಡಿಸಲು ಮುಕ್ತವನ್ನಾಗಿ ಮಾಡಲು ಉದ್ದೇಶಿಸಿ ಪ್ರತಿ ವರ್ಷ 3 ಲಕ್ಷ ಮನೆಗಳಂತೆ 5 ವರ್ಷಗಳ ಅವಧಿಯಲ್ಲಿ ಒಟ್ಟು 15 ಲಕ್ಷ ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದ್ದು 2017–18ನೆ ಸಾಲಿನ ಆಯವ್ಯಯದಲ್ಲೂ 3 ಲಕ್ಷ ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. |
| ಆ) | ಗ್ರಾಮೀಣ ಪ್ರದೇಶಗಳಲ್ಲಿ ನಿರ್ಮಿಸಲು ಉದ್ದೇಶಿಸಿರುವ ಮನೆಗಳಲ್ಲಿ ಈವರೆಗೆ ಎಷ್ಟು ಮನೆಗಳನ್ನು ಪೂರ್ಣಗೊಳಿಸಿರುವುದಿಲ್ಲ; ಇದಕ್ಕೆ ಕಾರಣಗಳೇನು; | ಗ್ರಾಮೀಣ ಪ್ರದೇಶಗಳಲ್ಲಿ ವಿವಿಧ ವಸತಿ ಯೋಜನೆಗಳಡಿ ನಿರ್ಮಿಸುತ್ತಿರುವ ಮನೆಗಳ ಪೈಕಿ 234373 ಮನೆಗಳು ತಳಪಾಯ ಹಂತದಲ್ಲಿ, 146491 ಮನೆಗಳು ಕಿಟಕಿ ಹಂತದಲ್ಲಿ, 142540 ಮನೆಗಳು ಛಾವಣಿ ಹಂತದಲ್ಲಿ ಹಂತದಲ್ಲಿದ್ದು, 1.05 ಲಕ್ಷ ಮನೆಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ<br>ಈ ಸಂಬಂಧ ಎಲ್ಲಾ ಫಲಾನುಭವಿಗಳಿಗೆ ಮನೆ ಕಾಮಗಾರಿಯನ್ನು ಪೂರ್ಣಗೊಳಿಸುವ ಬಗ್ಗೆ SMS ಕಳುಹಿಸಲಾಗುತ್ತಿದೆ. ಫಲಾನುಭವಿಗಳ ಕಂದುಕೊರತೆಗಳಿಗೆ ಸಹಾಯವಾಣಿಯನ್ನು ತೆರೆದು ಸಮಸ್ಯೆಯನ್ನು ಬಗೆಹರಿಸಲಾಗುತ್ತಿದೆ. ಅಲ್ಲದೇ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಪ್ರವಾಸ ಕೈಗೊಂಡು ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ |
| ಇ) | ಈ ಯೋಜನೆಯಡಿಯಲ್ಲಿ ಪೂರ್ಣಗೊಳಿಸಿರುವ ಹಾಗೂ ಮುಕ್ತಾಯದ ಹಂತದಲ್ಲಿರುವ ಮನೆಗಳ ಸಂಖ್ಯೆ ಎಷ್ಟು; | |
| ಈ) | ಈ ಯೋಜನೆಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? | |

| | | |
|---|---|---|
| | | ಪ್ರಗತಿ ಪರಿಶೀಲನೆ ಕೈಗೊಳ್ಳಲಾಗುತ್ತಿದ್ದು, ನಿಗದಿತ ಕಾಲಾವಧಿಯಲ್ಲಿ ಮನೆಗಳನ್ನು ಪೂರ್ಣಗೊಳಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ವಇ 21 ಹೆಚ್‌ಎಂ 2018

ವಸತಿ ಸಚಿವರು

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1164 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | |
| ಉತ್ತರಿಸಬೇಕಾದ ದಿನಾಂಕ | : | |
| ಉತ್ತರಿಸುವ ಸಚಿವರು | : | ಮಾನ್ಯ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸೊಸೈಟಿಗಳಿಂದ ಪೂರೈಸುತ್ತಿರುವ ಅನ್ನಭಾಗ್ಯ ಯೋಜನೆಯ ಆಹಾರ ಧಾನ್ಯಗಳ ವಿತರಣೆಯಲ್ಲಿನ ಅವ್ಯವಸ್ಥೆ ಸರ್ಕಾರದ ಗಮನಕ್ಕೆ ಬಂದಿದೆಯೇ; | ಸೊಸೈಟಿಗಳಿಂದ ಪೂರೈಸುತ್ತಿರುವ ಅನ್ನಭಾಗ್ಯ ಯೋಜನೆಯ ಆಹಾರ ಧಾನ್ಯಗಳ ವಿತರಣೆಯಲ್ಲಿನ ಅವ್ಯವಸ್ಥೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಆ) | ಹಾಗಿದ್ದರೆ, ಸೊಸೈಟಿಗಳಿಂದ ನೀಡಲ್ಪಡುವ ಆಹಾರಧಾನ್ಯಗಳ ವಿತರಣೆಯಲ್ಲಿ ಮನೆ ಯಜಮಾನನ ಹೆಬ್ಬೆರಳಿನ ಗುರುತು ಪಡೆದು ನೀಡಲಾಗುತ್ತಿದ್ದು, ಕಳೆದ 5-6 ತಿಂಗಳಿಂದ ಕೆಲವು ವಯಸ್ಸಾದ ಹಿರಿಯರ ಹೆಬ್ಬೆರಳ ಗುರುತು ಸರಿಯಾಗಿ ಹೊಂದಾಣಿಕೆ ಆಗುತ್ತಿಲ್ಲವೆಂದು ಆಹಾರಧಾನ್ಯಗಳು ವಿತರಿಸದೇ ಬಾಕಿ ಉಳಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ವಯಸ್ಸಾದ ಹಿರಿಯ ನಾಗರೀಕರ ಹೆಬ್ಬೆರಳಿನ ಗುರುತುಗಳ ಸಮಸ್ಯೆಗಳು ಉದ್ಭವಿಸಿದ ಸಂಧರ್ಭಗಳಲ್ಲಿ ಯಾವುದೇ ಅರ್ಹ ಫಲಾನುಭವಿಗಳಿಗೆ ಪಡಿತರ ವ್ಯತ್ಯಾಸವಾಗದಂತೆ ಕ್ರಮವಹಿಸಲು ಶೇ.2 ರಷ್ಟು ಬಯೋಮೆಟ್ರಿಕ್ ವಿನಾಯಿತಿ ನೀಡಲು ಅವಕಾಶ ಕಲ್ಪಿಸಿದೆ. ಹಾಗೂ ಇಂತಹ ಸಂದರ್ಭಗಳಲ್ಲಿ ಕೂಡ ಪಡಿತರ ವಿತರಣೆಯನ್ನು ನೇರವಾಗಿ ಮಾಡಿ ಅಂತಹ ಪಡಿತರ ಚೀಟಿಗಳನ್ನು ಆನ್ ಲೈನ್ ನಲ್ಲಿ ಅಪ್ ಲೋಡ್ ಮಾಡುವ ಅವಕಾಶವನ್ನು ಕಲ್ಪಿಸಲಾಗಿದೆ. |
| ಇ) | ಹೊಂದಾಣಿಕೆ ಆಗಿಲ್ಲದ ಫಲಾನುಭವಿಗಳಿಗೆ ಬಾಕಿ ಇರುವ ಆಹಾರಧಾನ್ಯಗಳ ಲೆಕ್ಕ ಪಡೆದು ಆಹಾರ ಧಾನ್ಯಗಳನ್ನು ಸರಿಯಾಗಿ ವಿತರಿಸಲಾಗಿದೆಯೇ; ಇದರ | ಮೇಲ್ಕಂಡ (ಆ) ಅಂಶದಲ್ಲಿ ವಿವರಿಸಿದಂತೆ, |

| | | |
|---|---|---|
| | ಬಗ್ಗ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? | |

ಆನಾಸ 28 ಆನಾಸ 2018

ಆಹಾರ ನಾಗರೀಕ ಸರಬರಾಜು ಹಾಗೂ ಗ್ರಾಹಕರ

ವ್ಯವಹಾರಗ:ಳ ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ.

**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 1321 |
| 2. | ಸದಸ್ಯರ ಹೆಸರು : | |
| 3. | ಉತ್ತರಿಸುವ ದಿನಾಂಕ : | |
| 4. | ಉತ್ತರಿಸುವವರು : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |

| | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ರೇಷ್ಮೆ ಇಲಾಖೆಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರಿಗೆ ಎಸ್‌ಸಿಪಿ/ಟಿಎಸ್‌ಪಿ ಅಡಿಯಲ್ಲಿ ಯಾವ ಸೌಲಭ್ಯವನ್ನು ನೀಡಲಾಗುತ್ತಿದೆ. | ರೇಷ್ಮೆ ಇಲಾಖೆಯಿಂದ ಎಸ್.ಸಿ.ಪಿ/ಟಿ.ಎಸ್.ಪಿ ಅಡಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ರೇಷ್ಮೆ ಬೆಳೆಗಾರರಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸುತ್ತಿದೆ.<br>1. ಸುಧಾರಿತ ಹಿಪ್ಪುನೇರಳೆ ತೋಟ ಬೆಳೆಯಲು, ನರ್ಸರಿ ಬೆಳೆಸಲು ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ ಒದಗಿಸಲಾಗುತ್ತಿದೆ.<br>2. ಹಿಪ್ಪುನೇರಳೆ ತೋಟಕ್ಕೆ ಟ್ರಂಚಿಂಗ್– ಮಲ್ಚಿಂಗ್ ಮಾಡಲು ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ.<br>3. ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆಗೆ ಶೇ.90ರಷ್ಟು ಸಹಾಯಧನ.<br>4. ಹಿಪ್ಪುನೇರಳೆ ತೋಟದ ಮಣ್ಣಿನ ಫಲವತ್ತತೆಗಾಗಿ ಜೈವಿಕಗೊಬ್ಬರ ಬಳಕೆ, ಹಿಪ್ಪುನೇರಳೆ ಸೊಪ್ಪಿನ ಇಳುವರಿ ಹಾಗೂ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಸಸ್ಯ ಸಂವರ್ಧಕ ಹಾಗೂ ಬೇರು ಕೊಳೆ ನಿಯಂತ್ರಣಕ್ಕಾಗಿ ಸಹಾಯಧನ.<br>5. ಹಿಪ್ಪುನೇರಳೆ ಮರ ಕೃಷಿ ಪದ್ಧತಿ ಉತ್ತೇಜನಕ್ಕಾಗಿ ಸಹಾಯಧನ.<br>6. ರೇಷ್ಮೆ ಹುಳು ಸಾಕಣಿಕೆ ಮನೆ/ಮೌಂಟಿಂಗ್ ಹಾಲ್ ನಿರ್ಮಾಣಕ್ಕೆ ಸಹಾಯಧನ.<br>7. ಸೋಂಕು ನಿವಾರಕಗಳ ಪೂರೈಕೆ ಮತ್ತು ಸಲಕರಣೆಗಳಿಗೆ ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ. |

| | | |
|---|---|---|
| | | 8. ದ್ವಿತಳಿ ಚಾಕಿ ವೆಚ್ಚಕ್ಕೆ ಸಹಾಯಧನ.<br>9. ಚಾಕಿ ಸಾಕಾಣಿಕಾ ಕೇಂದ್ರಗಳ ಸ್ಥಾಪನೆಗೆ ಸಹಾಯಧನ.<br>10. ನೂತನ ತಾಂತ್ರಿಕತೆಗಳ ಅಳವಡಿಕೆಗೆ ರೈತರಿಗೆ ತರಬೇತಿ ಮತ್ತು ಕಾರ್ಯಾಗಾರ.<br>11. ಮೈಸೂರು ತಳಿ ಹಾಗೂ ದ್ವಿತಳಿ ಬಿತ್ತನೆ ಬೆಳೆಗಾರರು ಬೆಳೆಯುವ ಬಿತ್ತನೆ ಗೂಡಿಗೆ ಬೋನಸ್ ಹಾಗೂ ಪ್ರೋತ್ಸಾಹಧನ ನೀಡಲಾಗುತ್ತಿದೆ.<br>12. ರೀಲಿಂಗ್ ಸಲಕರಣೆಗಳ ಖರೀದಿಗೆ ಸಹಾಯಧನ<br>13. ರೀಲಿಂಗ್ ಶೆಡ್ ನಿರ್ಮಾಣಕ್ಕೆ ಸಹಾಯಧನ<br>14. ಕಾಟೇಜ್ ಬೇಸಿನ್ ಘಟಕ ಸ್ಥಾಪಿಸಲು ಸಹಾಯಧನ.<br>15. ಮಲ್ಟಿ ಎಂಡ್ ರೀಲಿಂಗ್ ಘಟಕ ಸ್ಥಾಪಿಸಲು ಸಹಾಯಧನ<br>16. ಸ್ವಯಂಚಾಲಿತ ರೀಲಿಂಗ್ ಘಟಕ ಸ್ಥಾಪಿಸಲು ಸಹಾಯಧನ<br>17. ಬಾಯ್ಲರ್, ಜನರೇಟರ್, ಸೌರಶಕ್ತಿ ವಾಟರ್ ಹೀಟರ್, ಹೀಟ್ ರಿಕವರಿ ಯೂನಿಟ್ ಅಳವಡಿಕೆಗೆ ಸಹಾಯಧನ. |
| ಆ | ಈ ಯೋಜನೆಯಡಿ ಪ್ರಯೋಜನ ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು: ಯಾವ ರೀತಿ ಸಹಾಯಧನ ನೀಡಲಾಗಿದೆ? (ಸಹಾಯಧನದ ಸಂಪೂರ್ಣ ವಿವರ ನೀಡುವುದು) | 2017–18ನೆ ಸಾಲಿನ ಜನವರಿ–2018ರ ಅಂತ್ಯಕ್ಕೆ ಎಸ್‌ಸಿಪಿ/ಟಿಎಸ್‌ಪಿ ಯೋಜನೆ ಅಡಿಯಲ್ಲಿ 6097 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.<br><br>2017–18ನೇ ಸಾಲಿನ ವಿಶೇಷ ಘಟಕ/ಗಿರಿಜನ ಉಪಯೋಜನೆಯಡಿ ವಿವಿಧ ಕಾರ್ಯಕ್ರಮಗಳ ಅನುಷ್ಠಾಕ್ಕಾಗಿ ಹೊರಡಿಸಲಾದ ಸುತ್ತೋಲೆ ಸಂಖ್ಯೆ: ಯೋ/ಪಿಎಸ್–3/ಎಸ್‌ಸಿಪಿ/ಟಿಎಸ್‌ಪಿ/ಮಾ/56/17–18, ದಿನಾಂಕ: 21–06–2017 ರನ್ವಯ ಸಹಾಯಧನ ನೀಡಲಾಗಿದೆ. |

| | | |
|---|---|---|
| ಇ | ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ? (ತಾಲ್ಲೂಕುವಾರು ಮಾಹಿತಿ ನೀಡುವುದು) | ರೇಷ್ಮೆ ಇಲಾಖೆಯಿಂದ 2016–17 ಮತ್ತು 2017–18ನೇ ಸಾಲಿನಲ್ಲಿ (ಜನವರಿ–18ರ ಅಂತ್ಯಕ್ಕೆ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸಹಾಯಧನ ನೀಡಲಾದ ಫಲಾನುಭವಿಗಳ ವಿವರ ಕೆಳಕಂಡಂತಿದೆ. |

| ಜಿಲ್ಲೆ | ತಾಲ್ಲೂಕು | ಫಲಾನುಭವಿಗಳ ಸಂಖ್ಯೆ | |
|---|---|---|---|
| | | 2016–17 | 2017–18 |
| ಮೈಸೂರು | ಮೈಸೂರು | 23 | 23 |
| | ತಿ.ನರಸೀಪುರ | 29 | 23 |
| | ನಂಜನಗೂಡು | 5 | 20 |
| | ಹೆಚ್.ಡಿ. ಕೋಟೆ | 65 | 75 |
| | ಕೆ.ಆರ್. ನಗರ | 17 | 9 |
| | ಹುಣಸೂರು | 7 | 16 |
| | ಪಿರಿಯಾಪಟ್ಟಣ | 12 | 12 |
| ಚಾಮರಾಜ ನಗರ | ಚಾಮರಾಜನಗರ | 15 | 09 |
| | ಕೊಳ್ಳೇಗಾಲ | 03 | 04 |
| | ಗುಂಡ್ಲುಪೇಟೆ | – | 05 |
| | ಯಳಂದೂರು | 06 | – |

ತೋಇ 44 ರೇಕೃವಿ 2018

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

## ಶಾಸನ ರಚನೆ ಮಾದರಿ ವಿಧೇಯಕ

# ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ವಿಧೇಯಕ, 2017

ಕರ್ನಾಟಕ ರಾಜ್ಯದಲ್ಲಿ ರಸ್ತೆ ಸುರಕ್ಷತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಮತ್ತು ರಸ್ತೆ ಸುರಕ್ಷತಾ ನಿಧಿಯನ್ನು ಸ್ಥಾಪಿಸುವುದಕ್ಕಾಗಿ, ರಸ್ತೆ ಸುರಕ್ಷತಾ ಪ್ರಾಧಿಕಾರವನ್ನು ರಚಿಸಲು ಹಾಗೂ ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧವನ್ನು ಕಲ್ಪಿಸಲು ಒಂದು ವಿಧೇಯಕ.

ಕರ್ನಾಟಕ ರಾಜ್ಯದಲ್ಲಿ ರಸ್ತೆ ಸುರಕ್ಷತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಮತ್ತು ರಸ್ತೆ ಸುರಕ್ಷತಾ ನಿಧಿಯನ್ನು ಸ್ಥಾಪಿಸುವುದಕ್ಕಾಗಿ, ರಸ್ತೆ ಸುರಕ್ಷತಾ ಪ್ರಾಧಿಕಾರವನ್ನು ರಚಿಸಲು ಹಾಗೂ ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧವನ್ನು ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಹಾಗೂ ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಯಾವುದೇ ಅಂಥ ಉಪಬಂಧದಲ್ಲಿ 'ಈ ಅಧಿನಿಯಮದ ಪ್ರಾರಂಭಕ್ಕೆ' ಎಂದು ಮಾಡಿದ ಯಾವುದೇ ಉಲ್ಲೇಖವನ್ನು ಆ ಉಪಬಂಧ ಜಾರಿಗೆ ಬರುವುದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

2. **ಪರಿಭಾಷೆಗಳು.**– (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಪಘಾತ" ಎಂದರೆ, ಸಾರ್ವಜನಿಕ ರಸ್ತೆಯಲ್ಲಿ ಮೋಟಾರು ವಾಹನದ ಬಳಕೆಯ ಕಾರಣದಿಂದಾಗಿ, ಯಾವುವೇ ಸಾರ್ವಜನಿಕ ಸ್ವತ್ತುಗಳಿಗೆ, ಇತರ ವಾಹನಗಳಿಗೆ ಅಥವಾ ಸಂದರ್ಭಾನುಸಾರವಾಗಿ ಯಾವುದೇ ಸ್ವತ್ತಿಗೆ ಹಾನಿಯನ್ನು ಉಂಟು ಮಾಡಿದ ಅಥವಾ ಯಾವೊಬ್ಬ ವ್ಯಕ್ತಿಗೆ ಮರಣ, ದೈಹಿಕ ಗಾಯವನ್ನು ಉಂಟು ಮಾಡಿದ ಯಾವುದೇ ಘಟನೆ;

(ಬಿ) "ಅಪರ ಆಯುಕ್ತ" ಎಂದರೆ, ಸಾರಿಗೆ ಇಲಾಖೆಯ ಅಪರ ಆಯುಕ್ತ (ರಸ್ತೆ ಸುರಕ್ಷತೆ);

(ಸಿ) "ಪ್ರಾಧಿಕಾರ" ಎಂದರೆ, 4ನೇ ಪ್ರಕರಣದ ಅಡಿಯಲ್ಲಿ ರಚಿಸಿದ 'ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ';

(ಡಿ) "ಆಯುಕ್ತ" ಎಂದರೆ, ಸಾರಿಗೆ ಇಲಾಖೆಯ ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತ, ಆತನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರಕ್ಕೂ ಸಹ ಆಯುಕ್ತನಾಗಿರತಕ್ಕದ್ದು;

(ಇ) "ಪರಿಷತ್ತು" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತು;

(ಎಫ್) "ಜಿಲ್ಲೆ" ಎಂದರೆ, ಕಂದಾಯ ಜಿಲ್ಲೆ;

(ಜಿ) "ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ" ಎಂದರೆ, 21ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ;

(ಹೆಚ್) "ನಿಧಿ" ಎಂದರೆ, 13ನೇ ಪ್ರಕರಣ ಅಡಿಯಲ್ಲಿ ರಚಿಸಿದ 'ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ನಿಧಿ';

(ಐ) "ಸ್ಥಳೀಯ ಪ್ರಾಧಿಕಾರ" ಎಂದರೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ, 14) ಅಡಿಯಲ್ಲಿ ರಚಿಸಿದ ಪಂಚಾಯತ್ ಅಥವಾ ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ (1977ರ ಕರ್ನಾಟಕ ಅಧಿನಿಯಮ, 14) ಅಡಿಯಲ್ಲಿ ರಚಿಸಿದ ನಗರ ಪಾಲಿಕೆಗಳು;

(ಜೆ) "ಸಾರ್ವಜನಿಕ ರಸ್ತೆ"ಯು ಸಾರ್ವಜನಿಕರು ಪ್ರವೇಶಾವಕಾಶ ಹೊಂದಿರುವ ಯಾವುದೇ ಖಾಸಗಿ ರಸ್ತೆಯನ್ನು ಮತ್ತು ಸಂಚಾರಿ ವಿಭಾಜಕಗಳು, ರಸ್ತೆ ವಿಭಾಜಕಗಳು ಮತ್ತು ಪಾದಚಾರಿ ರಸ್ತೆಗಳನ್ನು ಒಳಗೊಳ್ಳುತ್ತದೆ;

(ಕೆ) "ನಿಯಮಿಸಲಾದ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಲ್) "ವಿನಿಯಮಗಳು" ಎಂದರೆ, 40ನೇ ಪ್ರಕರಣದ ಅಡಿಯಲ್ಲಿ ರಚಿಸಿದ ವಿನಿಯಮಗಳು;

(ಎಮ್) "ವಾಹನ"ವು ಮಾನವರ, ಪ್ರಾಣಿಗಳ ಅಥವಾ ಸರಕುಗಳ ಸಾಗಣೆಗಾಗಿ ಅಥವಾ ಚಲನವಲನಕ್ಕಾಗಿ ಬಳಸಲಾಗುವ ಅಥವಾ ಬಳಸಲು ಸಾಧ್ಯವಿರುವ ಯಾವುವೇ ವಿಶೇಷ ವಾಹನ (contraption) ಅಥವಾ ಸಾಧನವನ್ನು (device) ಒಳಗೊಳ್ಳುತ್ತದೆ.

(2) ಈ ಅಧಿನಿಯಮದಲ್ಲಿ ಬಳಸಿದ ಆದರೆ ಪರಿಭಾಷಿಸಿರದ ಪದಗಳು ಮತ್ತು ಪದಾವಳಿಗಳು, ಮೋಟಾರು ವಾಹನಗಳ ಅಧಿನಿಯಮ, 1988ರಲ್ಲಿ (1988ರ ಕೇಂದ್ರ ಅಧಿನಿಯಮ 59), ಕರ್ನಾಟಕ ಹೆದ್ದಾರಿ ಅಧಿನಿಯಮ, 1964ರಲ್ಲಿ (1964ರ ಕರ್ನಾಟಕ ಅಧಿನಿಯಮ, 44) ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳಲ್ಲಿ ಅವುಗಳಿಗೆ ಕ್ರಮವಾಗಿ ನೀಡಿದ ಅರ್ಥಗಳನ್ನೇ ಹೊಂದಿರತಕ್ಕದ್ದು.

**3. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತಿನ ರಚನೆ.–** (1) ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತು ಎಂದು ಕರೆಯಲಾಗುವ ಒಂದು ಪರಿಷತ್ತನ್ನು ರಚಿಸಬಹುದು.

(2) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತು ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು:–

| | | |
|---|---|---|
| (ಎ) | ಸಾರಿಗೆ ಇಲಾಖೆಯ ಪ್ರಭಾರ ಹೊಂದಿರುವ ಸಚಿವರು | ಅಧ್ಯಕ್ಷ |
| (ಬಿ) | ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ | ಉಪಾಧ್ಯಕ್ಷ |
| (ಸಿ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಇಲಾಖೆ | ಪದನಿಮಿತ್ತ ಸದಸ್ಯ |
| (ಡಿ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ | ಪದನಿಮಿತ್ತ ಸದಸ್ಯ |
| (ಇ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ | ಪದನಿಮಿತ್ತ ಸದಸ್ಯ |
| (ಎಫ್) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ | ಪದನಿಮಿತ್ತ ಸದಸ್ಯ |
| (ಜಿ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ | ಪದನಿಮಿತ್ತ ಸದಸ್ಯ |
| (ಎಚ್) | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ | ಪದನಿಮಿತ್ತ ಸದಸ್ಯ |
| (ಐ) | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಪದನಿಮಿತ್ತ ಸದಸ್ಯ |
| (ಜೆ) | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ | ಪದನಿಮಿತ್ತ ಸದಸ್ಯ |
| (ಕೆ) | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಪದನಿಮಿತ್ತ ಸದಸ್ಯ |
| (ಎಲ್) | ಪೊಲೀಸ್ ಮಹಾನಿರ್ದೇಶಕ ಮತ್ತು ಮಹಾ ನಿರೀಕ್ಷಕ | ಪದನಿಮಿತ್ತ ಸದಸ್ಯ |
| (ಎಂ) | ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ರಸ್ತೆ ಸುರಕ್ಷತಾ ಆಯುಕ್ತ | ಸದಸ್ಯ |
| (ಎನ್) | ಅಪರ ಆಯುಕ್ತ | ಸದಸ್ಯ ಕಾರ್ಯದರ್ಶಿ |
| (ಒ) | ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ರಸ್ತೆ ಸುರಕ್ಷತಾ ಕ್ಷೇತ್ರದಲ್ಲಿ ತಜ್ಞರಾಗಿರುವ ಇಬ್ಬರು ವ್ಯಕ್ತಿಗಳು | ಸದಸ್ಯರು |

(3) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತು, ಅದು ಅವಶ್ಯವೆಂದು ಭಾವಿಸಬಹುದಾದ ಅಂಥ ಇತರ ಸಚಿವರು, ರಾಜ್ಯ ಸರ್ಕಾರದ ಅಧಿಕಾರಿಗಳು ಮತ್ತು ಇತರ ತಜ್ಞರನ್ನು ವಿಶೇಷ ಆಹ್ವಾನಿತರನ್ನಾಗಿ ಆಹ್ವಾನಿಸಬಹುದು.

(4) ಯಾವೊಬ್ಬ ವ್ಯಕ್ತಿಯು, ಆತನು,-

(ಎ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಂಡ ಅಪರಾಧಕ್ಕಾಗಿ ಸಿದ್ಧದೋಷಿಯಾಗಿದ್ದರೆ ಮತ್ತು ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಬಿ) ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯವು ಹಾಗೆಂದು ನಿಲುವು ತಾಳಿ ಘೋಷಿಸಿದ್ದರೆ; ಅಥವಾ

(ಸಿ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಡಿ) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಮಾಲಿಕತ್ವ ಹೊಂದಿದ ನಿಕಾಯ ಅಥವಾ ನಿಗಮದ ಸೇವೆಯಿಂದ ತೆಗೆದುಹಾಕಲ್ಪಟ್ಟಿದ್ದರೆ ಅಥವಾ ವಜಾಗೊಂಡಿದ್ದರೆ;

(ಇ) ಸ್ವತಃ ಆಗಲಿ ಅಥವಾ ಪಾಲುದಾರನಾಗಿಯಾಗಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ಪ್ರಾಧಿಕಾರದ ಆದೇಶದ ಮೂಲಕ ಮಾಡಿದ ಯಾವುದೇ ಕಾರ್ಯದಲ್ಲಿ ಅಥವಾ ಪ್ರಾಧಿಕಾರದೊಂದಿಗೆ ಅಥವಾ ಅದರ ಅಧೀನದಲ್ಲಿ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಒಪ್ಪಂದದಲ್ಲಿ ಅಥವಾ ನಿಯೋಜನೆಯಲ್ಲಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ; ಅಥವಾ

(ಎಫ್) ಪ್ರಾಧಿಕಾರದ ಪರವಾಗಿ ಸಂದಾಯಿತ ಕಾನೂನು ವೃತ್ತಿದಾರನಾಗಿ ನಿಯೋಜಿತನಾಗಿದ್ದರೆ ಅಥವಾ ಪ್ರಾಧಿಕಾರದ ವಿರುದ್ಧ ಕಾನೂನು ವೃತ್ತಿದಾರನಾಗಿ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ,

– ಸದಸ್ಯನಾಗಲು ಅರ್ಹನಾಗತಕ್ಕದ್ದಲ್ಲ.

(5) ಪರಿಷತ್ತು, ಕನಿಷ್ಠಪಕ್ಷ ಆರು ತಿಂಗಳುಗಳಿಗೆ ಒಂದು ಬಾರಿ ಸಭೆ ಸೇರತಕ್ಕದ್ದು. ಸರ್ಕಾರೇತರ ಸದಸ್ಯರು ಸಭೆಗಳಿಗೆ ಹಾಜರಾಗುವುದಕ್ಕೆ ನಿಯಮಿಸಲಾದ ಉಪವೇಶನ ಶುಲ್ಕ ಅಥವಾ ಪ್ರವಾಸ ಭತ್ಯೆ ಅಥವಾ ದಿನ ಭತ್ಯೆಯನ್ನು ಹೊಂದಲು ಅರ್ಹರಾಗಿರತಕ್ಕದ್ದು.

(6) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತು ಸಲಹಾತ್ಮಕ ಸ್ವರೂಪದ್ದಾಗಿರತಕ್ಕದ್ದು ಮತ್ತು ಕರ್ನಾಟಕ ರಾಜ್ಯದಲ್ಲಿ ರಸ್ತೆ ಸುರಕ್ಷತಾ ಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರಕ್ಕೆ ಸಲಹೆ ನೀಡತಕ್ಕದ್ದು.

**4. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ರಚನೆ.–** (1) ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, "ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ" ಎಂದು ಕರೆಯಲಾಗುವ ಒಂದು ಪಾಧಿಕಾರವನ್ನು ರಚಿಸಬಹುದು.

(2) ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಅಧಿಕಾರಗಳೊಂದಿಗೆ, ಚರ ಮತ್ತು ಸ್ಥಿರ ಎರಡು ಸ್ವತ್ತಿನ ಆರ್ಜನೆಗೆ, ಧಾರಣಕ್ಕೆ ಮತ್ತು ವಿಲೆಗೆ ಹಾಗೂ ಕರಾರು ಮಾಡಿಕೊಳ್ಳಲು ಮೇಲೆ ಹೇಳಿದ ಹೆಸರಿನ ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಒಂದು ನಿಕಾಯವಾಗಿರತಕ್ಕದ್ದು ಹಾಗೂ ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೊಳಗಾಗತಕ್ಕದ್ದು.

(3) ಪ್ರಾಧಿಕಾರದ ಕೇಂದ್ರ ಕಚೇರಿಯು ಬೆಂಗಳೂರು ನಗರದಲ್ಲಿರತಕ್ಕದ್ದು.

5. **ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ.–** ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು:

| | | |
|---|---|---|
| (ಎ) | ಸರ್ಕಾರದ ಮುಖ್ಯ ಕಾರ್ಯದರ್ಶಿ | ಅಧ್ಯಕ್ಷ |
| (ಬಿ) | ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ | ಉಪಾಧ್ಯಕ್ಷ |
| (ಸಿ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಇಲಾಖೆ | ಪದನಿಮಿತ್ತ ಸದಸ್ಯ |
| (ಡಿ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ | ಪದನಿಮಿತ್ತ ಸದಸ್ಯ |
| (ಇ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ | ಪದನಿಮಿತ್ತ ಸದಸ್ಯ |
| (ಎಫ್) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ | ಪದನಿಮಿತ್ತ ಸದಸ್ಯ |
| (ಜಿ) | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಪದನಿಮಿತ್ತ ಸದಸ್ಯ |
| (ಎಚ್) | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಪದನಿಮಿತ್ತ ಸದಸ್ಯ |
| (ಐ) | ಪೊಲೀಸ್ ಮಹಾನಿರ್ದೇಶಕ ಮತ್ತು ಮಹಾ ನಿರೀಕ್ಷಕ | ಪದನಿಮಿತ್ತ ಸದಸ್ಯ |
| (ಜೆ) | ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತ | ಸದಸ್ಯ |
| (ಕೆ) | ಅಪರ ಆಯುಕ್ತ | ಸದಸ್ಯ ಕಾರ್ಯದರ್ಶಿ |

**6. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಪ್ರಕಾರ್ಯಗಳು.–** ಪ್ರಾಧಿಕಾರವು ಈ ಮುಂದಿನ ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ಪರಿಣಾಮಕಾರಿ ರಸ್ತೆ ಸುರಕ್ಷತಾ ನೀತಿಗಳನ್ನು ರೂಪಿಸುವುದು ಹಾಗೂ ಕಾಲಕಾಲಕ್ಕೆ ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಪರಿಯೋಜನೆಗಳನ್ನು, ಕಾರ್ಯಕ್ರಮಗಳನ್ನು ಮತ್ತು ಸ್ಕೀಮುಗಳನ್ನು ರೂಪಿಸುವುದು ಹಾಗೂ ಅವುಗಳನ್ನು ಜಾರಿಗೊಳಿಸುವುದು;

(ii) ರಸ್ತೆ ಸುರಕ್ಷತಾ ಕ್ರಮಗಳನ್ನು (standards) ಮತ್ತು ಕಾರ್ಯವಿಧಾನಗಳನ್ನು ನಿಯಮಿಸುವುದು ಮತ್ತು ಜಾರಿಗೊಳಿಸುವುದು ಹಾಗೂ ನಿಯಮಿಸಲಾದ ಕ್ರಮಗಳು ಮತ್ತು ಕಾರ್ಯವಿಧಾನಗಳಿಗನುಸಾರವಾಗಿ ನಡೆದುಕೊಳ್ಳುವುದು ಅಥವಾ ನಡೆದುಕೊಳ್ಳುವಂತೆ ಮಾಡುವುದು;

(iii) ಸಾಮಾನ್ಯವಾಗಿ ರಸ್ತೆಗಳ ಸೂಕ್ತ ಮತ್ತು ಸುರಕ್ಷಿತ ಬಳಕೆಗೆ ಸಂಬಂಧಿಸಿದಂತೆ ವಾಹನ ಚಾಲಕರು, ಮೋಟಾರು ಸವಾರರು ಮತ್ತು ಇತರ ಸಾರ್ವಜನಿಕರನ್ನು ಸುಶಿಕ್ಷಿತರನ್ನಾಗಿ ಮಾಡುವುದನ್ನು ಒಳಗೊಂಡಂತೆ ರಸ್ತೆ ಸುರಕ್ಷತಾ ಅರಿವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು;

(iv) ರಸ್ತೆ ಸುರಕ್ಷತೆ ಕುರಿತು ಸಂಶೋಧನೆ ನಡೆಸುವುದು ಹಾಗೂ ಯೋಜನೆ, ನೀತಿ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ರಸ್ತೆ ಅಪಘಾತಗಳಿಗೆ ಸಂಬಂಧಿಸಿದ ಮಾಹಿತಿ ಮತ್ತು ಅಂಕಿ–ಅಂಶಗಳ ಮೌಲ್ಯಮಾಪನ ಮಾಡುವುದು;

(v) ರಸ್ತೆ ಸುರಕ್ಷತೆಗೆ ಸಂಬಂಧಿಸಿದಂತೆ ಕರ್ತವ್ಯಗಳನ್ನು ನಿಭಾಯಿಸುತ್ತಿರುವ ಎಲ್ಲಾ ಏಜನ್ಸಿಗಳ ಮತ್ತು ಸರ್ಕಾರಿ ಇಲಾಖೆಗಳ ಪ್ರಕಾರ್ಯಗಳನ್ನು ಸಮನ್ವಯಗೊಳಿಸುವುದು;

(vi) ರಸ್ತೆ ಸುರಕ್ಷತೆ ಮತ್ತು ಸಂಚಾರ ನಿರ್ವಹಣೆ ಕುರಿತಂತೆ ಹಿತಾಸಕ್ತಿಯುಳ್ಳ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಏಜನ್ಸಿಗಳೊಂದಿಗೆ ಸಂಪರ್ಕ ಸಾಧಿಸುವುದು;

(vii) ಅಪಘಾತ ನಡೆಯುವ ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆಗಾಗಿ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ (ಕೆಎಸ್‌ಆರ್‌ಎಸ್‌ಎ) ಮುಂದಾಳತ್ವದಲ್ಲಿ ಸ್ವ–ಸಹಾಯ ಗುಂಪುಗಳನ್ನು ರೂಪಿಸುವುದು;

(viii) ನಿಧಿ ನಿರ್ವಹಣೆ;

(ix) ರಸ್ತೆ ಸುರಕ್ಷತಾ ಸ್ಕೀಮುಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ವೆಚ್ಚವನ್ನು ಮಂಜೂರು ಮಾಡುವುದು;

(x) ರಸ್ತೆ ಸುರಕ್ಷತಾ ಪರಿಯೋಜನೆಗಳಿಗಾಗಿ ಮತ್ತು ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಸಲಕರಣೆಗಳು ಮತ್ತು ಸಾಧನಗಳ ಖರೀದಿಗಾಗಿ ಮತ್ತು ಅಳವಡಿಕೆಗಾಗಿ ವೆಚ್ಚವನ್ನು ಮಂಜೂರು ಮಾಡುವುದು;

(xi) ರಸ್ತೆ ಸುರಕ್ಷತೆಗೆ ಸಂಬಂಧಿಸಿದ ವಿಷಯಗಳನ್ನು ಕುರಿತ ಅಧ್ಯಯನಗಳು, ಪರಿಯೋಜನೆಗಳು ಮತ್ತು ಸಂಶೋಧನೆಯನ್ನು ನಡೆಸುವುದಕ್ಕಾಗಿ ವೆಚ್ಚವನ್ನು ಮಂಜೂರು ಮಾಡುವುದು;

(xii) ದೈಹಿಕ ಅಥವಾ ಮಾನಸಿಕ ಆಘಾತ–ಕಾಳಜಿ (trauma-care) ಕಾರ್ಯಕ್ರಮಗಳಿಗೆ ಅಥವಾ ಕಾರ್ಯಚಟುವಟಿಕೆಗಳಿಗೆ ವೆಚ್ಚವನ್ನು ಮಂಜೂರು ಮಾಡುವುದು;

(xiii) ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚವನ್ನು ಮಂಜೂರು ಮಾಡುವುದು;

(xiv) ರಸ್ತೆ ಸುರಕ್ಷತಾ ಕ್ರಮಗಳಿಗೆ ಸಂಬಂಧಿಸಿದ ವಿಷಯಗಳಿಗೆ ಸಂಬಂಧಿಸಿದ ವೆಚ್ಚವನ್ನು ಮಂಜೂರು ಮಾಡುವುದು;

(xv) ಈ ಅಧಿನಿಯಮದ ಉದ್ದೇಶಗಳಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದ ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು;

(xvi) ಪೊಲೀಸ್ ಇಲಾಖೆಯ ಮುಖಾಂತರ ಸಮಗ್ರ ರಸ್ತೆ ಅಪಘಾತ ದತ್ತಾಂಶಾಧಾರಿತ ನಿರ್ವಹಣಾ ವ್ಯವಸ್ಥೆಯನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(xvii) ಕ್ರಿಯಾ ಯೋಜನೆಯ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳುವುದು ಹಾಗೂ ಇಡೀ ಹಿತಾಸಕ್ತ ಇಲಾಖೆಗಳ ಎಂದರೆ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಪೊಲೀಸ್, ಸಾರಿಗೆ, ಶಿಕ್ಷಣ, ಆರೋಗ್ಯ, ನಗರಾಭಿವೃದ್ಧಿ, ಅಬಕಾರಿ ಮುಂತಾದಂಥ ಇಲಾಖೆಗಳ ಮೂಲಕ ರಸ್ತೆ ಸುರಕ್ಷತೆ ಕುರಿತ ಮಾನ್ಯ ಸರ್ವೋಚ್ಚ ನ್ಯಾಯಾಲಯ ಸಮಿತಿಯ ನಿರ್ದೇಶನಗಳಿಗನುಸಾರವಾಗಿ ಕಾಲಕಾಲಕ್ಕೆ ಅದನ್ನು ಪರಿಷ್ಕರಿಸುವುದು;

(xviii) ರಸ್ತೆ ಸುರಕ್ಷತೆ ಕುರಿತ ಮಾನ್ಯ ಸರ್ವೋಚ್ಚ ನ್ಯಾಯಾಲಯ ಸಮಿತಿಯೊಂದಿಗೆ ಸಂಪರ್ಕ ಸಾಧಿಸುವುದು ಮತ್ತು ರಸ್ತೆ ಸುರಕ್ಷತೆ ಕುರಿತ ಮಾನ್ಯ ಸರ್ವೋಚ್ಚ ನ್ಯಾಯಾಲಯ ಸಮಿತಿಯು ಕರೆಯುವ ಎಲ್ಲಾ ಸಭೆಗಳಿಗೆ ಅಥವಾ ಪರಿಶೀಲನಾ ಸಭೆಗಳಿಗೆ ಹಾಜರಾಗುವುದು ಹಾಗೂ ರಸ್ತೆ ಸುರಕ್ಷತೆ ಕುರಿತ ಮಾನ್ಯ ಸರ್ವೋಚ್ಚ ನ್ಯಾಯಾಲಯ ಸಮಿತಿಯು ನೀಡುವ ಎಲ್ಲ ಅಂಥ ನಿರ್ದೇಶನಗಳ ಅನುಪಾಲನೆಗೆ ಕೇಳುವ ಎಲ್ಲಾ ಅಂಥ ಮಾಹಿತಿ ಅಥವಾ ವರದಿಗಳು ಅಥವಾ ಚರ್ಚೆ ಅಥವಾ ಅಂಕಿ-ಅಂಶಗಳು ಅಥವಾ ದಾಖಲೆಗಳು, ಮುಂತಾದವನ್ನು ಒದಗಿಸುವುದು. ಎಲ್ಲ ಹಿತಾಸಕ್ತ ಇಲಾಖೆಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯ ಸಮಿತಿಯ ಎಲ್ಲ ನಿರ್ದೇಶನಗಳನ್ನು ಕಡ್ಡಾಯವಾಗಿ (invariably) ಅನುಷ್ಠಾನಗೊಳಿಸತಕ್ಕದ್ದು ಹಾಗೂ ನಿಯಮಿಸಲಾದ ಅವಧಿಯೊಳಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯ ಸಮಿತಿಯು ಕೇಳುವ ಎಲ್ಲಾ ದತ್ತಾಂಶ ಅಥವಾ ಮಾಹಿತಿ ದಾಖಲೆಗಳನ್ನು ಸಹ ಒದಗಿಸುವುದು; ಮತ್ತು

(xix) ರಸ್ತೆ ಸುರಕ್ಷತಾ ಕ್ರಮಗಳ ಅನುಷ್ಠಾನದ ಉದ್ದೇಶಕ್ಕಾಗಿ ವಿಶೇಷ ಜಾರಿ ಕ್ರಮಗಳನ್ನು (drives) ನಿರ್ವಹಿಸುವ ಅಧಿಕಾರವನ್ನು ಹಿತಾಸಕ್ತ ಇಲಾಖೆಗಳ ಮುಖ್ಯಸ್ಥರು ಹೊಂದಿರುವುದು.

**7. ಸಭೆಗಳು.-** (1) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಮತ್ತು ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಗಳು, ಪ್ರಾಧಿಕಾರದ ಅಥವಾ ಸಂದರ್ಭಾನುಸಾರವಾಗಿ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಅಧ್ಯಕ್ಷರು, ನಿರ್ಧರಿಸಬಹುದಾದ ಅಂಥ ಸಮಯಕ್ಕೆ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು ಮತ್ತು ಸಭೆಗಳಲ್ಲಿ ವ್ಯವಹರಿಸಬೇಕಾದಂಥ ವಿಷಯಗಳಿಗೆ ಸಂಬಂಧಿಸಿದಂತೆ ವಿನಿಯಮಗಳ ಮೂಲಕ ರಚಿಸಬಹುದಾದ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

(2) ಪ್ರಾಧಿಕಾರದ ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷ ಅಥವಾ ಆತನ ಗೈರುಹಾಜರಿಯಲ್ಲಿ, ಉಪಾಧ್ಯಕ್ಷ ಅಥವಾ ಸಂದರ್ಭಾನುಸಾರವಾಗಿ ಉಪಸ್ಥಿತರಿರುವ ಸದಸ್ಯರು ಆಯ್ಕೆ ಮಾಡಿದ ಒಬ್ಬ ಸದಸ್ಯನು ವಹಿಸತಕ್ಕದ್ದು.

(3) ಪ್ರಾಧಿಕಾರವು ಕನಿಷ್ಠಪಕ್ಷ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು.

(4) ಪ್ರಾಧಿಕಾರದ ಸಭೆಯ ಗಣಪೂರ್ತಿ (ಕೋರಂ) ಐದು ಆಗಿರತಕ್ಕದ್ದು.

**8. ವ್ಯವಹಾರ ನಿರ್ವಹಣೆ.–** ಪ್ರಾಧಿಕಾರವು ನಿರ್ಧರಿಸಬೇಕಾದ ಪ್ರತಿಯೊಂದು ವಿಷಯವನ್ನು, ಉಪಸ್ಥಿತರಿರುವ ಸದಸ್ಯರ ಬಹುಮತದ ನಿರ್ಣಯಕ್ಕನುಸಾರವಾಗಿ, ಪ್ರಾಧಿಕಾರದ ಸಭೆಗಳಲ್ಲಿ ಪರಿಗಣಿಸತಕ್ಕದ್ದು ಮತ್ತು ಸಂದರ್ಭಾನುಸಾರವಾಗಿ ನಿರ್ವಹಿಸತಕ್ಕದ್ದು.

**9. ಖಾಲಿ ಸ್ಥಾನಗಳು, ಇತ್ಯಾದಿ ಪ್ರಾಧಿಕಾರದ ವ್ಯವಹರಣೆಗಳನ್ನು ಅಸಿಂಧುಗೊಳಿಸುವಂತಿಲ್ಲ.–** ಪ್ರಾಧಿಕಾರದ ಯಾವುದೇ ಕ್ರಮವನ್ನು ಅಥವಾ ವ್ಯವಹರಣೆಗಳನ್ನು, ಯಾವುದೇ ಖಾಲಿಸ್ಥಾನವಿರುವ ಅಥವಾ ಪ್ರಾಧಿಕಾರದ ರಚನೆಯಲ್ಲಿನ ದೋಷದ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕದ್ದಲ್ಲ ಅಥವಾ ಅಸಿಂಧುಗೊಳಿಸತಕ್ಕದ್ದಲ್ಲ.

**10. ರಸ್ತೆ ಸುರಕ್ಷತಾ ಆಯುಕ್ತ.–** ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತನು ಸಹ ಆಗಿರತಕ್ಕದ್ದು. ಅಪರ ಆಯುಕ್ತನು ಪ್ರಾಧಿಕಾರದ ಅಪರ ಆಯುಕ್ತನಾಗಿರತಕ್ಕದ್ದು.

**11. ಪ್ರಾಧಿಕಾರದ ಆಡಳಿತಾತ್ಮಕ ಮುಖ್ಯಸ್ಥ.–** ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತನು, ಪ್ರಾಧಿಕಾರದ ಪ್ರಕಾರ್ಯ ನಿರ್ವಹಣೆಗಾಗಿ ಆಡಳಿತಾತ್ಮಕ ಮುಖ್ಯಸ್ಥನಾಗಿರತಕ್ಕದ್ದು ಮತ್ತು ಅಪರ ಆಯುಕ್ತನು ಆತನಿಗೆ ನೆರವಾಗತಕ್ಕದ್ದು.

**12. ನಿಧಿಯ ಸ್ಥಾಪನೆ.–** (1) ಪ್ರಾಧಿಕಾರದ ರಚನೆಯ ತರುವಾಯ, ಒಂದು ವರ್ಷದ ಒಳಗಾಗಿ, 'ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ನಿಧಿ' ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು.

(2) ಈ ಮುಂದಿನವುಗಳನ್ನು ನಿಧಿಗೆ ಜಮೆ ಮಾಡತಕ್ಕದ್ದು:–

(ಎ) ರಾಜ್ಯ ಸರ್ಕಾರವು ನೀಡಿದ ಅನುದಾನಗಳು, ಸಾಲಗಳು, ಕೊಡುಗೆಗಳು ಅಥವಾ ಮುಂಗಡಗಳು;

(ಬಿ) ಕೇಂದ್ರ ಸರ್ಕಾರವು ನೀಡಿದ ಅನುದಾನಗಳು, ಸಾಲಗಳು, ಕೊಡುಗೆಗಳು ಅಥವಾ ಮುಂಗಡಗಳು;

(ಸಿ) ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳು ಅಥವಾ ಸಂಘಟನೆಗಳು ನೀಡಿದ ಕೊಡುಗೆಗಳು;

(ಡಿ) 30ನೇ ಪ್ರಕರಣದ ಅಡಿಯಲ್ಲಿ ಸಂಗ್ರಹಿಸಿದ ರಾಜಿ ಶುಲ್ಕ; ಮತ್ತು

(ಇ) ಸ್ಮಾರ್ಟ್ ಕಾರ್ಡ್‌ಗಳನ್ನು ನೀಡುವ ಮೂಲಕ ಸಂಗ್ರಹಿಸಿದ ಶುಲ್ಕದ ಮೊತ್ತ;

– ಇವುಗಳನ್ನು ರಸ್ತೆ ಸುರಕ್ಷತಾ ನಿಧಿಗೆ ಜಮೆ ಮಾಡತಕ್ಕದ್ದು.

(3) ರಾಜ್ಯ ಸರ್ಕಾರವು, ಮೋಟಾರು ವಾಹನಗಳ ಅಧಿನಿಯಮ, 1988ರ (1988ರ ಕೇಂದ್ರ ಅಧಿನಿಯಮ, 59) 200ನೇ ಪ್ರಕರಣದ ಅಡಿಯಲ್ಲಿ ಹಿಂದಿನ ವರ್ಷದಲ್ಲಿ ಸಂಗ್ರಹಿಸಿದ ರಾಜಿ ಶುಲ್ಕದ ಶೇಕಡಾ ಐವತ್ತಕ್ಕೆ ಸಮನಾದ ಮೊತ್ತವನ್ನು ಪ್ರತಿವರ್ಷ ನಿಧಿಗೆ ನೀಡತಕ್ಕದ್ದು.

(4) ನಿಯಮಿಸಬಹುದಾದ ಅಂಥ ಇತರ ನಿಧಿಯ ಮೂಲಗಳು.

**13. ಉಪಕರವನ್ನು ವಿಧಿಸುವುದು ಮತ್ತು ಸಂಗ್ರಹಿಸುವುದು.–** (1) ವಾಹನ ನೋಂದಣಿ ಸಮಯದಲ್ಲಿ, ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಅಂಥ ದರದಲ್ಲಿ, ಒಂದು ಸಾವಿರ ರೂಪಾಯಿಗಳಿಗೆ ಹೆಚ್ಚಿರದಂಥ ಏಕಕಾಲಿಕ ಉಪಕರವನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು. ಬೇರೆ ಬೇರೆ ವರ್ಗದ ಮೋಟಾರು ವಾಹನಗಳಿಗಾಗಿ ಬೇರೆ ಬೇರೆ ದರಗಳನ್ನು ವಿಧಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

(3) ನೋಂದಣಿ ಪ್ರಾಧಿಕಾರವು, ನೋಂದಣಿ ಸಮಯದಲ್ಲಿ ಹಾಗೆ ವಿಧಿಸಿದ ಉಪಕರವನ್ನು ಸಂಗ್ರಹಿಸತಕ್ಕದ್ದು ಮತ್ತು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಅದನ್ನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ನಿಧಿಗೆ ಇರಸಾಲು (remit) ಮಾಡತಕ್ಕದ್ದು.

**14. ನಿಧಿಯನ್ನು ನಿಹಿತಗೊಳಿಸುವುದು ಮತ್ತು ನಿರ್ವಹಿಸುವುದು.–** (1) ನಿಧಿಯನ್ನು ಪ್ರಾಧಿಕಾರದಲ್ಲಿ ನಿಹಿತಗೊಳಿಸತಕ್ಕದ್ದು ಮತ್ತು ಅದನ್ನು ಪ್ರಾಧಿಕಾರವು ನಿರ್ವಹಿಸತಕ್ಕದ್ದು.

(2) ಪ್ರಾಧಿಕಾರವು, ನಿಯಮಿಸಬಹುದಾದ ಅಂಥ ರೀತಿಯಲ್ಲಿ ಅದರಲ್ಲಿ ನಿಹಿತಗೊಳಿಸಿದ ನಿಧಿಯನ್ನು ನಿರ್ವಹಿಸತಕ್ಕದ್ದು.

(3) ನಿಧಿಯ ಭಾಗವಾಗಿರುವ ಎಲ್ಲಾ ಮೊತ್ತವನ್ನು, ಪ್ರಾಧಿಕಾರವು ನಿರ್ಧರಿಸಬಹುದಾದಂತೆ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಠೇವಣಿ ಇಡತಕ್ಕದ್ದು ಮತ್ತು ಖಾತೆಯನ್ನು ಪ್ರಾಧಿಕಾರವು ನಿರ್ಧರಿಸಬಹುದಾದಂಥ ರೀತಿಯಲ್ಲಿ ರಸ್ತೆ ಸುರಕ್ಷತಾ ಆಯುಕ್ತನು ಮತ್ತು ಅಪರ ಆಯುಕ್ತನು ಜಂಟಿಯಾಗಿ ನಿರ್ವಹಿಸತಕ್ಕದ್ದು.

**15. ನಿಧಿಯ ಬಳಕೆ.–** ನಿಧಿಯನ್ನು ಈ ಮುಂದಿನ ಎಲ್ಲ ಅಥವಾ ಯಾವುದಾದರೂ ಒಂದು ಉದ್ದೇಶಗಳಿಗೆ ಉಪಯೋಗಿಸತಕ್ಕದ್ದು, ಎಂದರೆ:–

(ಎ) ರಸ್ತೆ ಸುರಕ್ಷತಾ ಕಾರ್ಯಕ್ರಮಗಳು;

(ಬಿ) ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಜಾಗೃತಿ ಕಾರ್ಯಕ್ರಮಗಳು;

(ಸಿ) ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಸಲಕರಣೆಗಳ ಖರೀದಿ;

(ಡಿ) ಪರಿಯೋಜನೆಗಳು, ತರಬೇತಿಗಳನ್ನು ಕುರಿತ ಅನುಮೋದಿತ ಅಧ್ಯಯನಗಳಿಗೆ ನಿಧಿ ಒದಗಿಸಲು;

(ಇ) ದೈಹಿಕ ಅಥವಾ ಮಾನಸಿಕ ಆಘಾತ-ಕಾಳಜಿ (trauma-care) ಕಾರ್ಯಕ್ರಮಗಳು ಮತ್ತು ತತ್ಸಂಬಂಧಿ ಕಾರ್ಯಚಟುವಟಿಕೆಗಳು;

(ಎಫ್) ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚಗಳು;

(ಜಿ) ಪ್ರಾಧಿಕಾರವು ಸೂಕ್ತವೆಂದು ಭಾವಿಸಬಹುದಾದಂಥ ರಸ್ತೆ ಸುರಕ್ಷತೆಗೆ ಸಂಬಂಧಿಸಿದ ವಿಷಯಗಳ ಮೇಲಿನ ವೆಚ್ಚ; ಮತ್ತು

(ಹೆಚ್) ನಿಯಮಿಸಬಹುದಾದ ಯಾವುದೇ ಇತರ ಉದ್ದೇಶ.

**16. ಅಪಘಾತಗಳ ಕಾರಣಗಳನ್ನು ನಿವಾರಿಸಲು ಆದೇಶಿಸುವ ಅಧಿಕಾರ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಯಾವೊಬ್ಬ ವ್ಯಕ್ತಿಯ ಮೂಲಕ ಅಥವಾ ಅನ್ಯಥಾ ರೀತಿಯಲ್ಲಿ ಸಲ್ಲಿಸಿದ ದೂರು ಅಥವಾ ವರದಿಯ ಆಧಾರದ ಮೇಲೆ ಪ್ರಾಧಿಕಾರಕ್ಕೆ,–

(ಎ) ಸಾರ್ವಜನಿಕ ರಸ್ತೆಯಲ್ಲಿ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಕೃತ್ಯವು; ಅಥವಾ

(ಬಿ) ಯಾವುದೇ ಮನ್ನಣೆ ಪಡೆದ ಆಡಳಿತಾತ್ಮಕ ಪ್ರಾಧಿಕಾರದ ಅನುಮೋದನೆ ಇಲ್ಲದೆ ಸಾರ್ವಜನಿಕ ರಸ್ತೆಯಲ್ಲಿ ಕಮಾನುಗಳು, ಬ್ಯಾನರ್‌ಗಳು, ಬಟ್ಟೆ ಮೇಲ್ಛಾವಣಿಗಳು, ಟೆಂಟುಗಳು, ಪೆಂಡಾಲುಗಳು, ಕಂಬಗಳು, ವೇದಿಕೆಗಳು, ಭಾಷಣ ವೇದಿಕೆಗಳು, ಪ್ರತಿಮೆಗಳು, ಸ್ಮಾರಕಗಳು ಮತ್ತು ಅಂತಹುವೇ ಇತರ ನಿರ್ಮಿತಿಗಳನ್ನು ಒಳಗೊಂಡಂತೆ ಯಾವುದೇ ವಾಹನ, ಪ್ರಾಣಿ, ನಿರ್ಮಿತಿಯನ್ನು ಇರಿಸಿರುವುದು ಅಥವಾ ನಿಲ್ಲಿಸಿರುವುದು; ಅಥವಾ

(ಸಿ) ಸಾರ್ವಜನಿಕ ರಸ್ತೆಯಲ್ಲಿ ಪ್ರಾಣಿಗಳ ಅಥವಾ ವಾಹನಗಳ ಚಲನವಲನವು; ಅಥವಾ

(ಡಿ) ಸಾರ್ವಜನಿಕ ರಸ್ತೆಯ ಸಮೀಪದಲ್ಲಿರುವ ಯಾವುದೇ ಮರ, ನಿರ್ಮಿತಿ ಅಥವಾ ನಿರ್ಮಿಸಿದ ಕಟ್ಟಡವು; ಅಥವಾ

(ಇ) ಸಾರ್ವಜನಿಕ ರಸ್ತೆಯ ಸಮೀಪದಲ್ಲಿರುವ ಯಾವುದೇ ಕಟ್ಟಡದ ಅಥವಾ ಆವರಣದ ಪ್ರವೇಶ ಮತ್ತು ನಿರ್ಗಮನವು,

– ಅಪಘಾತಗಳನ್ನುಂಟು ಮಾಡುವ ಅಥವಾ ಸಂಚಾರದ ಮುಕ್ತ ಹರಿವಿಗೆ ಅಡಚಣೆಯನ್ನುಂಟು ಮಾಡುವ ಅಥವಾ ಯಾವುದೇ ವಾಹನ ಚಾಲಕನ ಗಮನವನ್ನು ಭಂಗಗೊಳಿಸುವ ಅಥವಾ ದೃಷ್ಟಿಗೆ ಅಡಚಣೆಯುಂಟು ಮಾಡುವ ರೀತಿಯಲ್ಲಿದೆ ಎಂದು ಮನವರಿಕೆಯಾದಲ್ಲಿ, ಕರ್ನಾಟಕ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತರು, ಅದರ ಕಾರಣಗಳನ್ನು ದಾಖಲಿಸಿದ ನಂತರ, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಸಂಬಂಧಪಟ್ಟ ವ್ಯಕ್ತಿಗೆ ತಾನು ಅವಶ್ಯವೆಂದು ಪರಿಗಣಿಸಬಹುದಾದಂತೆ ಎರಡು ತಿಂಗಳ ಒಳಗಾಗಿ ಅಂಥ ಕ್ರಮಗಳನ್ನು ತೆಗೆದುಕೊಳ್ಳಲು ನಿರ್ದೇಶಿಸಬಹುದು ಮತ್ತು ಅಂಥ ವ್ಯಕ್ತಿಯು ಪ್ರಾಧಿಕಾರವು ನಿರ್ದಿಷ್ಟಪಡಿಸಬಹುದಾದ ಅಂಥ ಸಮಯದೊಳಗೆ ನಿರ್ದೇಶನವನ್ನು ಪಾಲಿಸಲು ಬದ್ಧನಾಗಿರತಕ್ಕದ್ದು.

(2) (1)ನೇ ಉಪಪಕ್ರಕರಣದಲ್ಲಿ ಏನೇ ಇದ್ದರೂ, ತುರ್ತು ಸಂದರ್ಭದಲ್ಲಿ, ಕರ್ನಾಟಕ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತನು, ಅಪಘಾತವನ್ನು ಅಥವಾ ಸಂದರ್ಭಾನುಸಾರ ಅಡಚಣೆಯನ್ನು ತಡೆಯಲು ಅವಶ್ಯವಿರಬಹುದಾದ ಅಂಥ ಕ್ರಮವನ್ನು ತೆಗೆದುಕೊಳ್ಳಬಹುದು ಮತ್ತು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಅದಕ್ಕೆ ಜವಾಬ್ದಾರನಾದ ವ್ಯಕ್ತಿಯಿಂದ ಅದರ ವೆಚ್ಚವನ್ನು ವಸೂಲು ಮಾಡಬಹುದು.

**17. ಕಾಮಗಾರಿಗಳನ್ನು ಕೈಗೊಳ್ಳಲು ಆದೇಶಿಸುವ ಅಧಿಕಾರ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಸಾರ್ವಜನಿಕ ರಸ್ತೆಯಲ್ಲಿ ಸುರಕ್ಷತೆಯನ್ನು ಕಾಪಾಡಲು ಅಂಥ ರಸ್ತೆಯಲ್ಲಿ ಯಾವುದೇ ಕಾಮಗಾರಿ ಅಥವಾ ಸುಧಾರಣೆಯನ್ನು ಕೈಗೊಳ್ಳುವುದು ಅವಶ್ಯವೆಂದು ಪ್ರಾಧಿಕಾರವು ಪರಿಗಣಿಸಿದರೆ, ಹಾಗೆ ಆದೇಶಿಸುವುದು ಪ್ರಾಧಿಕಾರಕ್ಕೆ ಕಾನೂನುಸಮ್ಮತವಾಗಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದಿಷ್ಟಪಡಿಸಬಹುದಾದ ಅಂಥ ಕಾಮಗಾರಿಗಳನ್ನು ಅಥವಾ ಸುಧಾರಣೆಗಳನ್ನು ಅಂಥ

ಸಮಯದೊಳಗೆ ಕೈಗೊಳ್ಳಲು ಪ್ರತಿಯೊಂದು ಸಂಬಂಧಪಟ್ಟ ರಾಜ್ಯ ಸರ್ಕಾರಿ ಇಲಾಖೆ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಇತರ ಪ್ರಾಧಿಕಾರವು, ಬದ್ಧವಾಗಿರತಕ್ಕದ್ದು:

ಪರಂತು, ಕರ್ನಾಟಕ ಹೆದ್ದಾರಿ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 44) ಅಡಿಯಲ್ಲಿ ಗೊತ್ತುಪಡಿಸಿದ ಸಂಬಂಧಪಟ್ಟ ಕ್ಷೇತ್ರದ ಹೆದ್ದಾರಿ ಪ್ರಾಧಿಕಾರದೊಂದಿಗೆ ಪೂರ್ವ ಸಮಾಲೋಚನೆ ನಡೆಸಿದ ಹೊರತು, ಈ ಉಪಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು, ಸದರಿ ಅಧಿನಿಯಮದ ಅಡಿಯಲ್ಲಿ ಹಾಗೆಂದು ಘೋಷಿತವಾದ ಯಾವುದೇ ಹೆದ್ದಾರಿಯ ಸಂಬಂಧದಲ್ಲಿ ಹೊರಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶಗಳನ್ನು ಜಾರಿಗೆ ತರುವಲ್ಲಿ ಪ್ರಾಧಿಕಾರಕ್ಕೆ ನೆರವು ನೀಡುವುದು ರಾಜ್ಯ ಸರ್ಕಾರದ, ಸ್ಥಳೀಯ ಪ್ರಾಧಿಕಾರದ ಅಥವಾ ಯಾವುದೇ ಇತರ ಪ್ರಾಧಿಕಾರದ ಪ್ರತಿಯೊಬ್ಬ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು.

**18. ವೆಚ್ಚವನ್ನು ವಸೂಲಿ ಮಾಡುವ ಅಧಿಕಾರ.–** ಯಾವೊಬ್ಬ ವ್ಯಕ್ತಿಯು, 13ನೇ ಪ್ರಕರಣದ ಅಡಿಯಲ್ಲಿ ಜಾರಿ ಮಾಡಲಾದ ಲಿಖಿತ ಆದೇಶವನ್ನು ತಿರಸ್ಕರಿಸಿದರೆ ಅಥವಾ ಆದೇಶವನ್ನು ಪಾಲಿಸಲು ವಿಫಲನಾದರೆ, ಪ್ರಾಧಿಕಾರವು ಅಪಾಯವನ್ನು ತಡೆಯಲು ಮತ್ತು ಸಾರ್ವಜನಿಕರ ಸುರಕ್ಷತೆಯನ್ನು ಸುನಿಶ್ಚಿತಗೊಳಿಸಲು ಅಂಥ ಕ್ರಮವನ್ನು ತೆಗೆದುಕೊಳ್ಳಬಹುದು ಹಾಗೂ ಅಂಥ ವ್ಯಕ್ತಿಯಿಂದ ಅದರ ನ್ಯಾಯಯುತ ಬಡ್ಡಿ ಸಹಿತ ವೆಚ್ಚವನ್ನು ವಸೂಲು ಮಾಡಿಕೊಳ್ಳಬಹುದು.

**19. ಭೂ ಕಂದಾಯ ಬಾಕಿ ಎಂಬಂತೆ ವಸೂಲು ಮಾಡಬಹುದಾದ ಮೊತ್ತಗಳು.–** ಈ ಅಧಿನಿಯಮದ ಅಡಿಯಲ್ಲಿ ಪ್ರಾಧಿಕಾರಕ್ಕೆ ಬರಬೇಕಾದ ಯಾವುದೇ ಮೊತ್ತವನ್ನು, ವಸೂಲಿಯ ಯಾವುದೇ ಇತರ ವಿಧಾನಕ್ಕೆ ಬಾಧಕವಾಗದಂತೆ, ಬಾಕಿ ಇರುವ ಭೂ ಕಂದಾಯದ ಬಾಕಿ ಎಂಬಂತಹುದೇ ರೀತಿಯಲ್ಲಿ ವಸೂಲು ಮಾಡಬಹುದು.

**20. ಪ್ರತ್ಯಾಯೋಜನೆ.–** ಪ್ರಾಧಿಕಾರವು, ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿರ್ಬಂಧಗಳಿಗೆ ಒಳಪಟ್ಟು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ರಸ್ತೆ ಸುರಕ್ಷತಾ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ, ತಾನು ಅವಶ್ಯವೆಂದು ಪರಿಗಣಿಸಬಹುದಾದ ಅಂಥ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ರಸ್ತೆ ಸುರಕ್ಷತಾ ಆಯುಕ್ತನಿಗೆ, ರಸ್ತೆ ಸುರಕ್ಷತಾ ಅಪರ ಆಯುಕ್ತನಿಗೆ ಅಥವಾ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಗೆ ಪ್ರತ್ಯಾಯೋಜಿಸಬಹುದು.

**21. ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ.–** ರಾಜ್ಯದಲ್ಲಿ ಮೋಟಾರು ವಾಹನಗಳ ಅಧಿನಿಯಮ, 1988ರ (1988ರ ಕೇಂದ್ರ ಅಧಿನಿಯಮ 59) 215ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಈಗಾಗಲೇ ರಚನೆಗೊಂಡಿರುವ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಗಳು, ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**22. ಸಿಬ್ಬಂದಿ.–** (1) ಪ್ರಾಧಿಕಾರವು, ರಾಜ್ಯ ಸರ್ಕಾರದ ಪೂರ್ವಾನುಮೋದನೆಯಂದಿಗೆ, ಈ ಅಧಿನಿಯಮದ ಅಡಿಯಲ್ಲಿನ ಅದರ ಪ್ರಕಾರ್ಯಗಳ ನಿರ್ವಹಣೆಗೆ ಅದು ಅವಶ್ಯವೆಂದು ಭಾವಿಸಬಹುದಾದ ಅಂಥ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನೇಮಕ ಮಾಡಬಹುದು.

(2) ಸಿಬ್ಬಂದಿಯ ಪದನಾಮ, ನೇಮಕಾತಿ ವಿಧಾನ ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**23. ವೆಚ್ಚಗಳು.–** ಸಿಬ್ಬಂದಿ ಮತ್ತು ಇತರ ನೌಕರರ ವೇತನ ಮತ್ತು ಭತ್ಯೆಗಳನ್ನು ಒಳಗೊಂಡು ನಿಧಿಯ ನಿರ್ವಹಣೆಯ ಎಲ್ಲಾ ವೆಚ್ಚಗಳನ್ನು ನಿಧಿಯಿಂದ ಭರಿಸತಕ್ಕದ್ದು.

**24. ಲೆಕ್ಕಪತ್ರಗಳು.–** ನಿಧಿಯ ಲೆಕ್ಕಪತ್ರಗಳನ್ನು ನಿಯಮಿಸಬಹುದಾದ ಅಂಥ ರೀತಿಯಲ್ಲಿ ರಸ್ತೆ ಸುರಕ್ಷತಾ ಆಯುಕ್ತರು ನಿರ್ವಹಿಸತಕ್ಕದ್ದು.

**25. ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯು ವರದಿಗಳು, ಇತ್ಯಾದಿಯನ್ನು ಸಲ್ಲಿಸುವುದು.–** ಪ್ರತಿಯೊಂದು ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯು, ಅಂಥ ವರದಿಗಳನ್ನು ಮತ್ತು ವಿವರಗಳನ್ನು ಹಾಗೂ ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ಮಾಹಿತಿಯನ್ನು ರಸ್ತೆ ಸುರಕ್ಷತಾ ಆಯುಕ್ತರಿಗೆ ಒದಗಿಸತಕ್ಕದ್ದು ಮತ್ತು ರಸ್ತೆ ಸುರಕ್ಷತಾ ಆಯುಕ್ತರು, ವಾರ್ಷಿಕವಾಗಿ, ಪ್ರಾಧಿಕಾರಕ್ಕೆ ಕ್ರೋಢೀಕೃತ ವರದಿಯನ್ನು ಸಲ್ಲಿಸತಕ್ಕದ್ದು.

**26. ವಾರ್ಷಿಕ ವರದಿ.–** (1) ಪ್ರಾಧಿಕಾರವು, ಪ್ರತಿಯೊಂದು ಹಣಕಾಸು ವರ್ಷಾವಧಿಗಾಗಿ, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ಅವಧಿಯೊಳಗೆ, ಹಿಂದಿನ ವರ್ಷದ ತನ್ನ ಕಾರ್ಯಚಟುವಟಿಕೆಗಳ ಸಂಪೂರ್ಣ ಲೆಕ್ಕವನ್ನು ನೀಡುವ ಒಂದು ವಾರ್ಷಿಕ ವರದಿಯನ್ನು ಸಿದ್ಧಪಡಿಸಕ್ಕದ್ದು ಮತ್ತು ಅಂಥ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ರಾಜ್ಯ ಸರ್ಕಾರವು, ಅದನ್ನು ಸ್ವೀಕರಿಸಿದ ನಂತರ, ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಮುಂದೆ ಅಂಥ ಪ್ರತಿಯೊಂದು ವರದಿಯನ್ನು ಮಂಡಿಸುವಂತೆ ಮಾಡತಕ್ಕದ್ದು.

**27. ಲೆಕ್ಕಪರಿಶೋಧನೆ.–** (1) ಪ್ರಾಧಿಕಾರದ ಲೆಕ್ಕಪತ್ರಗಳನ್ನು ಮಹಾಲೇಖಪಾಲರು ಲೆಕ್ಕಪರಿಶೋಧನೆ ಮಾಡತಕ್ಕದ್ದು.

(2) ಪ್ರಾಧಿಕಾರವು, ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಅಧಿಕಾರಿಗಳ ಮೂಲಕ ಪ್ರತಿ ವರ್ಷ ಲೆಕ್ಕಪತ್ರಗಳ ಆಂತರಿಕ ಲೆಕ್ಕಪರಿಶೋಧನೆಯನ್ನು ನಡೆಸತಕ್ಕದ್ದು.

(3) ಲೆಕ್ಕಪರಿಶೋಧಕರು ಪ್ರಮಾಣೀಕರಿಸಿದ ಪ್ರಾಧಿಕಾರದ ಲೆಕ್ಕಪತ್ರಗಳನ್ನು, ಅವುಗಳ ಮೇಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಅದನ್ನು ವಿಧಾನಸಭೆಯ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

(4) ಪ್ರಾಧಿಕಾರವು, ವರದಿಯ ಆಧಾರದ ಮೇಲೆ ರಾಜ್ಯ ಸರ್ಕಾರವು ಆದೇಶಿಸಬಹುದಾದ ಅಂಥ ಸರಿಪಡಿಕೆ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**28. ಪ್ರಾಧಿಕಾರದ ಆದೇಶವನ್ನು ಪಾಲಿಸಲು ವಿಫಲವಾದುದಕ್ಕೆ ದಂಡನೆ.–** (1) ಈ ಅಧಿನಿಯಮದ ಅಡಿಯಲ್ಲಿನ ಪ್ರಾಧಿಕಾರದ ಅಥವಾ ರಸ್ತೆ ಸುರಕ್ಷತಾ ಆಯುಕ್ತನ ಅಥವಾ ಯಾವುದೇ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಯಾವುದೇ ಆದೇಶವನ್ನು ಪಾಲಿಸಲು ನಿರಾಕರಿಸುವ ಅಥವಾ ವಿಫಲನಾಗುವ ಯಾವೊಬ್ಬ ವ್ಯಕ್ತಿಯು, ಆರು ತಿಂಗಳುಗಳ ಅವಧಿಯ ಕಾರಾವಾಸದಿಂದ ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಮುಂದುವರೆದ ಅಪರಾಧದ ಸಂದರ್ಭದಲ್ಲಿ, ಅಪರಾಧವು ಮುಂದುವರಿಯುವವರೆಗೆ ಪ್ರತಿ ದಿನಕ್ಕೆ ಒಂದು ಸಾವಿರ ರೂಪಾಯಿಗಳ ಜುಲ್ಮಾನೆಯನ್ನು ವಿಧಿಸತಕ್ಕದ್ದು.

**29. ಪ್ರಾಧಿಕಾರಕ್ಕೆ ಅಡಚಣೆ ಉಂಟುಮಾಡಿದ್ದಕ್ಕಾಗಿ ದಂಡನೆ.–** ಪ್ರಾಧಿಕಾರ ಅಥವಾ ರಸ್ತೆ ಸುರಕ್ಷತಾ ಆಯುಕ್ತ, ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಅಥವಾ ಪ್ರಾಧಿಕಾರದ ಅಥವಾ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಯಾವೊಬ್ಬ ಅಧಿಕಾರಿ ಅಥವಾ ಈ ಅಧಿನಿಯಮದ ಅಡಿಯಲ್ಲಿನ ಪ್ರಕಾರ್ಯಗಳನ್ನು ನಿರ್ವಹಿಸಲು ಅವುಗಳಿಂದ ನಿಯೋಜಿತನಾದ ಅಥವಾ ತೊಡಗಿದ ಯಾವೊಬ್ಬ ವ್ಯಕ್ತಿಗೆ ಅಡಚಣೆ ಒಡ್ಡುವ ಯಾರೇ ಆಗಲಿ, ಗರಿಷ್ಠ ಮೂರು ವರ್ಷಗಳ ಅವಧಿಯ ಕಾರಾವಾಸದಿಂದ ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾಗಿರುವ ಜುಲ್ಮಾನೆಯಿಂದ ಅಥವಾ ಅವೆರಡರಿಂದ ದಂಡಿತನಾಗತಕ್ಕದ್ದು.

**30. ಅಪರಾಧಗಳ ರಾಜಿ.–** 28ನೇ ಮತ್ತು 29ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವನ್ನು, ಅಭಿಯೋಜನೆಯನ್ನು ಪ್ರಾರಂಭಿಸುವ ಮೊದಲಾಗಲಿ ಅಥವಾ ನಂತರವಾಗಲಿ, ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆಯ ಮೂಲಕ, ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದ ಅಂಥ ಅಧಿಕಾರಿಗಳು ಅಥವಾ ಪ್ರಾಧಿಕಾರಗಳು ಮತ್ತು ಅಂಥ ಮೊತ್ತಕ್ಕೆ ರಾಜಿ ಮಾಡಿಸಬಹುದು.

**31. ಕಂಪನಿಗಳಿಂದ ಅಪರಾಧಗಳು.-** ಈ ಅಧಿನಿಯಮದ ಅಡಿಯಲ್ಲಿ ದಂಡಿಸಬಹುದಾದ ಅಪರಾಧವನ್ನು ಯಾವುದೇ ಸಮಯದಲ್ಲಿ ಒಂದು ಕಂಪನಿಯು ಮಾಡಿದ್ದರೆ, ಅಪರಾಧವು ನಡೆದ ಕಾಲದಲ್ಲಿ, ಆ ಕಂಪನಿಯ ವ್ಯವಹರಣೆಗಳ ನಿರ್ವಹಣೆಗಾಗಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಆ ಅಪರಾಧದ ಹೊಣೆಗಾರರೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ತನ್ನ ವಿರುದ್ಧದ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಅಧಿನಿಯಮದ ಅಡಿಯಲ್ಲಿ ದಂಡಿಸಬಹುದಾದ ಒಂದು ಅಪರಾಧವನ್ನು ಕಂಪನಿಯು ಮಾಡಿದ್ದರೆ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ಕಡೆಯಿಂದಾದ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಅಪರಾಧವು ಸಂಭವಿಸಿತೆಂದು ಹೇಳಬಹುದಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ದೋಷಿಯೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ತನ್ನ ವಿರುದ್ಧದ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) 'ಕಂಪೆನಿ' ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಒಂದು ಫರ್ಮ್ ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ;

(ಬಿ) 'ನಿರ್ದೇಶಕ' ಎಂದರೆ, ಒಂದು ಫರ್ಮ್‌ನ ಸಂಬಂಧದಲ್ಲಿ ಫರ್ಮ್‌ನಲ್ಲಿಯ ಪಾಲುದಾರ.

**32. ಅಪೀಲುಗಳು.-** (1) ಈ ಅಧಿನಿಯಮದ ಅಡಿಯಲ್ಲಿ ಪ್ರಾಧಿಕಾರದ ಅಥವಾ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಯಾವೊಬ್ಬ ಅಧಿಕಾರಿಯು ಹೊರಡಿಸಿದ ಯಾವುದೇ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ನಿಯಮಿಸಬಹುದಾದ ಅಂಥ ಸಮಯದೊಳಗೆ, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ

ಮೇಲ್ಮನವಿ ನ್ಯಾಯಾಧಿಕರಣಕ್ಕೆ ಅಪೀಲನ್ನು ಸಲ್ಲಿಸಬಹುದು. ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಜಿಲ್ಲಾ ನ್ಯಾಯಾಧೀಶರ ದರ್ಜೆಗೆ ಕಡಿಮೆಯಿಲ್ಲದ ಹುದ್ದೆಗಳನ್ನು ಹೊಂದಿರುವ ಅಥವಾ ಅಂತಹುದೇ ಹುದ್ದೆಯನ್ನು ಹೊಂದಿದ್ದ ಒಬ್ಬ ನ್ಯಾಯಿಕ ಅಧಿಕಾರಿಯನ್ನು ಒಳಗೊಂಡ, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಮೇಲ್ಮನವಿ ನ್ಯಾಯಾಧಿಕರಣವನ್ನು ರಚಿಸತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಸಲ್ಲಿಸಲಾದ ಅಂಥ ಪ್ರತಿಯೊಂದು ಅಪೀಲು ನಿಯಮಿಸಬಹುದಾದ ಅಂಥ ಶುಲ್ಕವನ್ನು ಹೊಂದಿರತಕ್ಕದ್ದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ಅಪೀಲನ್ನು ಸ್ವೀಕರಿಸಿದ ತರುವಾಯ, ಅಪೀಲು ನ್ಯಾಯಾಧಿಕರಣವು, ಅಹವಾಲನ್ನು ಹೇಳಿಕೊಳ್ಳಲು ಅಪೀಲುದಾರನಿಗೆ ಅವಕಾಶವನ್ನು ನೀಡಿದ ತರುವಾಯ ಸಾಧ್ಯವಾದಷ್ಟು ಬೇಗನೇ ಅಪೀಲನ್ನು ವಿಲೆ ಮಾಡತಕ್ಕದ್ದು.

**33. ಪ್ರಾಧಿಕಾರದ ಸದಸ್ಯರು ಮತ್ತು ಸಿಬ್ಬಂದಿಗಳು ಲೋಕನೌಕರರಾಗಿರುವುದು.–** ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ಯಾವುವೇ ನಿಯಮಗಳ ಉಪಬಂಧಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯನಿರ್ವಹಿಸುತ್ತಿದ್ದಾರೆಂದು ಅಭಿಪ್ರಾಯವನ್ನು ಹೊಂದಿದ್ದಾಗ, ಪ್ರಾಧಿಕಾರದ ಎಲ್ಲಾ ಸದಸ್ಯರು ಮತ್ತು ನೌಕರರನ್ನು ಭಾರತೀಯ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರರೆಂದು ಭಾವಿಸತಕ್ಕದ್ದು.

**34. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಅಥವಾ ಅದರ ಅನುಸರಣೆಯಲ್ಲಿ, ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ, ರಾಜ್ಯ ಸರ್ಕಾರ ಅಥವಾ ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿ ಅಥವಾ ಪ್ರಾಧಿಕಾರದ ಯಾವೊಬ್ಬ ಸದಸ್ಯ ಅಥವಾ ಇತರ ನೌಕರರ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**35. ಅಪರಾಧಗಳ ಸಂಜ್ಞೇಯತೆ.–** ರಸ್ತೆ ಸುರಕ್ಷತಾ ಆಯುಕ್ತನ ಪೂರ್ವಾನುಮತಿಯೊಂದಿಗೆ ಸಲ್ಲಿಸಲಾದ, ಅಂಥ ಅಪರಾಧವನ್ನು ಉಂಟುಮಾಡುವ ಅಂಶಗಳನ್ನು ಒಳಗೊಂಡ ಲಿಖಿತದಲ್ಲಿ ವರದಿಯನ್ನು ಮಾಡಿದ ಹೊರತು, ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧವನ್ನು ಯಾವುದೇ ನ್ಯಾಯಾಲಯವು ಸಂಜ್ಞೇಯತೆಗೆ ತೆಗೆದುಕೊಳ್ಳತಕ್ಕದ್ದಲ್ಲ.

**36. ಸಿವಿಲ್ ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯ ಪ್ರತಿಷೇಧ.–** ರಾಜ್ಯ ಸರ್ಕಾರ ಅಥವಾ ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರದ ಅಥವಾ ಪ್ರಾಧಿಕಾರದ ಮೂಲಕ ಅಧಿಕೃತನಾದ ಯಾವೊಬ್ಬ ಅಧಿಕಾರಿಯು ತೀರ್ಮಾನಿಸಬೇಕೆಂದು, ನಿರ್ಧರಿಸಬೇಕೆಂದು ಅಥವಾ ವ್ಯವಹರಿಸಬೇಕೆಂದು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಗತ್ಯಪಡಿಸಲಾದ ಯಾವುದೇ ವಿಷಯವನ್ನು ನಿರ್ಧರಿಸಲು ಅಥವಾ ಯಾವುದೇ ಪ್ರಶ್ನೆಯನ್ನು ತೀರ್ಮಾನಿಸಲು, ನಿರ್ಧರಿಸಲು ಅಥವಾ ಅದರೊಂದಿಗೆ ವ್ಯವಹರಿಸಲು ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

**37. ಅಧಿನಿಯಮವು ಕರ್ನಾಟಕ ಹೆದ್ದಾರಿ ಅಧಿನಿಯಮ 1964ನ್ನು ಅಲ್ಪೀಕರಣಗೊಳಿಸುವಂತಿಲ್ಲ.–** ಈ ಅಧಿನಿಯಮದ ಉಪಬಂಧಗಳು, ಕರ್ನಾಟಕ ಹೆದ್ದಾರಿ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 44) ಉಪಬಂಧಗಳಿಗೆ ಪೂರಕವಾಗಿರತಕ್ಕದ್ದು ಆದರೆ ಅಲ್ಪೀಕರಣಗೊಳಿಸತಕ್ಕದ್ದಲ್ಲ.

**38. ನಿರ್ದೇಶನಗಳನ್ನು ನೀಡಲು ಅಧಿಕಾರ.–** ರಾಜ್ಯ ಸರ್ಕಾರವು, ಪ್ರಾಧಿಕಾರದ ಕಾರ್ಯನೀತಿಯ ವಿಷಯಗಳಲ್ಲಿ ಪ್ರಾಧಿಕಾರಕ್ಕೆ ನಿರ್ದೇಶನಗಳನ್ನು ನೀಡಬಹುದು ಮತ್ತು ಅಂಥ ನಿರ್ದೇಶನಗಳನ್ನು ಜಾರಿಗೊಳಿಸುವುದಕ್ಕೆ ಪ್ರಾಧಿಕಾರವು ಬದ್ಧವಾಗಿರತಕ್ಕದ್ದು.

**39. ನಿಯಮಗಳನ್ನು ರಚಿಸಲು ಅಧಿಕಾರ.–** (1) ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆಯ ತರುವಾಯ, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ, ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಪ್ರಾಧಿಕಾರವು ನಿರ್ವಹಿಸಬೇಕಾದ ಪ್ರಕಾರ್ಯಗಳು;

(ಬಿ) ಉಪಕರವನ್ನು ಸಂಗ್ರಹಿಸಬೇಕಾದ ಮತ್ತು ನಿಧಿಗೆ ಜಮೆ ಮಾಡಬೇಕಾದ ವಿಧಾನ;

(ಸಿ) ನಿಧಿಗಳನ್ನು ಬಳಸತಕ್ಕ ಉದ್ದೇಶಗಳು;

(ಡಿ) ಪ್ರಾಧಿಕಾರದ ಅಧಿಕಾರಿಗಳು ಮತ್ತು ಸಿಬ್ಬಂದಿಯ ಪದನಾಮ, ನೇಮಕಾತಿ ವಿಧಾನ ಮತ್ತು ಇತರ ಸೇವಾ ಷರತ್ತುಗಳು;

(ಇ) 24ನೇ ಪ್ರಕರಣದ ಅಡಿಯಲ್ಲಿ ರಸ್ತೆ ಸುರಕ್ಷತಾ ಆಯುಕ್ತನು ನಿಧಿಯ ಲೆಕ್ಕಪತ್ರಗಳನ್ನು ನಿರ್ವಹಿಸಬೇಕಾದ ವಿಧಾನ;

(ಎಫ್) 26ನೇ ಪ್ರಕರಣದ ಅಡಿಯಲ್ಲಿ ವಾರ್ಷಿಕ ವರದಿಯನ್ನು ಸಿದ್ದಪಡಿಸಬೇಕಾದ ನಮೂನೆ ಮತ್ತು ಸಮಯ;

(ಜಿ) 32ನೇ ಪ್ರಕರಣದ ಅಡಿಯಲ್ಲಿ ಅಪೀಲನ್ನು ದಾಖಲುಮಾಡುವ ಸಮಯ ಹಾಗೂ ಶುಲ್ಕ; ಮತ್ತು

(ಎಚ್) ಅಗತ್ಯವಾದಂತೆ ಅಥವಾ ನಿಯಮಿಸಬಹುದಾದಂತೆ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಹದಿನಾಲ್ಕು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳೂ ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಉಭಯ ಸದನಗಳೂ ಒಪ್ಪಿದರೆ, ಆ ನಿಯಮದ ಆ ಮಾರ್ಪಾಟು ಅಥವಾ ರದ್ದತಿಯು ಅಧಿಸೂಚಿಸಿದ ದಿನಾಂಕದಿಂದ ಅಂಥ

ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**40. ವಿನಿಯಮಗಳು.–** ಪ್ರಾಧಿಕಾರದ ಅಥವಾ ಸಂದರ್ಭಾನುಸಾರವಾಗಿ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಮುಂದೆ ಬರುವ ಎಲ್ಲ ಸಭೆಗಳಿಗಾಗಿ ಮತ್ತು ವಿಷಯಗಳ ವಿಲೆಗಾಗಿ, ಪ್ರಾಧಿಕಾರ ಮತ್ತು ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಮೂಲಕ ಅಳವಡಿಸಿಕೊಳ್ಳಬೇಕಾದ ಕಾರ್ಯವಿಧಾನದ ಸಂಬಂಧದಲ್ಲಿ ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಪ್ರಾಧಿಕಾರವು ವಿನಿಯಮಗಳನ್ನು ರಚಿಸಬಹುದು.

**41. ತೊಂದರೆಗಳ ನಿವಾರಣೆ.–** (1) ಈ ಅಧಿನಿಯಮದ ಉಪಬಂಧಗಳಿಗೆ ಪರಿಣಾಮ ನೀಡುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದಲ್ಲಿ, ರಾಜ್ಯ ಸರ್ಕಾರವು, ಸಂದರ್ಭವು ಅಗತ್ಯಪಡಿಸಬಹುದಾದಂತೆ, ಆದೇಶದ ಮೂಲಕ, ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಅದಕ್ಕೆ ಅವಶ್ಯವೆಂದು ಕಂಡುಬರುವ, ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಿಗೆ ಅಸಂಗತವಾಗದ ಯಾವುದನ್ನಾದರೂ ಮಾಡಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ತರುವಾಯ ಯಾವುದೇ ಅಂಥ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(2) ಈ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು ವಿಧಾನಮಂಡಲದ ಮುಂದೆ ಮಂಡಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

## (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಡಾ. ರಾಜಶೇಖರನ್ ಅವರು ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ.295/2012(ಪಿಐಎಲ್-ಸಿವಿಲ್)ರಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು, ರಾಷ್ಟ್ರದಲ್ಲಿ ನಡೆಯುವ ರಸ್ತೆ ಅಪಘಾತಗಳ ನಿಯಂತ್ರಣಕ್ಕೆ ಸಂಬಂಧಿಸಿದಂತೆ 22ನೇ ಏಪ್ರಿಲ್ 2014ರಂದು ಒಂದು ಐತಿಹಾಸಿಕ ತೀರ್ಪನ್ನು ನೀಡಿದೆ. ಈ ತೀರ್ಪಿನ ಅನುಸರಣೆಯಲ್ಲಿ, ಕೇಂದ್ರ ಸರ್ಕಾರವು 30ನೇ ಮೇ 2014ರಂದು, ಮಾನ್ಯ ಸರ್ವೋಚ್ಛ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರನ್ನು ಅಧ್ಯಕ್ಷರನ್ನಾಗಿ ಮತ್ತು ಇಬ್ಬರು ರಸ್ತೆ ಸುರಕ್ಷತಾ ತಜ್ಞರನ್ನು ಸದಸ್ಯರನ್ನಾಗಿ ಒಳಗೊಂಡಿರುವ ಒಂದು "ರಸ್ತೆ ಸುರಕ್ಷತಾ ಸಮಿತಿ"ಯನ್ನು ರಚಿಸಿದೆ. ಸದರಿ ಸಮಿತಿಯು, ಕರ್ನಾಟಕ ರಾಜ್ಯವನ್ನು ಒಳಗೊಂಡಂತೆ ಎಲ್ಲಾ ರಾಜ್ಯಗಳಿಗೆ ಈಗಾಗಲೇ ಅನೇಕ ನಿರ್ದೇಶನಗಳನ್ನು ನೀಡಿದ್ದು, ಸದರಿ ನಿರ್ದೇಶನಗಳನ್ನು ಅನುಷ್ಠಾನ ಮಾಡುವುದಕ್ಕಾಗಿ ನಿರ್ದೇಶನಗಳನ್ನು ನೀಡಿದೆ. ರಸ್ತೆ ಸುರಕ್ಷತಾ ಕ್ರಮಗಳನ್ನು ಅನುಷ್ಠಾನಗೊಳಿಸಲು ಮತ್ತು ರಾಜ್ಯದಲ್ಲಿ ಅದರ ಪರಿಣಾಮಗಳನ್ನು ಸುನಿಶ್ಚಿತಗೊಳಿಸುವುದು ಸರ್ಕಾರದ ಹೊಣೆಗಾರಿಕೆಯಾಗಿದೆ.

ಆದುದರಿಂದ, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರವನ್ನು ಸ್ಥಾಪಿಸಿ, ಅದಕ್ಕೆ ಶಾಸನಾತ್ಮಕ ಅಧಿಕಾರಗಳನ್ನು ನೀಡಲು ಉಪಬಂಧ ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ರಚನೆಗಾಗಿ 2017–18ನೇ ವರ್ಷದ ಆಯವ್ಯಯದಲ್ಲಿ, 5.00 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿದೆ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

| | |
|---|---|
| **ಖಂಡ: 6** | (15)ನೇ ಉಪಖಂಡವು ಪ್ರಾಧಿಕಾರವು ಚಲಾಯಿಸಬೇಕಾದ ಅಂಥ ಇತರ ಪ್ರಕಾರ್ಯಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ: 12** | (4)ನೇ ಉಪಖಂಡವು ಅಂಥ ಇತರ ನಿಧಿಯ ಮೂಲಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ: 13** | (3)ನೇ ಉಪಖಂಡವು ನೋಂದಣಿ ಪ್ರಾಧಿಕಾರವು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ನಿಧಿಗೆ ಉಪಕರವನ್ನು ಇರಸಾಲು ಮಾಡುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ: 14** | (2)ನೇ ಉಪಖಂಡವು ಪ್ರಾಧಿಕಾರವು ರಸ್ತೆ ಸುರಕ್ಷತಾ ನಿಧಿಯನ್ನು ನಿರ್ವಹಿಸಬೇಕಾದ ವಿಧಾನವನ್ನು ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ: 15** | (ಹೆಚ್) ಬಾಬುವು ರಸ್ತೆ ಸುರಕ್ಷತಾ ನಿಧಿ ಬಳಕೆಯ ಯಾವುದೇ ಇತರ ಉದ್ದೇಶದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ: 16** | (2)ನೇ ಉಪಖಂಡವು ಅಪಘಾತಕ್ಕೆ ಕಾರಣನಾದ ವ್ಯಕ್ತಿಯಿಂದ ವೆಚ್ಚವನ್ನು ವಸೂಲು ಮಾಡಬೇಕಾದ ವಿಧಾನದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ: 21** | ಜಿಲ್ಲಾ ಮತ್ತು ಸುರಕ್ಷತಾ ಸಮಿತಯು ನಿರ್ವಹಿಸಬೆಕಾದ ಪ್ರಕಾರ್ಯಗಳು ಮತ್ತು ಚಲಾಯಿಸಬೇಕಾದ ಅಧಿಕಾರಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ: 22** | (2)ನೇ ಉಪಖಂಡವು ಪ್ರಾಧಿಕಾರದ ಅಧಿಕಾರಿಗಳು ಮತ್ತು ಸಿಬ್ಬಂದಿಯ ನೇಮಕಾತಿಗಾಗಿ ಪದನಾಮ, ನೇಮಕಾತಿಯ ವಿಧಾನ ಮತ್ತು ಇತರ ಸೇವಾ ಷರತ್ತುಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

| | |
|---|---|
| **ಖಂಡ: 24** | ರಸ್ತೆ ಸುರಕ್ಷತಾ ಆಯುಕ್ತರು ನಿಧಿಯ ಲೆಕ್ಕಪತ್ರಗಳನ್ನು ನಿರ್ವಹಿಸುವ ವಿಧಾನದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ: 26** | (1)ನೇ ಉಪಖಂಡವು ಪ್ರಾಧಿಕಾರದ ವಾರ್ಷಿಕ ವರದಿಯನ್ನು ಸಿದ್ಧಪಡಿಸುವ ನಮೂನೆ ಮತ್ತು ಸಮಯದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

| | |
|---|---|
| **ಖಂಡ: 32** | (i) (1)ನೇ ಉಪಖಂಡವು ಬಾಧಿತನಾದ ವ್ಯಕ್ತಿಯು ಅಪೀಲನ್ನು ಸಲ್ಲಿಸುವ ಸಮಯದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br>(ii) (2)ನೇ ಉಪಖಂಡವು ಬಾಧಿತನಾದ ವ್ಯಕ್ತಿಯು ಅಪೀಲಿನೊಂದಿಗೆ ಸಲ್ಲಿಸುವ ಶುಲ್ಕದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ: 39** | ಪೂರ್ವಪ್ರಕಟಣೆಯ ತರುವಾಯ ಈ ಅಧಿನಿಯಮದ ಯಾವುದೇ ಅಥವಾ ಎಲ್ಲ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಸಾರಿಗೆ ಮಂತ್ರಿಗಳು

ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ – X

**(ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳು**

**324 ರಿಂದ 351ರ ಉದ್ಧೃತ ಭಾಗ)**

**ಸದಸ್ಯರು ಪಾಲಿಸಬೇಕಾದ ನಿಯಮಗಳು**

**324. ಸದನದಲ್ಲಿ ಉಪಸ್ಥಿತರಿದ್ದಾಗ ಸದಸ್ಯರು ಪಾಲಿಸಬೇಕಾದ ನಿಯಮಗಳು:**

**ಸಭೆಯ ಉಪವೇಶನದಲ್ಲಿ ಸದಸ್ಯನು:**

(1) ಸದನದ ಕಾರ್ಯಕಲಾಪಕ್ಕೆ ಸಂಬಂಧಿಸಿರುವುದನ್ನು ಹೊರತು, ಯಾವುದೇ ಪುಸ್ತಕ, ವಾರ್ತಾ ಪತ್ರಿಕೆ ಅಥವಾ ಕಾಗದವನ್ನು ಓದತಕ್ಕದ್ದಲ್ಲ.

(2) ಯಾವನೇ ಸದಸ್ಯನು ಮಾತನಾಡುತ್ತಿರುವಾಗ ಅವನಿಗೆ ದುರ್ವಚನೆಗಳಿಂದ ಅಥವಾ ಏರುಸ್ವರದಿಂದ ಅಥವಾ ಇತರ ಯಾವುದೇ ಕ್ರಮಬಾಹಿರ ರೀತಿಯಲ್ಲಿ ತೊಂದರೆಯುಂಟು ಮಾಡತಕ್ಕದ್ದಲ್ಲ.

(3) ಸದನವನ್ನು ಪ್ರವೇಶಿಸುವಾಗ ಅಥವಾ ಅಲ್ಲಿಂದ ನಿರ್ಗಮಿಸುವಾಗ ಮತ್ತು ತಮ್ಮ ಜಾಗದಲ್ಲಿ ಕುಳಿತುಕೊಳ್ಳುವಾಗ ಅಥವಾ ಜಾಗವನ್ನು ಬಿಡುವಾಗ ಅಧ್ಯಕ್ಷರಿಗೆ ವಂದಿಸತಕ್ಕದ್ದು.

(4) ಅಧ್ಯಕ್ಷರ ಮತ್ತು ಮಾತನಾಡುತ್ತಿರುವ ಸದಸ್ಯರ ಮಧ್ಯೆ ಹಾದು ಹೋಗತಕ್ಕದ್ದಲ್ಲ.

(5) ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತಿರುವಾಗ ಸದನವನ್ನು ತ್ಯಜಿಸತಕ್ಕದ್ದಲ್ಲ.

(6) ಯಾವಾಗಲೂ ಅಧ್ಯಕ್ಷರನ್ನು ಸಂಬೋಧಿಸಿ ಮಾತನಾಡತಕ್ಕದ್ದು.

(7) ಸಭೆಯನ್ನು ಉದ್ದೇಶಿಸಿ ಮಾತನಾಡುವಾಗ ತನ್ನ ಸ್ಥಾನದಲ್ಲಿರತಕ್ಕದ್ದು.

(8) ಸದನದಲ್ಲಿ ಮಾತನಾಡದೇ ಇರುವ ಸಮಯದಲ್ಲಿ ನಿಶ್ಯಬ್ಧವಾಗಿರತಕ್ಕದ್ದು.

(9) ಸಭೆಯ ಕಾರ್ಯವಿಧಿಗೆ ತಡೆ ಅಥವಾ ವಿಘ್ನವನ್ನು ತರತಕ್ಕದ್ದಲ್ಲ ಮತ್ತು ಸದನದಲ್ಲಿ ಭಾಷಣವಾಗುತ್ತಿರುವಾಗ ವೀಕ್ಷಕ ವಿವರಣೆಯನ್ನು ಮಾಡತಕ್ಕದ್ದಲ್ಲ.

(10) ಯಾವುದೇ ಉಪ್ಪರಿಗೆಯ ಮೊಗಸಾಲೆಯನ್ನು (ಗ್ಯಾಲರಿಯನ್ನು) ಒಬ್ಬ ಅಪರಿಚಿತನು ಪ್ರವೇಶಿಸಿದಾಗ ಚಪ್ಪಾಳೆ ಹೊಡೆಯತಕ್ಕದ್ದಲ್ಲ.

(11) ಮಾತನಾಡುತ್ತಿರುವಾಗ, ಯಾವುದೇ ಉಪ್ಪರಿಗೆಯ ಮೊಗಸಾಲೆಯಲ್ಲಿರುವ (ಗ್ಯಾಲರಿಯಲ್ಲಿ) ಅಪರಿಚಿತರನ್ನು ಕುರಿತು ಮಾತನಾಡತಕ್ಕದ್ದಲ್ಲ.

(12) ಸದನದಲ್ಲಿ ಘೋಷಣೆಯನ್ನು ಕೂಗತಕ್ಕದ್ದಲ್ಲ;

(13) ಪೀಠಕ್ಕೆ ಬೆನ್ನು ತೋರಿಸುವಂತೆ ಕುಳಿತುಕೊಳ್ಳತಕ್ಕದ್ದಲ್ಲ ಅಥವಾ ನಿಲ್ಲತಕ್ಕದ್ದಲ್ಲ.

(14) ಸದನದಲ್ಲಿ ಪೀಠದ ಬಳಿ ಖುದ್ದಾಗಿ ಹೋಗತಕ್ಕದ್ದಲ್ಲ ಅವಶ್ಯಕತೆಯುಂಟಾದರೆ ಅವರು ವಿಧಾನ ಮಂಡಲದ ಮುಂದೆ ಅಧಿಕಾರಿಗಳಿಗೆ ಚೀಟಿ ನೀಡಬಹುದು.

(15) ಸದನದಲ್ಲಿ ಬ್ಯಾಡ್ಜುಗಳು ಅಥವಾ ಯಾವುದೇ ವಸ್ತುವನ್ನು ಧರಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸತಕ್ಕದ್ದಲ್ಲ.

(16) ಸದನದಲ್ಲಿ ಶಸ್ತ್ರಗಳನ್ನು ತರತಕ್ಕದ್ದಲ್ಲ ಅಥವಾ ಪ್ರದರ್ಶಿಸತಕ್ಕದ್ದಲ್ಲ.

(17) ಸದನದಲ್ಲಿ ಬಾವುಟಗಳು, ಲಾಂಛನಗಳು ಅಥವಾ ಯಾವುದೇ ನಿಶಾನೆಗಳನ್ನು ಪ್ರದರ್ಶಿಸತಕ್ಕದ್ದಲ್ಲ.

(18) ತನ್ನ ಭಾಷಣವಾದ ತರುವಾಯ, ಕೂಡಲೇ ಸದನವನ್ನು ಬಿಟ್ಟು ಹೋಗತಕ್ಕದ್ದಲ್ಲ.

(19) ಸದನದ ವ್ಯವಹಾರಗಳಿಗೆ ಸಂಬಂಧಪಡದ ಯಾವುದೇ ಬರವಣಿಗೆ, ಪ್ರಶ್ನಾವಳಿ, ಕರಪತ್ರಗಳು ಪತ್ರಿಕಾ ಹೇಳಿಕೆಗಳು, ಕಾಗದದ ಹಾಳೆಗಳು, ಮೊದಲಾದುವನ್ನು ಸದನದ ಆವರಣದೊಳಗೆ ಹಂಚತಕ್ಕದ್ದಲ್ಲ.

(20) ಸದನದಲ್ಲಿ ಡೆಸ್ಕ್ ಮೇಲೆ ತನ್ನ ಟೋಪಿಯನ್ನು ಇಡತಕ್ಕದ್ದಲ್ಲ, ಕಡತಗಳನ್ನು ಇಡಲು ಅಥವಾ ಬರೆಯುವ ಉದ್ದೇಶಕ್ಕಾಗಿ ರಟ್ಟನ್ನು ತರತಕ್ಕದ್ದಲ್ಲ, ಧೂಮಪಾನ ಮಾಡತಕ್ಕದ್ದಲ್ಲ ಅಥವಾ ಕೋಟನ್ನು ಕೈನಲ್ಲಿ ಹಿಡಿದು ಸದನವನ್ನು ಪ್ರವೇಶಿಸಿತಕ್ಕದ್ದಲ್ಲ.

(21) ಆರೋಗ್ಯದ ಕಾರಣಗಳ ಮೇಲೆ ವಿಧಾನ ಸಭ್ಯಾಧ್ಯಕ್ಷರ ಅನುಮತಿ ಪಡೆಯದೆ ಊರುಗೋಲನ್ನು ತರತಕ್ಕದ್ದಲ್ಲ.

(22) ಸದನದಲ್ಲಿ ಪ್ರತಿಭಟನೆ ಸೂಚಿಸಿ ಕಾಗದ ಪತ್ರಗಳನ್ನು ಹರಿದುಹಾಕತಕ್ಕದ್ದಲ್ಲ;

(23) ಸದನದಲ್ಲಿ ಕ್ಯಾಸೆಟ್ ಅಥವಾ ಟೇಪ್ ರೆಕಾರ್ಡರ್‌ಗಳನ್ನು ತರತಕ್ಕದ್ದಲ್ಲ ಮತ್ತು ಹಾಕತಕ್ಕುದಲ್ಲ ಮತ್ತು

(24) ಸದನಕ್ಕೆ ಜೋರಾಗಿ ಕೇಳಿಸುವಂತೆ ಮೊಗಸಾಲೆಯಲ್ಲಿ ಮಾತನಾಡತಕ್ಕುದಲ್ಲ ಅಥವಾ ನಗತಕ್ಕದಲ್ಲ.

**325. ಅಧ್ಯಕ್ಷರಿಂದ ಕರೆಬಂದಾಗ ಸದಸ್ಯರು ಮಾತನಾಡುವುದು:** ಒಬ್ಬ ಸದಸ್ಯನು ಮಾತನಾಡಲು ಎದ್ದುನಿಂತರೆ, ಅಧ್ಯಕ್ಷರು ಅವರ ಹೆಸರನ್ನು ಕರೆಯತಕ್ಕದ್ದು. ಒಬ್ಬರಿಗಿಂತ ಹೆಚ್ಚು ಸದಸ್ಯರು ಏಕಕಾಲದಲ್ಲಿ ಎದ್ದು ನಿಂತರೆ, ಅಧ್ಯಕ್ಷರು ಹೆಸರು ಕರೆದಿರುವ ಸದಸ್ಯರಿಗೆ ಮಾತನಾಡಲು ಹಕ್ಕಿರುವುದು.

**326. ಸದನವನ್ನು ಉದ್ದೇಶಿಸಿ ಮಾತನಾಡುವ ರೀತಿ :** ಸದನದಲ್ಲಿ ಯಾವುದೇ ವಿಷಯದ ಬಗ್ಗೆ ಒಬ್ಬ ಸದಸ್ಯನು ಯಾವುದೇ ಅಭಿಪ್ರಾಯವನ್ನು ವ್ಯಕ್ತಗೊಳಿಸಲಿಚ್ಛಿಸಿದರೆ, ತನ್ನ ಸ್ಥಳದಿಂದಲೇ ಎದ್ದುನಿಂತು ಅಧ್ಯಕ್ಷರನ್ನು ಸಂಬೋಧಿಸಿ ಮಾತನಾಡತಕ್ಕದ್ದು, ಪರಂತು, ಕಾಯಿಲೆ ಅಥವಾ ದುರ್ಬಲತೆಯಿಂದ ನಿಶ್ಶಕ್ತರಾಗಿರುವವರನ್ನು ಕುಳಿತುಕೊಂಡೆ ಮಾತನಾಡಲು ಅನುಮತಿಸಬಹುದು.

**327. ಮಾತನಾಡುವಾಗ ಪಾಲಿಸಬೇಕಾದ ನಿಯಮಗಳು :**

**ಸದಸ್ಯರು ಮಾತನಾಡುವಾಗ;–**

(1) ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿದ್ದು ತೀರ್ಪು ನೀಡಿರದ ಯಾವುದೇ ಸಂಗತಿಯನ್ನು ಕುರಿತು ಮಾತನಾಡತಕ್ಕದ್ದಲ್ಲ.

(2) ಸದಸ್ಯರೊಬ್ಬರ ಮೇಲೆ ವೈಯಕ್ತಿಕ ದೋಷಾರೋಪಣೆ ಮಾಡತಕ್ಕದ್ದಲ್ಲ.

(3) ಸಂಸತ್ತು ಅಥವಾ ಯಾವುದೇ ರಾಜ್ಯ ವಿಧಾನ ಮಂಡಲದ ವ್ಯವಹರಣೆಗಳು ಮತ್ತು ನಡವಳಿಕೆಗಳನ್ನು ಕುರಿತು ಹೀನಾಯವಾಗಿ ಮಾತನಾಡತಕ್ಕದ್ದಲ್ಲ.

(4) ಸದನದ ಯಾವುದೇ ತೀರ್ಮಾನವನ್ನು ಕುರಿತು ಅದನ್ನು ರದ್ದುಪಡಿಸಲು ಪ್ರಸ್ತಾವ ಮಂಡಿಸುವಾಗ ಹೊರತು ಇನ್ನಾವುದೇ ಆರೋಪಣೆ ಮಾಡತಕ್ಕದ್ದಲ್ಲ.

(5) ಸರಿಯಾದ ವಾಕ್ಯಗಳಲ್ಲಿ ರಚಿಸಲಾದ ಆಧಾರಸಹಿತ ಪ್ರಸ್ತಾವದ ಮೇಲೆ ಚರ್ಚೆ ನಡೆಸಿದ್ದ ಹೊರತು ಉನ್ನತಾಧಿಕಾರದಲ್ಲಿರುವ ವ್ಯಕ್ತಿಗಳ ನಡವಳಿಕೆ ಕುರಿತು ಆರೋಪಿಸತಕ್ಕದ್ದಲ್ಲ.

**ವಿವರಣೆ:** ಉನ್ನತಾಧಿಕಾರದಲ್ಲಿರುವ ವ್ಯಕ್ತಿಗಳು ಎಂದರೆ ಭಾರತ ಸಂವಿಧಾನದ ಮೇರೆಗೆ ಯಾವ ನಡವಳಿಕೆಯನ್ನು ಸರಿಯಾದ ವಾಕ್ಯಗಳಲ್ಲಿ ರಚಿಸಿದ ಆಧಾರಸಹಿತ ಪ್ರಸ್ತಾವಗಳ ಮೇಲೆ ಮಾತ್ರವೇ ಚರ್ಚೆ ನಡೆಸಬಹುದೋ ಆ ವ್ಯಕ್ತಿಗಳು ಅಥವಾ ಯಾರ ನಡವಳಿಕೆಯನ್ನು ತಾವು ಒಪ್ಪುವಂತಹ ವಾಕ್ಯಗಳಲ್ಲಿ ರಚಿಸಲಾದ ಆಧಾರಸಹಿತ ಪ್ರಸ್ತಾವದ ಮೇಲೆ ಮಾತ್ರವೇ ಚರ್ಚಿಸತಕ್ಕದ್ದು ಎಂದು ಅಧ್ಯಕ್ಷರು ಅಭಿಪ್ರಾಯಪಡುತ್ತಾರೋ ಆ ವ್ಯಕ್ತಿಗಳು ;

(6) ಚರ್ಚೆಯ ಮೇಲೆ ಪ್ರಭಾವ ಬೀರುವುದಕ್ಕಾಗಿ ರಾಜ್ಯಪಾಲರ ಹೆಸರನ್ನು ಉಪಯೋಗಿಸತಕ್ಕದ್ದಲ್ಲ;

(7) ರಾಷ್ಟ್ರದ್ರೋಹ, ರಾಷ್ಟ್ರವಿರೋಧಿ ಅಥವಾ ಅಪಮಾನಕರವಾದ ಮಾತುಗಳನ್ನು ಆಡತಕ್ಕದ್ದಲ್ಲ.

(8) ಸದನದ ಕಾರ್ಯಕಲಾಪಗಳನ್ನು ಅಡ್ಡಿಪಡಿಸುವುದಕ್ಕಾಗಿ ತಮ್ಮ ವಾಕ್ ಸ್ವಾತಂತ್ರವನ್ನು ಬಳಸಬಾರದು.

(9) ವಿಧಾನ ಸಭಾಧ್ಯಕ್ಷರ ಪರ ಅಥವಾ ವಿಧಾನಮಂಡಲ ಕಾರ್ಯಾಲಯದ ಯಾವುದೇ

ಉದ್ದೇಶವನ್ನು ಕುರಿತು ಆರೋಪಿಸತಕ್ಕದ್ದಲ್ಲ.

(10) ರಾಷ್ಟ್ರಾಧ್ಯಕ್ಷರು ಅಥವಾ ರಾಜ್ಯಪಾಲರ ಅಥವಾ ಯಾವುದೇ ನ್ಯಾಯಾಲಯದ ನಡವಳಿಯನ್ನು ಕುರಿತು ಆರೋಪಿಸತಕ್ಕದ್ದಲ್ಲ ಅಥವಾ ಚರ್ಚೆಯನ್ನು ಪರಿಣಾಮಕಾರಿಯಾಗಿ ಮಾಡುವ ಉದ್ದೇಶಕ್ಕಾಗಿ ರಾಜ್ಯಪಾಲರ ಅಥವಾ ರಾಷ್ಟ್ರಾಧ್ಯಕ್ಷರ ಹೆಸರನ್ನು ಬಳಸತಕ್ಕದ್ದಲ್ಲ ;

(11) ಯಾವುದೇ ಗ್ಯಾಲರಿಯಲ್ಲಿರುವ ಅಪರಿಚಿತರ ಬಗ್ಗೆ ಯಾವುದೇ ಉಲ್ಲೇಖ ಮಾಡತಕ್ಕದ್ದಲ್ಲ;

(12) ಸರ್ಕಾರಿ ಅಧಿಕಾರಿಗಳನ್ನು ಹೆಸರು ಹಿಡಿದು ಕರೆಯತಕ್ಕದ್ದಲ್ಲ; ಮತ್ತು

(13) ಪೀಠದ ಪೂರ್ವಾನುಮತಿಯ ಹೊರತು ಬರವಣಿಗೆಯಲ್ಲಿರುವ ಭಾಷಣವನ್ನು ಓದತಕ್ಕದ್ದಲ್ಲ;

**328. ಒಬ್ಬ ವ್ಯಕ್ತಿಯನ್ನು ಕುರಿತು ಆಪಾದನೆಯ ಬಗ್ಗೆ ಕೈಗೊಳ್ಳಬೇಕಾದ ಕಾರ್ಯವಿಧಾನ:** ಸದಸ್ಯರು ಅಧ್ಯಕ್ಷರಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ, ಮಂತ್ರಿಗಳು ಉತ್ತರ ನೀಡುವ ಉದ್ದೇಶಕ್ಕಾಗಿ ತನಿಖೆ ನಡೆಸಲು ಸಾಧ್ಯವಾಗುವಂತೆ ಪೂರ್ವ ಮಾಹಿತಿಯನ್ನು ಕೊಟ್ಟಿದ್ದ ಹೊರತು, ಯಾವ ಸದಸ್ಯರು ಯಾವ ವ್ಯಕ್ತಿಯನ್ನು ಕುರಿತು ಅಪಮಾನಕರವಾದ ಅಥವಾ ಅಪರಾಧದ ಆಪಾದನೆ ಮಾಡುವ ಯಾವ ಆರೋಪವನ್ನು ಮಾಡತಕ್ಕುದಲ್ಲ, ಅಲ್ಲದೆ ಅಧ್ಯಕ್ಷರು ಅಂಥ ಆರೋಪವು ಸದನದ ಮರ್ಯಾದೆಗೆ ಕುಂದು ತರುವಂತಹದು ಅಥವಾ ಅದರಿಂದ ಯಾವುದೇ ಸಾರ್ವಜನಿಕ ಹಿತಾಸಕ್ತಿ ಸಾಧಿತವಾಗುವುದಿಲ್ಲ ಎಂದು ಅಭಿಪ್ರಾಯ ಪಡುವುದಾದರೆ, ಯಾವುದೇ ಸಂದರ್ಭದಲ್ಲಿ ಯಾರೇ ಸದಸ್ಯರು ಅಂಥ ಯಾವುದೇ ಆರೋಪ ಮಾಡುವುದನ್ನು ನಿಷೇಧಿಸಬಹುದು.

**329. ಪರಿಷತ್ತಿನಲ್ಲಿ ಮಾಡಲಾದ ಭಾಷಣಗಳನ್ನು ಉದ್ಧರಿಸುವುದಕ್ಕೆ ಪ್ರತಿಬಂಧ :** ಪರಿಷತ್ತಿನಲ್ಲಿ ಮಾಡಲಾದ ಯಾವುದೇ ಭಾಷಣವನ್ನು ಅದು ಒಂದು ಕಾರ್ಯನೀತಿಯ ಬಗ್ಗೆ ಸಚಿವರ ಸ್ಪಷ್ಟ ಹೇಳಿಕೆಯಾಗಿದ್ದ ಹೊರತು ಸದನದಲ್ಲಿ ಉದ್ಧರಿಸತಕ್ಕದ್ದಲ್ಲ.

ಆದರೂ, ಅಧ್ಯಕ್ಷರು ತಮಗೆ ಮುಂಚಿತವಾಗಿ ಸಲ್ಲಿಸಿದ ಕೋರಿಕೆಯ ಮೇಲೆ ಯಾರೇ ಸದಸ್ಯರಿಗೆ ಪರಿಷತ್ತಿನಲ್ಲಿನ ಭಾಷಣಗಳನ್ನು ಉದ್ಧರಿಸಲು ಅಥವಾ ಅಲ್ಲಿನ ಕಾರ್ಯವಿಧಾನವನ್ನು ಕುರಿತು ಉಲ್ಲೇಖಿಸಲು, ಹಾಗೆ ಮಾಡುವುದು ಆ ಸದಸ್ಯರು ಹಕ್ಕು ಬಾಧ್ಯತೆಯ ಅಥವಾ ಕಾರ್ಯವಿಧಾನದ ಅಂಶವೊಂದನ್ನು ವಿಶದೀಕರಿಸಲು ಅವಶ್ಯವೆಂದು ಅಧ್ಯಕ್ಷರು ಯೋಚಿಸಿದಲ್ಲಿ, ಅನುಮತಿ ನೀಡಬಹುದು.

**330. ಪ್ರಶ್ನೆಗಳನ್ನು ಅಧ್ಯಕ್ಷರ ಮುಖಾಂತರವಾಗಿ ಕೇಳತಕ್ಕದ್ದು:** ಚರ್ಚೆ ನಡೆಯುತ್ತಿರುವಾಗ ವಿವರಣೆ ಉದ್ದೇಶಗಳಿಗಾಗಿ ಅಥವಾ ಇನ್ನಾವುದೇ ಸಾಕಷ್ಟು ಕಾರಣಗಳಿಗಾಗಿ ಸದನದಲ್ಲಿ ಆಗ ಪರ್ಯಾಲೋಚನೆಯಲ್ಲಿರುವ ಯಾವುದೇ ವಿಷಯದ ಸಂಬಂಧದಲ್ಲಿ ಯಾವುದೇ ಸದಸ್ಯರು ಇನ್ನೊಬ್ಬ ಸದಸ್ಯರಿಗೆ ಪ್ರಶ್ನೆಯನ್ನು ಕೇಳುವ

ಅಗತ್ಯವುಂಟಾದರೆ, ಅವರು ತಮ್ಮ ಪ್ರಶ್ನೆಯನ್ನು ಅಧ್ಯಕ್ಷರ ಮೂಲಕ ಕೇಳತಕ್ಕದ್ದು.

**331. ಅಸಂಬಂಧಿತ ಅಥವಾ ಪುನರುಕ್ತಿ:** ಅಸಂಬಂಧ ವಿಷಯಗಳನ್ನು ಪ್ರಸ್ತಾಪಿಸುವ ಅಥವಾ ತನ್ನ ವಾದವನ್ನು ಅಥವಾ ಸದಸ್ಯರ ವಾದಗಳನ್ನು ಬೇಸರ ಮಾಡುವಷ್ಟು ಪುನಃ ಪುನಃ ಹೇಳುತ್ತಲೇ ಇರುವ ಸದಸ್ಯರೊಬ್ಬರ ವರ್ತನೆಯನ್ನು ಸದನದ ಗಮನಕ್ಕೆ ತಂದನಂತರ ಅಧ್ಯಕ್ಷರು ಆ ಸದಸ್ಯರನ್ನು ತಮ್ಮ ಭಾಷಣವನ್ನು ನಿಲ್ಲಿಸಬೇಕೆಂದು ನಿರ್ದೇಶಿಸಬಹುದು.

**332. ವೈಯಕ್ತಿಕ ವಿವರಣೆಗಳು:** ಸದಸ್ಯರು ಅಧ್ಯಕ್ಷರ ಅನುಮತಿ ಪಡೆದು ಒಂದು ವಿಷಯವು ಸದನದ ಮುಂದೆ ಚರ್ಚೆಗೆ ಬಂದಿರದಿದ್ದರೂ ಆ ಬಗ್ಗೆ ತಮ್ಮ ವೈಯಕ್ತಿಕ ವಿವರಣೆಯನ್ನು ನೀಡಬಹುದು, ಆದರೆ ಹಾಗೆ ಮಾಡುವಾಗ ಯಾವುದೇ ಚರ್ಚಾಸ್ಪದ ಅಂಶವನ್ನು ತರತಕ್ಕದ್ದಲ್ಲ ಮತ್ತು ಆ ಬಗ್ಗೆ ಯಾವ ಚರ್ಚೆಗೂ ಅವಕಾಶ ನೀಡತಕ್ಕದ್ದಲ್ಲ.

**333. ಭಾಷಣಗಳ ಅನುಕ್ರಮ ಮತ್ತು ಉತ್ತರ ನೀಡಲು ಹಕ್ಕು:** (1) ಪ್ರಸ್ತಾವವನ್ನು ಸಭೆಯಲ್ಲಿ ಮಂಡಿಸಿದ ಸದಸ್ಯರು ಮಾತನಾಡಿದ ನಂತರ ಇತರ ಸದಸ್ಯರು ಅಧ್ಯಕ್ಷರು ಅವರ ಹೆಸರನ್ನು ಅನುಕ್ರಮದಲ್ಲಿಯೇ ಆ ಪ್ರಸ್ತಾವವನ್ನು ಕುರಿತು ಮಾತನಾಡತಕ್ಕದ್ದು. ಯಾರೇ ಸದಸ್ಯರು ಅಧ್ಯಕ್ಷರು ಕರೆದಾಗ ಮಾತನಾಡದಿದ್ದಲ್ಲಿ ಚರ್ಚೆ ಮುಂದುವರೆದಾಗ, ಅಧ್ಯಕ್ಷರ ಅನುಮತಿಯ ಮೇರೆಗೆ ಹೊರತು ಮಾತನಾಡಲು ಹಕ್ಕುಳ್ಳವರಾಗತಕ್ಕದ್ದಲ್ಲ.

(2) ಉತ್ತರ ಹೇಳುವ ತಮ್ಮ ಹಕ್ಕನ್ನು ಚಲಾಯಿಸುವಾಗ, ಹೊರತು ಅಥವಾ ಈ ನಿಯಮಗಳ ಮೂಲಕ ಅನ್ಯಥಾ ಉಪಬಂಧವಿರುವಂತೆ ಹೊರತು ಅಧ್ಯಕ್ಷರ ಅನುಮತಿ ಪಡೆದಲ್ಲದೆ ಯಾವ ಸದಸ್ಯರೂ ಒಂದು ಪ್ರಸ್ತಾವದ ಮೇಲೆ ಒಂದು ಸಲಕ್ಕಿಂತ ಹೆಚ್ಚು ಬಾರಿ ಮಾತನಾಡತಕ್ಕದ್ದಲ್ಲ.

(3) ಒಂದು ಪ್ರಸ್ತಾವವನ್ನು ಮಂಡಿಸಿದ ಸದಸ್ಯರು ಉತ್ತರ ಹೇಳುವ ಸಲುವಾಗಿ ಮತ್ತೊಮ್ಮೆ ಮಾತನಾಡಬಹುದು ಮತ್ತು ಪ್ರಸ್ತಾವವನ್ನು ಖಾಸಗಿ ಸದಸ್ಯರೊಬ್ಬರು ಮಂಡಿಸಿದ್ದರೆ, ಸಂಬಂಧಪಟ್ಟ ಸಚಿವರು ಅಧ್ಯಕ್ಷರ ಅನುಮತಿ ಪಡೆದು (ಅವರು ಚರ್ಚೆಯಲ್ಲಿ ಈ ಹಿಂದೆ ಮಾತನಾಡಿರಲಿ, ಇಲ್ಲದಿರಲಿ) ಪ್ರಸ್ತಾವ ಮಂಡಿಸಿದ ಸದಸ್ಯರು ಉತ್ತರ ನೀಡಿದನಂತರ ಮಾತನಾಡಬಹುದು.

ಆದರೂ, ಈ ಉಪನಿಯಮದಲ್ಲಿರುವುದು ಯಾವುದೂ ಒಂದು ವಿಧೇಯಕಕ್ಕೆ ತಿದ್ದುಪಡಿಯನ್ನು ಅಥವಾ ಒಂದು ನಿರ್ಣಯವನ್ನು ಪ್ರಸ್ತಾವಿಸಿ ಮಂಡಿಸುವ ಯಾವ ವ್ಯಕ್ತಿಗೂ ಅಧ್ಯಕ್ಷರ ಅನುಮತಿ ಪಡೆದಲ್ಲದೆ ಉತ್ತರ ನೀಡಲು ಯಾವುದೇ ಹಕ್ಕನ್ನು ನೀಡುತ್ತದೆ ಎಂದು ಭಾವಿಸತಕ್ಕದ್ದಲ್ಲ.

**334. ಪ್ರಸ್ತಾವ ಮಂಡಿಸಿದವರ ಉತ್ತರದೊಂದಿಗೆ ಚರ್ಚೆಯ ಸಮಾಪ್ತಿ :** 333ನೇ ನಿಯಮದ (3ನೇ) ಉಪನಿಯಮದ ಉಪಬಂಧಗಳಿಗೆ ಒಳಪಟ್ಟು ಮೂಲ ಪ್ರಸ್ತಾವವನ್ನು ಮಂಡಿಸಿದ ವ್ಯಕ್ತಿಯ ಉತ್ತರದೊಂದಿಗೆ ಎಲ್ಲಾ ಸಂದರ್ಭಗಳಲ್ಲಿಯೂ ಚರ್ಚೆಯು ಮುಕ್ತಾಯವಾಗತಕ್ಕದ್ದು.

**335. ಭಾಷಣಗಳ ಕಾಲಾವಧಿ :** ಅಧ್ಯಕ್ಷರು ನಿಯಮಗಳಲ್ಲಿ ನಿರ್ದಿಷ್ಟ ಉಪಬಂಧಗಳನ್ನು ಕಲ್ಪಿಸಿದರೆ ಸಂದರ್ಭಗಳಲ್ಲಿ ಮತ್ತು ಸದನದ ಕಾರ್ಯಕಲಾಪಗಳ ಪರಿಸ್ಥಿತಿಯನ್ನು ಮತ್ತು ಪ್ರಸ್ತಾವದ ಸ್ವರೂಪವನ್ನು ಗಮನದಲ್ಲಿರಿಸಿಕೊಂಡು ಪ್ರಸ್ತಾವವನ್ನು ಕುರಿತು ಭಾಷಣಗಳಿಗೆ ಕಾಲಮಿತಿಯನ್ನು ನಿಗದಿಪಡಿಸಬಹುದು.

**336. ಅಧ್ಯಕ್ಷರ ಭಾಷಣ :** ಅಧ್ಯಕ್ಷರು ಯಾವುದೇ ಸಮಯದಲ್ಲಿ ತಾವಾಗಿಯೇ ಅಥವಾ ಸದಸ್ಯರು ಯಾವುದೇ ಒಂದು ಅಂಶವನ್ನು ಎತ್ತಿದಾಗ ಅಥವಾ ಸದಸ್ಯರೊಬ್ಬರು ಮಾಡಿದ ವಿನಂತಿಯ ಮೇಲೆ, ಸದನದ ಮುಂದೆ ಪರ್ಯಾಲೋಚನೆಯಲ್ಲಿರುವ ವಿಷಯದ ಮೇಲೆ ಸದಸ್ಯರ ಚರ್ಚೆಗೆ ನೆರವು ನೀಡುವ ಉದ್ದೇಶದಿಂದ ಸಭೆಯನ್ನು ಉದ್ದೇಶಿಸಿ ಮಾತನಾಡಬಹುದು ಮತ್ತು ಹಾಗೆ ಅವರು ತಿಳಿಸಿದ ತಮ್ಮ ಅಭಿಪ್ರಾಯಗಳನ್ನು ಒಂದು ತೀರ್ಪು ಎಂದು ಪರಿಗಣಿಸತಕ್ಕದ್ದಲ್ಲ.

**337. ಅಧ್ಯಕ್ಷರು ಎದ್ದುನಿಂತಾಗ ಅನುಸರಿಸಬೇಕಾದ ಕಾರ್ಯವಿಧಾನ:** (1) ಅಧ್ಯಕ್ಷರು ಮಾತನಾಡಲು ಎದ್ದುನಿಂತುಕೊಂಡಾಗಲೆಲ್ಲ ಸದಸ್ಯರು ಮೌನದಿಂದಿದ್ದು ಅವರ ಮಾತುಗಳನ್ನು ಆಲಿಸಬೇಕು ಮತ್ತು ಆ ಸಮಯದಲ್ಲಿ ಮಾತನಾಡುತ್ತಿದ್ದ ಅಥವಾ ಮಾತನಾಡಲು ಆರಂಭಿಸಲಿದ್ದ ಸದಸ್ಯರು ಕೂಡಲೇ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳತಕ್ಕದ್ದು.

(2) ಅಧ್ಯಕ್ಷರು ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವಾಗ ಯಾವ ಸದಸ್ಯರು ತಮ್ಮ ಸ್ಥಾನದಿಂದ ಎದ್ದುಹೋಗತಕ್ಕದ್ದಲ್ಲ.

**338. ಮುಕ್ತಾಯ:** (1) ಪ್ರಸ್ತಾವವನ್ನು ಮಂಡಿಸಿದ ಅನಂತರ ಯಾವುದೇ ಸಮಯದಲ್ಲಿ ಯಾರೇ ಸದಸ್ಯರು "ಈಗ ಸಭೆಯ ಅಭಿಮತಕ್ಕೆ ಹಾಕಬೇಕು". ಎಂದು ಪ್ರಸ್ತಾವವನ್ನು ಮಂಡಿಸಬಹುದು ಮತ್ತು ಈ ಪ್ರಸ್ತಾವವು ಈ ನಿಯಮಾವಳಿಯ ದುರುಪಯೋಗ ಅಥವಾ ಸಮಂಜಸ ಚರ್ಚೆಗೆ ಇರುವ ಹಕ್ಕನ್ನು ಕುಂಠಿತಗೊಳಿಸುತ್ತದೆ ಎಂದು ಅಧ್ಯಕ್ಷರಿಗೆ ತೋರಿದ ಹೊರತು ಅಧ್ಯಕ್ಷರು "ಈಗ ಪ್ರಶ್ನೆಯನ್ನು ಕೇಳಬಹುದು" ಎಂಬ ಪ್ರಸ್ತಾವವನ್ನು ಮಂಡಿಸತಕ್ಕದ್ದು.

(2) "ಈಗ ಪ್ರಶ್ನೆಯನ್ನು ಕೇಳಬಹುದು" ಎಂಬ ಪ್ರಸ್ತಾವಕ್ಕೆ ಸಭೆಯ ಅನುಮೋದನೆ ದೊರೆತಲ್ಲಿ ಅದಕ್ಕೆ ಅನುಷಂಗಿಕವಾದ ಪ್ರಶ್ನೆಯನ್ನು ಅಥವಾ ಪ್ರಶ್ನೆಗಳನ್ನು ಹೆಚ್ಚಿನ ಚರ್ಚೆ ಇಲ್ಲದೆ ಕೂಡಲೇ ಕೇಳತಕ್ಕದ್ದು. ಆದಾಗ್ಯೂ ಅಧ್ಯಕ್ಷರು ಯಾರೇ ಸದಸ್ಯರಿಗೆ ಈ ನಿಯಮದ ಮೇರೆಗೆ ಅವರಿಗಿರುವ ಉತ್ತರ ನೀಡುವ ಹಕ್ಕನ್ನು

ಚಲಾಯಿಸಲು ಅವಕಾಶ ನೀಡಬಹುದು.

**339. ಚರ್ಚೆಯ ಪರಿಮಿತಿ :** (1) ಒಂದು ವಿಧೇಯಕಕ್ಕೆ ಸಂಬಂಧಿಸಿದ ಯಾವುದೇ ಪ್ರಸ್ತಾವದ ಮೇಲಿನ ಚರ್ಚೆಯು ಅಥವಾ ಯಾವುದೇ ಇತರ ಪ್ರಸ್ತಾವದ ಮೇಲಿನ ಚರ್ಚೆಯೂ ವೇಳೆ ಮೀರಿ ಮುಂದುವರಿಯುತ್ತಾ ಹೋದಾಗಲೆಲ್ಲ ಅಧ್ಯಕ್ಷರು ಸಭೆಯ ಒಟ್ಟು ಅಭಿಪ್ರಾಯವನ್ನು ತಿಳಿದುಕೊಂಡು ಸಂದರ್ಭಾನುಸಾರ ವಿಧೇಯಕದ ಯಾವುದೇ ಹಂತ ಅಥವಾ ಎಲ್ಲಾ ಹಂತಗಳ ಮೇಲಿನ ಚರ್ಚೆಗಳನ್ನು ಅಥವಾ ಆ ಪ್ರಸ್ತಾವದ ಮೇಲಿನ ಚರ್ಚೆಗಳನ್ನು ಮುಕ್ತಾಯಗೊಳಿಸಲು ಕಾಲ ಪರಿಮಿತಿಯನ್ನು ನಿಗದಿಪಡಿಸತಕ್ಕದ್ದು.

(2) ಯಾವುದೇ ವಿಧೇಯಕ ಅಥವಾ ಪ್ರಸ್ತಾವದ ಒಂದು ನಿರ್ದಿಷ್ಟ ಹಂತವನ್ನು ಪೂರೈಸುವುದಕ್ಕಾಗಿ ಗೊತ್ತುಪಡಿಸಲಾದ ಸಮಯಮಿತಿಗೆ ಅನುಸಾರವಾಗಿ, ಗೊತ್ತಾದ ವೇಳೆಯಲ್ಲಿ ಅಧ್ಯಕ್ಷರು, ಚರ್ಚೆ ಅದಕ್ಕಿಂತ ಮುಂಚಿತವಾಗಿಯೇ ಮುಕ್ತಾಯವಾದ ಹೊರತು ವಿಧೇಯಕ ಅಥವಾ ಪ್ರಸ್ತಾವದ ಆ ಹಂತದ ಸಂಬಂಧದಲ್ಲಿ ಉಳಿದಿರುವ ಎಲ್ಲ ಪ್ರಮುಖ ಅಂಶಗಳನ್ನು ಇತ್ಯರ್ಥಗೊಳಿಸಲು ಅಗತ್ಯವಾದ ಪ್ರತಿಯೊಂದು ಪ್ರಶ್ನೆಯನ್ನು ಕೂಡಲೇ ಹಾಕತಕ್ಕದ್ದು.

(3) ಇತ್ಯರ್ಥಕ್ಕಾಗಿ ಪ್ರಶ್ನೆ

**340. ಸದನದ ನಿರ್ಣಯವನ್ನು ಪಡೆಯಲು ಅನುಸರಿಸಬೇಕಾದ ಕಾರ್ಯ ವಿಧಾನ:** ಸದನದ ನಿರ್ಣಯವನ್ನು ಪಡೆಯಬೇಕಾಗಿರುವ ಯಾವುದೇ ವಿಷಯವು ಯಾವೊಬ್ಬ ಸದಸ್ಯರು ಮಾಡಿದ ಪ್ರಸ್ತಾವದ ಆಧಾರದ ಮೇಲೆ ಅಧ್ಯಕ್ಷರು ಕೇಳುವ ಪ್ರಶ್ನೆಯ ಮೂಲಕ ನಿರ್ಧರಿಸತಕ್ಕದ್ದು.

**341. ಪ್ರಸ್ತಾವ ಮತ್ತು ಇತ್ಯರ್ಥಕ್ಕಾಗಿ ಪ್ರಶ್ನೆಯನ್ನು ಹಾಕುವುದು:** ಒಂದು ಪ್ರಸ್ತಾವವನ್ನು ಸೂಚಿಸಿದಾಗ ಅಧ್ಯಕ್ಷರು ಅದರ ಪರವಾಗಿ ಮತ್ತು ಅದಕ್ಕೆ ವಿರೋಧವಾಗಿ, ಸದಸ್ಯರ ಮತಗಳನ್ನು ಕೇಳುವ ಪ್ರಶ್ನೆಯನ್ನು ಹಾಕಿ ಅದಕ್ಕೆ ಅದನ್ನು ಸಭೆಯ ತೀರ್ಮಾನಕ್ಕೆ ಬಿಡತಕ್ಕದ್ದು. ಒಂದು ಪ್ರಸ್ತಾವದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚು ಸಂಖ್ಯೆಯ ಪ್ರತ್ಯೇಕವಾದ ವಿಚಾರಗಳು ಅಡಕವಾಗಿದ್ದ ಪಕ್ಷದಲ್ಲಿ, ಅವುಗಳಲ್ಲಿ ಒಂದೊಂದರ ವಿಷಯವಾಗಿಯೂ ಸದನದ ಅಭಿಪ್ರಾಯವನ್ನು ನಿರ್ಧರಿಸಲು ಅಧ್ಯಕ್ಷರು ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಬಹುದು.

**342. ಮತವನ್ನು ಗ್ರಹಿಸಿದ ಮೇಲೆ ಸದಸ್ಯರು ಆ ವಿಷಯದ ಮೇಲೆ ಮಾತನಾಡಕೂಡದು:** ಅಧ್ಯಕ್ಷರು ಒಂದು ವಿಷಯದ ಮೇಲೆ ಅದರ ಪರವಾಗಿರುವ ಮತ್ತು ಅದಕ್ಕೆ ವಿರೋಧವಾಗಿರುವ ಸದಸ್ಯರ "ಹೌದು ಅಥವಾ ಅಲ್ಲ" ಎಂಬ ಅಭಿಮತವನ್ನು ಪಡೆದ ತರುವಾಯ ಆ ವಿಷಯದ ಮೇಲೆ ಯಾವ ಸದಸ್ಯರೂ

ಪುನಃ ಮಾತನಾಡತಕ್ಕದ್ದಲ್ಲ.

**343. ಪ್ರಸ್ತಾಪಿಸಲ್ಪಟ್ಟ ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡುವುದು :** ಒಬ್ಬ ಸಚಿವರು ಸದನದ ಮುಂದೆ ಹಾಜರುಪಡಿಸಿದ ಒಂದು ಕಾಗದವನ್ನು ಅಥವಾ ರಾಜ್ಯದ ಇತರ ಪತ್ರವನ್ನು ಸದನದಲ್ಲಿ ಪ್ರಸ್ತಾಪಿಸಿದ ಪಕ್ಷದಲ್ಲಿ ಅವರು ಸಂಬಂಧಪಟ್ಟ ಆ ಪತ್ರವನ್ನು ಸಭೆಯ ಮುಂದೆ ಇಡತಕ್ಕದ್ದು.

ಆದರೆ, ಈ ನಿಯಮವು ಕಾಗದಪತ್ರಗಳನ್ನು ಹಾಜರುಪಡಿಸುವುದರಿಂದ ಸಾರ್ವಜನಿಕ ಹಿತಸಾಧನೆಗೆ ಅಸಂಗತವಾದ ಸ್ವಭಾವದವುಗಳಾಗಿರುತ್ತವೆಂಬುದಾಗಿ ಸಚಿವರಿಂದ ತಿಳಿಸಲಾಗುವಂಥ
ಕಾಗದ ಪತ್ರಗಳಿಗೆ ಅನ್ವಯಿಸತಕ್ಕದ್ದಲ್ಲ.

ಅಷ್ಟೇ ಅಲ್ಲದೆ, ಅಂಥ, ಕಾಗದದ ಅಥವಾ ರಾಜ್ಯಪತ್ರದ ಸಾರಾಂಶ ಅಥವಾ ಮುಖ್ಯಾಂಶಗಳನ್ನು ಒಬ್ಬ ಸಚಿವರು ತಮ್ಮ ಸ್ವಂತ ಮಾತುಗಳಲ್ಲಿ ತಿಳಿಸಿದಾಗ ಸಂಬಂಧಪಟ್ಟ ಕಾಗದ ಪತ್ರವನ್ನು ಸಭೆಯ ಮುಂದಿಡುವುದು ಅವಶ್ಯಕವಾಗಿರತಕ್ಕದ್ದಲ್ಲ.

**344. ಸಭೆಯ ಮುಂದಿಟ್ಟ ಕಾಗದ ಪತ್ರಗಳ ಬಗೆಗಿನ ವ್ಯವಹಾರ :** 1) ಸಭೆಯ ಮುಂದಿಟ್ಟ ಒಂದು ಕಾಗದ ಅಥವಾ ದಸ್ತಾವೇಜನ್ನು ಅದನ್ನು ಮಂಡಿಸುವ ಸದಸ್ಯರಿಂದ ಕ್ರಮವಾಗಿ ಅಧಿಕೃತಗೊಳಿಸತಕ್ಕದ್ದು.

(2) ಸಭೆಯ ಮುಂದಿಟ್ಟ ಎಲ್ಲ ಕಾಗದಗಳೂ ಮತ್ತು ದಸ್ತಾವೇಜುಗಳೂ ಸಾರ್ವಜನಿಕವಾದುದೆಂದು ಭಾವಿಸತಕ್ಕದ್ದು.

**345. ಮಂತ್ರಿಗಳಿಂದ ಹೇಳಿಕೆ:** ವಿಧಾನ ಸಭಾಧ್ಯಕ್ಷರ ಅನುಮತಿ ಪಡೆದು ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಹೇಳಿಕೆ ನೀಡಬಹುದು. ಅಂತಹ ಹೇಳಿಕೆಯ ಮೇಲೆ ಯಾವುದೇ ಚರ್ಚೆಗೆ ಅವಕಾಶವಿರತಕ್ಕದ್ದಲ್ಲ. ಆದರೆ, ರಾಜ್ಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಪಡೆಯುವ ಉದ್ದೇಶಕ್ಕಾಗಿ ಪ್ರಶ್ನೆಗಳನ್ನು ಕೇಳಲು ಸದಸ್ಯರಿಗೆ ಅನುಮತಿ ನೀಡಬಹುದು.

**346. ಮತಗಳ ಎಣಿಕೆ:** (1) ಒಂದು ಚರ್ಚೆಯು ಮುಕ್ತಾಯವಾದ ಮೇಲೆ ಅಧ್ಯಕ್ಷರು ಚರ್ಚೆಯ ವಿಷಯವನ್ನು ಸಭೆಯ ಮುಂದೆ ಮಂಡಿಸತಕ್ಕದ್ದು ಮತ್ತು ಪ್ರಸ್ತಾವಕ್ಕೆ ಒಪ್ಪಿಗೆಯುಳ್ಳವರು, "ಹೌದು" ಎಂದು ಹೇಳಬೇಕೆಂಬುದಾಗಿಯೂ ಮತ್ತು ಅದಕ್ಕೆ ವಿರೋಧವಾಗಿರುವವರು "ಇಲ್ಲ" ಎಂದು ಹೇಳಬೇಕೆಂದಾಗಿಯೂ ತಿಳಿಸಬೇಕು.

(2) ಅಧ್ಯಕ್ಷರು, ಅನಂತರ, ತೀರ್ಮಾನವು "ಹೌದು" ಎಂದು ಹೇಳುವವರಿಗೆ (ಅಥವಾ ಆಯಾ ಸಂದರ್ಭಾನುಸಾರವಾಗಿ "ಇಲ್ಲ" ಎಂದು ಹೇಳುವವರಿಗೆ) ಅನುಕೂಲವಾಗಿದೆಯೆಂದು ನನಗೆ ತೋರುತ್ತದೆ ಎಂದು ತಿಳಿಯತಕ್ಕದ್ದು, ಒಂದು ಪ್ರಶ್ನೆಯ ತೀರ್ಮಾನದ ಸಂಬಂಧದಲ್ಲಿ ಅಧ್ಯಕ್ಷರ ಅಭಿಪ್ರಾಯವನ್ನು

ಪ್ರತಿಭಟಿಸದಿದ್ದಲ್ಲಿ ಅವರ ತೀರ್ಮಾನವು "ಹೌದು" ಎನ್ನುವವರೆಗೆ (ಅಥವಾ ಆಯಾ ಸಂದರ್ಭಾನುಸಾರವಾಗಿ "ಇಲ್ಲ" ಎನ್ನುವವರೆಗೆ) ಅನುಕೂಲವಾಗಿದೆ ಎಂದು ಎರಡು ಸಲ ಹೇಳತಕ್ಕದ್ದು ಮತ್ತು ಸದನದ ಮುಂದೆ ತೀರ್ಮಾನಕ್ಕೆ ಬಂದಿರುವ ವಿಚಾರವನ್ನು ಅದಕ್ಕೆ ತಕ್ಕಂತೆ ತೀರ್ಮಾನಿಸತಕ್ಕದ್ದು.

(3) ಒಂದು ಪ್ರಶ್ನೆಯ ತೀರ್ಮಾನದ ಸಂಬಂಧದಲ್ಲಿ ಅಧ್ಯಕ್ಷರ ಅಭಿಪ್ರಾಯವನ್ನು ಪ್ರತಿಭಟಿಸಿದ್ದಲ್ಲಿ ಮತದ ಎಣಿಕೆ ಗಂಟೆಯನ್ನು ಎರಡು ನಿಮಿಷಗಳವರೆಗೆ ಬಾರಿಸುವಂತೆ ವ್ಯವಸ್ಥೆ ಮಾಡತಕ್ಕದ್ದು.

(4) ಆ ಎರಡು ನಿಮಿಷಗಳು ಮುಗಿದ ಮೇಲೆ ಬಾಗಿಲುಗಳನ್ನು ಮುಚ್ಚಿ ಬಿಡುವಂತೆ ಹೇಳತಕ್ಕದ್ದು ಮತ್ತು ಪ್ರಶ್ನೆಯನ್ನು ಎರಡನೆಯ ಸಲ ಹಾಕಬೇಕು. ಮತ್ತು ಪ್ರಸ್ತಾವಕ್ಕೆ ಒಪ್ಪಿಗೆಯುಳ್ಳವರು "ಹೌದು" ಎಂದು ಹೇಳಬೇಕೆಂಬುದಾಗಿಯೂ ಮತ್ತು ಅದಕ್ಕೆ ವಿರೋಧವಾಗಿರುವವರು "ಇಲ್ಲ" ಎಂದು ಹೇಳಬೇಕೆಂಬುದಾಗಿಯೂ ತಿಳಿಸತಕ್ಕದ್ದು.

(5) ಒಂದು ಪ್ರಶ್ನೆಯ ತೀರ್ಮಾನದ ಸಂಬಂಧದಲ್ಲಿ ಅಧ್ಯಕ್ಷರ ಅಭಿಪ್ರಾಯವನ್ನು ಪುನಃ ಪ್ರತಿಭಟಿಸಿದರೆ, ಅವರು ತಾವು ಯುಕ್ತವೆಂದು ಭಾವಿಸಿದರೆ "ಹೌದು" ಎನ್ನುವ ಅಭಿಪ್ರಾಯವುಳ್ಳ ಮತ್ತು "ಇಲ್ಲ" ಎನ್ನುವ ಅಭಿಪ್ರಾಯವುಳ್ಳ ಸದಸ್ಯರು ಕ್ರಮವಾಗಿ ತಮ್ಮ ತಮ್ಮ ಸ್ಥಳಗಳಲ್ಲಿ ಎದ್ದು ಸಭೆಯ ತೀರ್ಮಾನವನ್ನು ಪ್ರಕಟಿಸಬಹುದು. ಅಂಥ ಸಂದರ್ಭಗಳಲ್ಲಿ ಮತಗಳನ್ನು ಕೊಟ್ಟವರ ಹೆಸರುಗಳನ್ನು ದಾಖಲು ಮಾಡತಕ್ಕದ್ದಲ್ಲ.

(6) ಮೇಲಿನ (3)ನೆಯ ಉಪನಿಯಮದಲ್ಲಿ ವಿಧೇಯಕ ಮಾಡಿರುವಂಥ ಕಾರ್ಯ ವಿಧಾನವನ್ನು ಅಧ್ಯಕ್ಷರು ಅನುಸರಿಸದಿದ್ದಲ್ಲಿ, ಅವರು ತಾವು ತೀರ್ಮಾನಿಸಬಹುದಾದಂಥ ಇತರ ಯಾವುದೇ ವಿಧಾನದಲ್ಲಿ ವಿಷಯದ ಪರವಾಗಿಯೂ ಮತ್ತು ವಿಷಯಕ್ಕೆ ವಿರುದ್ಧವಾಗಿಯೂ ಎಷ್ಟು ಮಂದಿ ಮತವುಳ್ಳವರಾಗಿದ್ದಾರೆಂಬುದನ್ನು ತಿಳಿಯಬೇಕೆಂದು ಆದೇಶಿಸತಕ್ಕದ್ದು.

ಸದಸ್ಯರುಗಳನ್ನು ಸಭೆಯಿಂದ ಹೊರಕ್ಕೆ ಕಳುಹಿಸುವುದು ಮತ್ತು ಕೆಲಕಾಲ ಸಭೆಗೆ ಬರದಂತೆ ಆಜ್ಞೆ ಮಾಡುವುದು.

**347. ಸದಸ್ಯರು ಸಭೆಯಿಂದ ಹೊರಕ್ಕೆ ಹೋಗಬೇಕೆಂದು ಆದೇಶ ಮಾಡುವುದು:** ಅಧ್ಯಕ್ಷರು ಯಾವ ಸದಸ್ಯರ ನಡವಳಿಕೆಯು ತುಂಬಾ ಅಸಭ್ಯವಾಗಿದೆಯೆಂದು ಭಾವಿಸುತ್ತಾರೋ, ಅಂಥ ಸದಸ್ಯರಿಗೆ ಸದನದಿಂದ ಕೂಡಲೇ ಹೊರಗೆ ಹೋಗುವಂತೆ ಆದೇಶಿಸಬಹುದು ಮತ್ತು ಆ ರೀತಿ ಹೋಗಬೇಕೆಂದು ಆದೇಶ ಮಾಡಿದ ಯಾರೇ ಸದಸ್ಯರು ಕೂಡಲೇ ಸಭೆಯಿಂದ ಹೊರಗೆ ಹೋಗಬೇಕು ಮತ್ತು ಆ ದಿನದ ಉಪವೇಶನದ ಉಳಿದ ಸಮಯದಲ್ಲಿ ಅವರು ಗೈರುಹಾಜರಾಗತಕ್ಕದ್ದು.

**348. ಸದಸ್ಯರನ್ನು ಕೆಲಕಾಲ ಸಭೆಗೆ ಬರದಂತೆ ತಡೆ ಹಿಡಿಯುವುದು :** (1) ಅಧ್ಯಕ್ಷರು ತಾವು ಅವಶ್ಯವೆಂದು ಭಾವಿಸಿದ ಪಕ್ಷದಲ್ಲಿ ಯಾವ ಸದಸ್ಯರು ಅಧ್ಯಕ್ಷರ ಅಧಿಕಾರದ ವಿಷಯದಲ್ಲಿ ಲಕ್ಷ್ಯವಿಲ್ಲದೆ ತಿರಸ್ಕಾರ ಮಾಡುತ್ತಾರೋ ಅಥವಾ ಸದನದ ಕಾರ್ಯಕಲಾಪಗಳಿಗೆ ಒಂದೇ ಸಮನಾಗಿ ಮತ್ತು ಉದ್ದೇಶಪೂರ್ವಕವಾಗಿ ಅಡಚಣೆಯನ್ನುಂಟು ಮಾಡುವುದರ ಮೂಲಕ ಸದನದ ನಿಯಮಗಳಿಗೆ ವಿರೋಧವಾಗಿ ವರ್ತಿಸುತ್ತಾರೋ ಆ ಸದಸ್ಯರ ಹೆಸರೆತ್ತಿ ಸದನಕ್ಕೆ ತಿಳಿಸಬಹುದು.

(2) ಆ ರೀತಿ, ಅಧ್ಯಕ್ಷರು ಒಬ್ಬ ಸದಸ್ಯರ ಹೆಸರೆತ್ತಿ ತಿಳಿಸಿದ ಪಕ್ಷದಲ್ಲಿ ಆ ಕೂಡಲೇ ಅವರು ಹೆಸರೆತ್ತಿ ತಿಳಿಸಿದ ಸದಸ್ಯರು ಅಧಿವೇಶನದ ಉಳಿದ ಕಾಲದಲ್ಲಿ (ಅಥವಾ ಅಧ್ಯಕ್ಷರು ನಿರ್ದಿಷ್ಟಗೊಳಿಸಬಹುದಾದಂಥ ಅಧಿವೇಶನದ ಒಂದು ಭಾಗದವರೆಗೆ) ಸದನಕ್ಕೆ ಬರಬಾರದಂತೆ ಪ್ರಸ್ತಾವವನ್ನು ಮಂಡಿಸಬೇಕು.

ಆದರೆ, ಸದನವು ಯಾವ ಕಾಲದಲ್ಲಾದರೂ, ಒಂದು ಪ್ರಸ್ತಾವವನ್ನು ಸೂಚಿಸಿದ ಮೇಲೆ ಅಂಥ ನಿಷೇಧವನ್ನು ಮುಕ್ತಾಯಗೊಳಿಸಬೇಕೆಂದು ನಿರ್ಣಯ ಮಾಡಬಹುದು.

(3) ಈ ನಿಯಮದ ಮೇರೆಗೆ ಸದನಕ್ಕೆ ಬರದಂತೆ ನಿಷೇಧಿಸಲ್ಪಟ್ಟ ಸದಸ್ಯರು, ಆ ಕೂಡಲೇ ಸದನದ ಆವರಣವನ್ನು ಬಿಟ್ಟು ಹೊರಟುಹೋಗತಕ್ಕದ್ದು.

**349. ಸದನವು ಕೆಲಕಾಲ ನಡೆಯದಂತೆ ಮುಂದಕ್ಕೆ ಹಾಕುವುದಕ್ಕೆ ಅಥವಾ ಉಪವೇಶನವು ಕೆಲಕಾಲ ನಡೆಯದಂತೆ ಆದೇಶ ಮಾಡುವುದಕ್ಕೆ ಅಧ್ಯಕ್ಷರ ಅಧಿಕಾರ:** ಸದನದಲ್ಲಿ ಭಾರಿ ಗೊಂದಲವಿದ್ದ ಪಕ್ಷದಲ್ಲಿ ಅಧ್ಯಕ್ಷರು ಸದನವು ಕೆಲಕಾಲ ನಡೆಯದಂತೆ ಮುಂದಕ್ಕೆ ಹಾಕುವುದು ಅಥವಾ ಉಪವೇಶನವು ಕೊಂಚ ಕಾಲ ನಡೆಯದಂತೆ ತಡೆಹಿಡಿಯುವುದು ಅವಶ್ಯವೆಂದು ಭಾವಿಸಿದ ಪಕ್ಷದಲ್ಲಿ, ಆ ರೀತಿ ಸದನವನ್ನು ಮುಂದಕ್ಕೆ ಹಾಕಬಹುದು ಅಥವಾ ಉಪವೇಶನವನ್ನು ಕೆಲಕಾಲ ನಡೆಯದಂತೆ ಮಾಡಬಹುದು.

**350. ಕ್ರಿಯಾಲೋಪಗಳು ಮತ್ತು ಅವುಗಳ ಬಗ್ಗೆ ನಿರ್ಣಯಗಳು:** (1) ಒಂದು ಕ್ರಿಯಾಲೋಪವು ಈ ನಿಯಮಗಳ ಅರ್ಥಾನ್ವಯಕ್ಕೆ ಅಥವಾ ಈ ನಿಯಮಗಳನ್ನು ಜಾರಿಗೆ ತರುವುದಕ್ಕೆ ಇಲ್ಲವೇ ವಿಧಾನಸಭೆಯ ಕಾರ್ಯಕಲಾಪಗಳನ್ನು ಕ್ರಮಪಡಿಸುವುದಕ್ಕಿರುವಂತೆ ಸಂವಿಧಾನದ ಅನುಚ್ಛೇದಗಳ ಅರ್ಥಾನ್ವಯಕ್ಕೆ ಅಥವಾ ಅನುಚ್ಛೇದಗಳನ್ನು ಜಾರಿಗೆ ತರುವುದಕ್ಕೆ ಸಂಬಂಧಪಟ್ಟಿರತಕ್ಕದ್ದು ಮತ್ತು ಅಧ್ಯಕ್ಷರು ಗಮನಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿರುವಂಥ ವಿಷಯವನ್ನು ಸದನದ ಗಮನಕ್ಕೆ ತರತಕ್ಕದ್ದು.

(2) ಸದನದ ಮುಂದೆ ತತ್ಕಾಲದಲ್ಲಿ ಬಂದಿರುವ ಕಾರ್ಯಕಲಾಪದ ಸಂಬಂಧದಲ್ಲಿ ಒಂದು ಕ್ರಿಯಾಲೋಪವನ್ನು ತರಬಹುದು.

ಆದರೆ, ಒಂದು ಕ್ರಿಯಾಲೋಪವು ಸದನದ ಶಿಸ್ತುಪಾಲನೆಯನ್ನು ಮಾಡುವುದಕ್ಕಾಗಲಿ ಅಥವಾ

ಸದನದ ಮುಂದೆ ಬಂದಿರುವ ಕಾರ್ಯಕಲಾಪಗಳನ್ನು ವ್ಯವಸ್ಥೆಗೊಳಿಸುವುದಕ್ಕಾಗಲಿ ಸಂಬಂಧಪಟ್ಟಿದ್ದರೆ ಕಾರ್ಯಕಲಾಪಗಳ ಪೈಕಿ ಒಂದು ಬಾಬು ಮುಗಿದು ಇನ್ನೊಂದು ಬಾಬು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಬರುವ ಮಧ್ಯ ಕಾಲಾವಧಿಯಲ್ಲಿ ಒಬ್ಬರು ಸದಸ್ಯರು ಒಂದು ಕ್ರಿಯಾಲೋಪವನ್ನೆತ್ತುವುದಕ್ಕೆ ಅಧ್ಯಕ್ಷರು ಅನುಮತಿ ಕೊಡಬಹುದು.

(3) ಮೇಲಿನ (1)ನೆಯ ಮತ್ತು (2)ನೆಯ ಉಪನಿಯಮಗಳಲ್ಲಿ ತಿಳಿಸಿರುವಂಥ ಷರತ್ತುಗಳಿಗೊಳಪಟ್ಟು ಒಬ್ಬ ಸದಸ್ಯರು ಒಂದು ಕ್ರಿಯಾಲೋಪವನ್ನು ರಚಿಸಿ ಮಂಡಿಸಬಹುದು. ಹಾಗೆ ಮಂಡಿಸಿರುವುದು ಕ್ರಿಯಾಲೋಪ ಹೌದೇ ಎಂಬುದನ್ನು ಅಧ್ಯಕ್ಷರು ತೀರ್ಮಾನಿಸತಕ್ಕದ್ದು ಮತ್ತು ಅದು ಕ್ರಿಯಾಲೋಪವಾಗಿದ್ದರೆ ಅದರ ವಿಷಯದಲ್ಲಿ ತಮ್ಮ ನಿರ್ಣಯವನ್ನು ಕೊಡತಕ್ಕದ್ದು, ಅಂಥ ನಿರ್ಣಯ ಅಂತಿಮವಾಗಿರತಕ್ಕದ್ದು.

(4) ಕ್ರಿಯಾಲೋಪದ ಮೇಲೆ ಯಾವ ಚರ್ಚೆಗೂ ಅವಕಾಶಕೊಡತಕ್ಕುದಲ್ಲ ಆದರೆ ಅಧ್ಯಕ್ಷರು, ತಮಗೆ ಯುಕ್ತವೆಂದು ಕಂಡುಬಂದರೆ, ತಮ್ಮ ನಿರ್ಣಯವನ್ನು ಕೊಡುವುದಕ್ಕಿಂತ ಮುಂಚಿತವಾಗಿ ಸದಸ್ಯರುಗಳ ಹೇಳಿಕೆಗಳನ್ನು ಕೇಳಬಹುದು.

(5) ಕ್ರಿಯಾಲೋಪವು ಹಕ್ಕುಬಾಧ್ಯತೆಗಳಿಗೆ ಸಂಬಂಧಪಟ್ಟ ಸೂಚನೆಯಾಗುವುದಿಲ್ಲ.

(6) ಒಬ್ಬ ಸದಸ್ಯರು ಈ ಕೆಳಕಂಡ ವಿಷಯಗಳಿಗೆ ಸಂಬಂಧಪಟ್ಟಂತೆ ಕ್ರಿಯಾಲೋಪವನ್ನು ಎತ್ತಕೂಡದು.

(ಎ) ಮಾಹಿತಿಯನ್ನು ಕೇಳುವುದಕ್ಕಾಗಲಿ, ಅಥವಾ

(ಬಿ) ತಮ್ಮ ಅಭಿಪ್ರಾಯವನ್ನು ವಿವರಿಸುವುದಕ್ಕಾಗಲಿ, ಅಥವಾ

(ಸಿ) ಯಾವ ಪ್ರಸ್ತಾವದ ಮೇಲೆ ಆಗಲಿ ಬಂದಿರುವ ಒಂದು ಪ್ರಶ್ನೆಯು ವಿಧಾನಸಭೆಯ ಮುಂದೆ ಮಂಡಿಸುತ್ತಿರುವಾಗ ಆಗಲಿ, ಅಥವಾ

(ಡಿ) ಕೇವಲ ಊಹೆಗೆ ಸಂಬಂಧಪಟ್ಟಂತೆ ಅಥವಾ

(ಇ) ಮತಗಳ ಎಣಿಕೆಯಾಗುವುದೆಂದು ಸೂಚಿಸುವ ಗಂಟೆಗಳ ಶಬ್ದವಾಗಲಿಲ್ಲವೆಂದು ಅಥವಾ ಆ ಶಬ್ದಗಳು ಕೇಳಿಸಲಿಲ್ಲವೆಂದು ಒಂದು ಕ್ರಿಯಾಲೋಪವನ್ನು ಎತ್ತಕೂಡದು.

**351. ಕ್ರಿಯಾಲೋಪವಲ್ಲದ ಒಂದು ವಿಚಾರವನ್ನೆತ್ತುವುದು :** ಒಂದು ಕ್ರಿಯಾ ಲೋಪವಲ್ಲದಂಥ ಯಾವ ವಿಷಯವನ್ನಾಗಲಿ ವಿಧಾನಸಭೆಯು ಗಮನಕ್ಕೆ ತರಬೇಕೆಂದು ಇಚ್ಛಿಸುವ ಸದಸ್ಯರು ವಿಧಾನಸಭೆಯಲ್ಲಿ ತಾವು ಎತ್ತಬೇಕೆಂದಿರುವ ವಿಷಯವನ್ನು, ಅದನ್ನು ಸೂಚಿಸಬೇಕೆಂದಿರುವ ಕಾರಣಗಳೊಡನೆ ಸಂಕ್ಷೇಪವಾಗಿ ತಿಳಿಸಿ ಲಿಖಿತ ಮೂಲಕವಾಗಿ ಕಾರ್ಯದರ್ಶಿಯವರಿಗೆ "ಸೂಚನಾಪತ್ರ" ವನ್ನು ಕೊಡಬೇಕು ಅಧ್ಯಕ್ಷರು

ಅನುಮತಿ ಕೊಟ್ಟಮೇಲೆ ಮಾತ್ರವೇ ಅವರು ಅದನ್ನು ಸೂಚಿಸುವುದಕ್ಕೆ ಅವರಿಗೆ ಅನುಮತಿ ದೊರೆಯಬೇಕು ಮತ್ತು ಅಧ್ಯಕ್ಷರು ಗೊತ್ತುಮಾಡಬಹುದಾದ ಕಾಲದಲ್ಲಿ ಮತ್ತು ಆ ದಿನ ಮಾತ್ರ ಅವರು ಅದನ್ನು ಸೂಚಿಸುವುದಕ್ಕೆ ಅವರಿಗೆ ಅನುಮತಿ ದೊರೆಯಬೇಕು.

*****

# ತೀರ್ಪುಗಾರರ ಮಾದರಿ ಅಂಕಪಟ್ಟಿ

## ದಿನಾಂಕ . . . . 2018–19 ರ ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯ ಅಂಕಪಟ್ಟಿ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ವಿದ್ಯಾರ್ಥಿ ಹಾಗೂ ಶಾಲೆಯ ಹೆಸರು ಹಾಗೂ ತರಗತಿ | ಶಿಸ್ತು ಮತ್ತು ಸಭ್ಯತೆ (ಗರಿಷ್ಟ 10 ಅಂಕಗಳು) | ಸಂಸದೀಯ ಕಾರ್ಯ ವಿಧಾನದ ಪಾಲನೆ (ಗರಿಷ್ಟ 20 ಅಂಕಗಳು) | ಪ್ರಶ್ನೆಗಳಿಗಾಗಿ ವಿಷಯಗಳ ಆಯ್ಕೆ ಹಾಗೂ ಅವುಗಳಿಗೆ ನೀಡಿದ ಉತ್ತರಗಳ ಗುಣಮಟ್ಟ (ಗರಿಷ್ಟ 20 ಅಂಕಗಳು) | ಚರ್ಚೆಗಳಿಗೆ ವಿಷಯಗಳ ಆಯ್ಕೆ (ಗರಿಷ್ಟ 10 ಅಂಕಗಳು) | ಮಾಡಿದ ಭಾಷಣದ ಶೈಲಿ ಅಥವಾ ಮೌಲ್ಯ ಚರ್ಚೆಗಳ ಗುಣಮಟ್ಟ (ಗರಿಷ್ಟ 30 ಅಂಕಗಳು) | ಒಟ್ಟಾರೆ ಸಾಧನೆಯ ಸಾಮಾನ್ಯ ಮೌಲ್ಯ ಮಾಪನ (ಗರಿಷ್ಟ 10 ಅಂಕಗಳು) | ಒಟ್ಟು 100 ಅಂಕಗಳು |
|---|---|---|---|---|---|---|---|---|---|
| 1 | | | | | | | | | |
| 2 | | | | | | | | | |

# ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧಾರ್ಥಿಗಳ ಪಟ್ಟಿ

| ಕ್ರಮ ಸಂಖ್ಯೆ<br>ಶಾಲೆಯ ಹೆಸರು | ಜಿಲ್ಲೆಯ ಹೆಸರು | ಭಾಗವಹಿಸಿದ ಸ್ಪರ್ಧಾರ್ಥಿಗಳ ಹೆಸರು |
|---|---|---|
| 1 | | |
| 2 | | |
| 3 | | |
| 4 | | |
| 5 | | |
| ಶಾಲೆಗಳ ಒಟ್ಟು ಸಂಖ್ಯೆ | | |
| ವಿದ್ಯಾರ್ಥಿಗಳ ಒಟ್ಟು ಸಂಖ್ಯೆ | | |

ಜಿಲ್ಲೆಗಳ ವಿವರ

| ಸ್ಪರ್ಧೆಯಲ್ಲಿ ವೈಯಕ್ತಿಕ ಬಹುಮಾನ ಪಡೆದವರ ಸಂಖ್ಯೆ | ಸ್ಪರ್ಧೆಯಲ್ಲಿ ಮೊದಲ ಐದು ಸ್ಥಾನ ಗಳಿಸಿದ ವಿದ್ಯಾರ್ಥಿಗಳ ಹೆಸರು | ಪಡೆದ ಅಂಕಗಳು | ಶಾಲೆಯ ಹೆಸರು |
|---|---|---|---|
| | | | |
| | | | |
| | | | |
| | | | |
| | | | |